# ಕರ್ನಾಟಕ ನೀರಾವರಿ ಅಧಿನಿಯಮ, 1965

**(ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ 25, 2006, ಭಾಗ – IVಎ, 828 ರಿಂದ 880ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I

### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ಅಧಿಕಾರಿಗಳ ನೇಮಕಾತಿ


### ಅಧ್ಯಾಯ– II

### ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ


4. ಸರ್ಕಾರದ ಸಮ್ಮತಿ ಮತ್ತು ಷರತ್ತುಗಳಿಗೊಳಪಟ್ಟಂತೆ ಮಾತ್ರವೇ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ
5. ನೀರಾವರಿ ಕಾಮಗಾರಿಗಳ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಬೇಕಾದಾಗ ಹೊರಡಿಸಬೇಕಾದ ಅಧಿಸೂಚನೆ
6. ವಿಚಾರಣೆಗಾಗಿ ಪ್ರವೇಶ
7. ಸರಬರಾಜನ್ನು ತಪಾಸಣೆ ಮಾಡುವ ಮತ್ತು ವಿನಿಯಮಿಸುವ ಅಧಿಕಾರ
8. ದುರಸ್ತಿ ಮಾಡಲು ಮತ್ತು ಅಪಘಾತ ತಡೆಯಲು ಪ್ರವೇಶಾಧಿಕಾರ
9. ಅನುಭೋಗದಾರನಿಗೆ ನೋಟೀಸು
10. ಕಾಲುವೆಗಳನ್ನು ದಾಟುವ ಸಾಧನಗಳನ್ನು ಒದಗಿಸುವುದು ಮತ್ತು ನೀರು ಹರಿವಿನ ಅಡಚಣೆಗಳನ್ನು ನಿವಾರಿಸುವುದು
11. ಸರ್ಕಾರವು ಕೆಲವು ಪರಿಮಿತಿಗಳೊಳಗೆ ನದಿಗಳು, ಇತ್ಯಾದಿಗಳಿಗೆ ಇರುವ ಅಡ್ಡಿಗಳನ್ನು ನಿಷೇಧಿಸುವುದು
12. ನೀರಾವರಿ ಅಧಿಕಾರಿಯು ಅಡಚಣೆಯನ್ನು ಉಂಟುಮಾಡುವ ವ್ಯಕ್ತಿಗೆ ಆದೇಶವನ್ನು ಹೊರಡಿಸುವುದು
13. ನೀರಾವರಿ ಅಧಿಕಾರಿಯು ಅಡೆತಡೆಯನ್ನು ತೆಗೆದುಹಾಕಲು ವ್ಯವಸ್ಥೆ ಮಾಡುವುದು
14. ನಾಲಾ ಕಾಮಗಾರಿ ನಿರ್ಮಾಣ


### ಅಧ್ಯಾಯ– III

### ಹೊಲ-ಕಾಲುವೆಗಳು


15. ಯಾವುದೇ ಪ್ರದೇಶದಲ್ಲಿ ಹೊಲ-ಕಾಲುವೆಗಳ ಅಗತ್ಯತೆಯನ್ನು ಮತ್ತು ಅವುಗಳ ಪಂಕ್ತೀಕರಣವನ್ನು ನಿರ್ಧರಿಸುವುದು
16. ಜಿಲ್ಲಾಧಿಕಾರಿಯು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು
17. ಸ್ವಾಧೀನಪಡಿಸಿಕೊಂಡಂತಹ ಭೂಮಿ ಸರ್ಕಾರದ ಸ್ವತ್ತಾಗಿರುವುದು
18. [XXX
19. XXX]
20. ಹೊಲ-ಕಾಲುವೆಗಳ ಬಳಕೆದಾರರ ಹೊಣೆಗಾರಿಕೆಗಳು

21. [XXX

22. XXX

23. XXX]

24. ಕಾಮಗಾರಿಯನ್ನು ಮಾಡಲು ಅಥವಾ ಹೊಲ-ಕಾಲುವೆಯನ್ನು ದುರಸ್ತಿ ಮಾಡಲು ಬಳಕೆದಾರನು ತಪ್ಪಿದರೆ, ಅದನ್ನು ನೀರಾವರಿ ಅಧಿಕಾರಿಯು ಮಾಡುವುದು

25. [XXX]

26. ಸ್ವಾಧೀನಪಡಿಸಿಕೊಂಡ ಭೂಮಿಗಳಲ್ಲಿ ಹೊಲ-ಕಾಲುವೆಯ ನಿರ್ಮಾಣ

## ಅಧ್ಯಾಯ- IV

### ನೀರಾವರಿಯ ವಿನಿಯಮನ

27. ನೀರಾವರಿ ಕಾಮಗಾರಿಗಳಿಂದ ಒದಗುವ ನೀರು ಸರಬರಾಜು ವಿನಿಯಮನ

28. ನೀರಾವರಿ ಕಾಮಗಾರಿಯಿಂದ ನೀರು ಬಳಸಲು ಅನುಮತಿ ಕೋರಿ ಅರ್ಜಿ

29. ನೀರಿನ ಸರಬರಾಜನ್ನು ನಿಲ್ಲಿಸುವುದು

30. ಒಂದು ಅಥವಾ ಹೆಚ್ಚಿನ ಬೆಳೆಗಳ ನೀರಾವರಿಗಾಗಿ ನೀರಿನ ಸರಬರಾಜು

31. ಜಮೀನುಗಳಲ್ಲಿ [XXX] ಸಾಗುವಳಿಯನ್ನು ವಿನಿಯಮಿಸುವುದು

32. ನೀರಾವರಿ ಪ್ರದೇಶದಲ್ಲಿ ಬೆಳೆಯಬೇಕಾದ ಬೆಳೆಯ ಬಗೆಯನ್ನು ಮತ್ತು ಅಂತಹ ಬೆಳೆಯ ಬಿತ್ತನೆಯ ಅವಧಿಯನ್ನು ನಿರ್ಧರಿಸುವ ಅಧಿಕಾರ

## ಅಧ್ಯಾಯ- V

### ಪರಿಹಾರದ ಐತೀರ್ಪು

33. ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿದ ಪರಿಣಾಮವಾಗಿ ಉಂಟಾದ ಹಾನಿಗೆ ಪರಿಹಾರ

34. ಕ್ಲೇಮುಗಳಿಗೆ ಕಾಲ ಪರಿಮಿತಿ

35. ಜಮೀನು, ಮುಂತಾದವುಗಳಲ್ಲಿ ಪ್ರವೇಶ ಮಾಡುವ ಮೂಲಕ ಉಂಟಾಗುವ ಹಾನಿಗೆ ನಷ್ಟ ಪರಿಹಾರ

36. ಕ್ಲೇಮುಗಳನ್ನು ಜಿಲ್ಲಾಧಿಕಾರಿಯ ಮುಂದೆ ಇಡುವುದು

37. ಮೇಲ್ಮನವಿ

38. ನಷ್ಟ ಪರಿಹಾರವನ್ನು ಯಾವಾಗ ಸಂದಾಯ ಮಾಡಬೇಕು ಮತ್ತು ಸಂದಾಯ ಮಾಡಬೇಕಾದ ಬಡ್ಡಿ

39. ಬಿಟ್ಟುಬಿಡಲಾಗಿದೆ

## ಅಧ್ಯಾಯ- VI

### ತುರ್ತು ಪರಿಸ್ಥಿತಿಗಳಲ್ಲಿ ಕೆಲಸಗಾರರನ್ನು ದೊರಕಿಸಿಕೊಳ್ಳುವುದು

40. ತುರ್ತು ಕಾಮಗಾರಿ ಅಥವಾ ದುರಸ್ತಿ ಕೆಲಸಗಳು, ಇತ್ಯಾದಿಗಳಿಗೆ ಕೆಲಸಗಾರರನ್ನು ಕಡ್ಡಾಯವಾಗಿ ದೊರಕಿಸಿಕೊಳ್ಳುವುದು

41. ಕಡ್ಡಾಯವಾಗಿ ಕರೆಸಿಕೊಂಡ ವ್ಯಕ್ತಿಗಳಿಗೆ ಹಣ ಸಂದಾಯ

42. 41ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ವಿರುದ್ಧ ಮೇಲ್ಮನವಿಗಳು

## ಅಧ್ಯಾಯ- VII

### ನೀರಾವರಿ ಕಾಮಗಾರಿಗಳ ನಿರ್ವಹಣೆ

43. ನೀರಾವರಿ ಕಾಮಗಾರಿಗಳ ನಿರ್ವಹಣೆಯನ್ನು ವಹಿಸಿಕೊಳ್ಳಲು ಸರ್ಕಾರದ ಅಧಿಕಾರ

44. ನಿರ್ವಹಣಾ ಉಪಕರವನ್ನು ವಿಧಿಸುವುದು

45. ತುಂಗಭದ್ರಾ ಮಂಡಲಿ, ಮುಂತಾದವುಗಳಿಗೆ ಸಂದಾಯ

## ಅಧ್ಯಾಯ- VIII

### ನೀರಾವರಿ ಕಾಮಗಾರಿಗಳ ರಕ್ಷಣೆ

46. ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ ಪರಿಮಿತಿ

47. ಅಡ್ಡ ಹರಿಗಾಲುವೆ ಕಾಮಗಾರಿಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ

48. ಕಾಲುವೆಗಳ ಸುರಕ್ಷತೆಗೆ ಬಾಧಕವಾಗುವ ಕಾಮಗಾರಿಗಳ ಸಂಬಂಧದಲ್ಲಿ ಒಡೆಯರ ಹೊಣೆಗಾರಿಕೆಗಳು

49. ನೀರಾವರಿ ಕಾಮಗಾರಿಯ ಸಮೀಪ ಗಣಿಗಾರಿಕೆ ಅಥವಾ ಕಲ್ಲುಗಣಿಯ ಕಾರ್ಯಾಚರಣೆ

50. ನೀರಾವರಿ ಕಾಮಗಾರಿ ಸಮೀಪ ಬಾವಿಗಳನ್ನು ತೋಡುವುದು

51. ತೂಬು ದ್ವಾರಗಳು, ಮುಂತಾದವುಗಳ ಕಾರ್ಯಾಚರಣೆ

52. ಮೀನು ಹಿಡಿಯುವುದು ಮತ್ತು ದೋಣಿ ನಡೆಸುವುದು, ಇತ್ಯಾದಿ

53. ಕಾಲುವೆಯಿಂದ ನೀರು ಹೊರಬಿಡುವುದನ್ನು ನಿಷೇಧಿಸುವುದು

54. ನಾಲೆಯಲ್ಲಿ ಅಥವಾ ಅದರ ಸಮೀಪದಲ್ಲಿ ಗಣಿ ಉತ್ಪನ್ನಗಳನ್ನು ಶೇಖರಿಸುವುದಕ್ಕೆ ನಿಷೇಧ

## ಅಧ್ಯಾಯ- IX

### ದಂಡನೆಗಳು ಮತ್ತು ಕಾರ್ಯವಿಧಾನ

55. ಅಧಿನಿಯಮದ ಮೇರೆಗಿನ ಅಪರಾಧಗಳು

56. 55ನೇ ಪ್ರಕರಣದ ಮೇರೆಗೆ ಅಪರಾಧ ನಿರ್ಣೀತರಾದ ವ್ಯಕ್ತಿಗಳು ಹಾನಿ, ಮುಂತಾದವುಗಳ ದುರಸ್ತಿಗೆ ಬದ್ಧರಾಗಿರತಕ್ಕದ್ದು

57. ದುಷ್ಪ್ರೇರಣೆ

58. ಕಿರುಕುಳ ಕೊಡಲು ಅಧಿಕಾರ ಚಲಾಯಿಸಿದ್ದಕ್ಕೆ ಶಿಕ್ಷೆ

59. ಇತರೆ ಕಾನೂನುಗಳ ಮೇರೆಗೆ ಶಿಕ್ಷೆಯನ್ನು ಪ್ರತಿಷೇಧಿಸದಿರುವುದು

60. ಈ ಅಧಿನಿಯಮದ ಮೇರೆಗಿನ ಅಪರಾಧಗಳು ಸಂಜ್ಞೇಯವಾಗಿರುವುದು

60ಎ. ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು

61. ಕಾಮಗಾರಿಗೆ ಆಗುವ ಅಡಚಣೆ ಅಥವಾ ಹಾನಿಯನ್ನು ನಿವಾರಿಸುವ ಅಧಿಕಾರ

62. ಜುಲ್ಮಾನೆಯನ್ನು ಮಾಹಿತಿದಾರನಿಗೆ ಬಹುಮಾನವಾಗಿ ಕೊಡುವುದು

## ಅಧ್ಯಾಯ- X

### ನೀರುಬಳಕೆದಾರರ ಸಂಘದ ಮತ್ತು ನೀರು ಬಳಕೆದಾರರ ಅಸೋಸಿಯೇಷನ್ನಿನ ಪ್ರಕಾರ್ಯಗಳು, ಇತ್ಯಾದಿ

62ಎ. ನೀರುಬಳಕೆದಾರರ ಸಂಘದ ಪ್ರಕಾರ್ಯಗಳು

62ಎಎ. ನೀರು ಬಳಕೆದಾರರ ಅಸೋಸಿಯೇಷನ್ನಿನ ಪ್ರಕಾರ್ಯಗಳು

62ಬಿ. ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಳದ ಪ್ರಕಾರ್ಯಗಳು

62ಸಿ. ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಳದ ಪ್ರಕಾರ್ಯಗಳು

62ಡಿ. ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳ

62ಇ. ಇತರ ಕಾನೂನುಗಳ ಪರಿಣಾಮ

62ಎಫ್. ಕೆಲವು ಯೋಜನೆಗಳಿಗೆ ವಿನಾಯಿತಿ ನೀಡುವ ಅಧಿಕಾರ

**ಅಧ್ಯಾಯ– XI**

**ಇತರ ವಿಷಯಗಳು**

63. ಅಪರಾಧಿ ಯಾರೆಂದು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ ಹಾನಿಯ ದುರಸ್ತಿ ವೆಚ್ಚವನ್ನು ವಸೂಲಿ ಮಾಡುವುದು
64. ಅನಧಿಕೃತವಾಗಿ ನೀರನ್ನು ಬಳಸುತ್ತಿರುವ ವ್ಯಕ್ತಿಯನ್ನು ಕಂಡುಹಿಡಿಯಲಾಗದಿದ್ದಾಗ ಹೊಣೆಗಾರಿಕೆ
65. ಈ ಅಧಿನಿಯಮದ ಮೇರೆಗಿನ ಆದೇಶಗಳ ವಿರುದ್ಧ ಮೇಲ್ಮನವಿಗಳು
66. ಪುನರೀಕ್ಷಣೆಯ ಅಧಿಕಾರ
67. ಸಾಕ್ಷಿಗಳನ್ನು ಕರೆಕಳಿಸುವ ಮತ್ತು ಪರೀಕ್ಷಿಸುವ ಅಧಿಕಾರ
68. ನೋಟೀಸುಗಳನ್ನು ಜಾರಿ ಮಾಡುವುದು
69. ಕೆಲ ವ್ಯವಹರಣೆಗಳು, ಇತ್ಯಾದಿಗಳ ಪ್ರತಿಷೇಧ
70. ಕಂಪನಿಗಳಿಂದ ಅಪರಾಧಗಳು
71. ನಿಯಮ ರಚನಾಧಿಕಾರ
72. ನಿರಸನ ಮತ್ತು ಉಳಿಸುವಿಕೆಗಳು.

* * *

**ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆಗಳು**

**I**

**1965ರ ಕರ್ನಾಟಕ ಅಧಿನಿಯಮ 16.–** ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ನಿಯಂತ್ರಣ ಹಾಗೂ ನೀರಾವರಿಗೆ ಸಂಬಂಧಿಸಿದ ಇತರ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ವಿವಿಧ ಅಧಿನಿಯಮಿತಿಗಳು ಈಗ ಜಾರಿಯಲ್ಲಿವೆ. ಕರ್ನಾಟಕ ನೀರಾವರಿ (ಅಭಿವೃದ್ಧಿ ತೆರಿಗೆ ಮತ್ತು ನೀರಿನ ದರವನ್ನು ವಿಧಿಸುವುದು) ಅಧಿನಿಯಮವನ್ನು 1957ರಲ್ಲಿ ವಿಧಾನ ಮಂಡಲವು ಅನುಮೋದಿಸಿತು. ಈ ಅಧಿನಿಯಮದಲ್ಲಿ ಅಭಿವೃದ್ಧಿ ತೆರಿಗೆ ಮತ್ತು ನೀರಿನ ದರ ವಿಧಿಸುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ವಿವಿಧ ಅಧಿನಿಯಮಿತಿಗಳಲ್ಲಿದ್ದ ಎಲ್ಲ ಉಪಬಂಧಗಳನ್ನು ಕ್ರೋಡೀಕರಿಸಿದೆ. ಪ್ರಸ್ತುತ ವಿಧೇಯಕವು, ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿರುವ ನೀರಾವರಿ ಮತ್ತು ಇತರ ಸಂಬಂಧಪಟ್ಟ ಅಧಿನಿಯಮಗಳ ಉಳಿದ ಎಲ್ಲ ಉಪಬಂಧಗಳನ್ನು ಕ್ರೋಢೀಕರಿಸಲು ಉದ್ದೇಶಿಸಿದೆ.

ವಿಧೇಯಕವು, ಇತರೆ ವಿಷಯಗಳೊಂದಿಗೆ, ನೀರಾವರಿ ಕಾಮಗಾರಿಗಳಿಂದ ನೀರಿನ ನಿಯಂತ್ರಣಕ್ಕೆ ಉಪಬಂಧ ಕಲ್ಪಿಸುತ್ತದೆ ಮತ್ತು ನೀರಾವರಿ ಕಾಮಗಾರಿಗಳ ಸಮೀಕ್ಷೆ, ತನಿಖೆ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆಯ ಸಂಬಂಧದಲ್ಲಿ ನೀರಾವರಿ ಅಧಿಕಾರಿಗಳಿಗೆ ಕೆಲವು ಅಧಿಕಾರಗಳನ್ನು ನೀಡುತ್ತದೆ. ನೀರಾವರಿ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ, ರೂಢಿಗತ ಹೊಣೆಗಾರಿಕೆಯನ್ನು, ಫಲಾನುಭವಿಗಳು ಈ ಮುಂಚಿನಂತೆ ಪಾಲಿಸುವುದಕ್ಕೆ ಅದರಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಧಿಸೂಚಿತ ಕಾಮಗಾರಿಗಳ ಸುರಕ್ಷೆ ಮತ್ತು ಅಂಥ ಕಾಮಗಾರಿಗಳಿಂದ ನೀರಿನ ಮಿತವ್ಯಯ ಬಳಕೆ ಮತ್ತು ನಿಯಂತ್ರಣ–ಇವುಗಳನ್ನು ಗಮನದಲ್ಲಿರಿಸಿಕೊಂಡು, ರಾಜ್ಯದಾದ್ಯಂತ ಅಧಿಸೂಚಿತ ಕಾಮಗಾರಿಗಳನ್ನು ಸರ್ಕಾರವು ಕೈಗೆತ್ತಿಕೊಳ್ಳುವುದರ ಬಗ್ಗೆ ಉಪಬಂಧ ಕಲ್ಪಿಸಲಾಗಿದೆ. ಈ ಅವಕಾಶವು, ಫಲಾನುಭವಿಗಳಿಂದ ಸಂದಾಯ ಮಾಡಬೇಕಾದ ಒಂದು ಉಪಕರ ಸಂದಾಯಕ್ಕೆ ಒಳಪಟ್ಟಿದೆ ಮತ್ತು ಉಪಕರದ ಹುಟ್ಟುವಳಿಯನ್ನು ಒಂದು ನಿಧಿಯಲ್ಲಿ ಸೇರಿಸಲಾಗುವುದು. ಸದರಿ ನಿಧಿಗೆ, ಸರ್ಕಾರವು, ಸಾಮಾನ್ಯ ರಾಜಸ್ವ ಲೆಕ್ಕದಿಂದ ಶೇಕಡಾ 50 ರಷ್ಟು ಹಣವನ್ನು ವಂತಿಗೆಯಾಗಿ ನೀಡುವುದು. ಈ ನಿಧಿಯನ್ನು, ಕಾಮಗಾರಿಗಳ ನಿರ್ವಹಣೆಗಷ್ಟೇ ಅಲ್ಲದೆ, ನೀರಾವರಿ ಕಾಮಗಾರಿಯಿಂದ ನೀರಿನ ಸೂಕ್ತ ಬಳಕೆಗೆ ಸೌಲಭ್ಯ ಕಲ್ಪಿಸಲು ಮತ್ತು ನೀರಾವರಿ ಪ್ರದೇಶದಲ್ಲಿ ಆಯಕಟ್ಟು ರಸ್ತೆಗಳು, ಅಡಿಗಾಲುವೆಗಳು, ಮುಂತಾದವುಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಬಳಸಲಾಗುವುದು. ವರ್ಷಾಂತ್ಯದಲ್ಲಿ, ಎಲ್ಲ ಅತಿ ಸಣ್ಣ ನೀರಾವರಿ ಕಾಮಗಾರಿಗಳ ನಿರ್ವಹಣೆಯ ಸಂಪೂರ್ಣ

ನಿಯಂತ್ರಣ ಮತ್ತು ಜವಾಬ್ದಾರಿಯು ಸರ್ಕಾರದಲ್ಲೇ ಇರುವಂತೆ ಮಾಡಲು, ವರ್ಷಾವಧಿಯೊಳಗೆ ಎಲ್ಲ ಅತಿ ಸಣ್ಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಮತ್ತು ಇತರೆ ನೀರಾವರಿ ಕಾಮಗಾರಿಗಳ ಜವಾಬ್ದಾರಿಯು ಪ್ರಯೋಜನದಾರರಲ್ಲಿ ಮತ್ತು ಇತರ ಯುಕ್ತ ಏಜೆನ್ಸಿಗಳಲ್ಲಿ ಮುಂದುವರೆಯುವುದು.

ಕಡಿಮೆ ಸಾಮರ್ಥ್ಯವಿರುವ ತೂರೆಗಳ ಅಂದರೆ ಹೊಲ-ಕಾಲುವೆಗಳ ನಿರ್ಮಾಣದ ಹೊಣೆಗಾರಿಕೆಯನ್ನು ರೈತರಿಗೆ ಬಿಟ್ಟುಕೊಟ್ಟು, ಒಂದು ಕ್ಯೂಸೆಕ್ಸ್‌ಗಿಂತ ಕಡಿಮೆಯದಲ್ಲದ ಸಾಮರ್ಥ್ಯವಿರುವ ಎಲ್ಲ ತೂರೆಗಳನ್ನು ಸರ್ಕಾರದ ಏಜೆನ್ಸಿಯು ನಿರ್ಮಿಸುವ ಸಲುವಾಗಿ ಸಹ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ. ಪ್ರಸ್ತುತ, ಈ ಸಂಬಂಧಪಟ್ಟ ಪದ್ಧತಿಯು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಕೆಲವು ಪ್ರದೇಶದಲ್ಲಿ ಸರ್ಕಾರವು ನಿರ್ಮಾಣ ಮಾಡಬೇಕಾದ ಅತಿ ಕಡಿಮೆ ಸಾಮರ್ಥ್ಯದ ತೂರೆಯು ಮೂರು ಕ್ಯೂಸೆಕ್ಸ್‌ನದಾಗಿದೆ. ಪರಿಮಿತಿಗಳನ್ನು ಕಡಿಮೆ ಮಾಡುವ ಉದ್ದೇಶ, ರೈತರಿಗೆ ಅತಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದಾಗಿದೆ ಮತ್ತು ನೀರಾವರಿಯ ತ್ವರಿತ ಬೆಳವಣಿಗೆಗೆ ವಿಶೇಷವಾಗಿ, ಮುಖ್ಯ ಯೋಜನೆಗಳ ಅಡಿಯಲ್ಲಿ ಸುಧಾರಣೆ ತರುವುದಾಗಿದೆ. ರೈತರು ಹೊಲ-ಕಾಲುವೆಗಳನ್ನು ನಿರ್ಮಿಸಲು ತಪ್ಪಿದ ಸಂದರ್ಭದಲ್ಲಿ, ಅಂಥ ಹೊಲ-ಕಾಲುವೆಗಳಿಂದ ಪ್ರಯೋಜನ ಪಡೆಯುವ ಭೂ ಧಾರಕರಿಂದ ಅಂಥ ನಿರ್ಮಾಣ ವೆಚ್ಚದ ವಸೂಲಿಗೆ ಒಳಪಟ್ಟು ಸರ್ಕಾರವು ಹೊಲ-ಕಾಲುವೆಗಳನ್ನು ನಿರ್ಮಿಸುವಂತೆ ಅನುಕೂಲ ಕಲ್ಪಿಸುವುದಾಗಿದೆ.

ವಿಧೇಯಕದಲ್ಲಿ, ನೀರಾವರಿ ಕಾಮಗಾರಿಗಳಿಗೆ ರಕ್ಷಣೆ ನೀಡಲು ಮತ್ತು ವಿಧೇಯಕವು ಆಜ್ಞಾಪಕ ಉಪಬಂಧಗಳ ಉಲ್ಲಂಘನೆಗೆ ದಂಡ ವಿಧಿಸಲು ಉಪಬಂಧ ಕಲ್ಪಿಸಲಾಗಿದೆ.

(ಕರ್ನಾಟಕ ರಾಜಪತ್ರದ (ವಿಶೇಷ ಸಂಚಿಕೆ), ಭಾಗ IV 2ಎ, ದಿನಾಂಕ 18.12.1959, ಸಂಖ್ಯೆ 102 ಆಗಿ ಪುಟ 28 -29 ರಲ್ಲಿ ಪ್ರಕಟಿಸಲಾಗಿದೆ.)

## II

**1969ರ ಕರ್ನಾಟಕ ತಿದ್ದುಪಡಿ ಮಾಡುವ ಅಧಿನಿಯಮ 12.-** ಕರ್ನಾಟಕ ನೀರಾವರಿ ಅಧಿನಿಯಮ, 1965ರ ಪ್ರಕಾರ, ಹೊಲ-ಕಾಲುವೆಗಳನ್ನು ನಿರ್ಮಿಸುವುದರಿಂದಾಗಿ, ಯಾರ ಜಮೀನುಗಳು ಪ್ರಯೋಜನ ಪಡೆಯುವವೋ ಅಂಥ ವ್ಯಕ್ತಿಗಳು ಅಥವಾ ಅಂಥ ವ್ಯಕ್ತಿಗಳ ಕೋರಿಕೆಯ ಮೇರೆಗೆ ಸರ್ಕಾರವು ಹೊಲ-ಕಾಲುವೆಗಳನ್ನು ನಿರ್ಮಿಸಬಹುದಾಗಿದೆ. ಸರ್ಕಾರವೇ ಸ್ವತಃ ತನ್ನ ಖರ್ಚಿನಲ್ಲಿ ಎಲ್ಲ ಹೊಲ-ಕಾಲುವೆಗಳನ್ನು ನಿರ್ಮಾಣ ಮಾಡಲು ಉಪಬಂಧ ಕಲ್ಪಿಸಲು ಈಗ ಪ್ರಸ್ತಾವಿಸಲಾಗಿದೆ.

ಅಲ್ಲದೆ, ಈ ಅಧಿನಿಯಮದ ಅಡಿಯಲ್ಲಿ ಮಾಡುವ ಭೂ ಆರ್ಜನೆ ಮತ್ತು ನಷ್ಟ ಪರಿಹಾರದ ಸಂದಾಯಕ್ಕೆ ಸಂಬಂಧಪಟ್ಟ ಕಾರ್ಯ ವಿಧಾನವು, ಸಾಧ್ಯವಾದಷ್ಟು ಮಟ್ಟಿಗೆ, ಭೂ ಆರ್ಜನೆ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಇರಬೇಕೆಂದು ಪ್ರಸ್ತಾವಿಸಲಾಗಿದೆ.

ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಅನಧಿಕೃತ ಸಾಗುವಳಿಗೆ ದಂಡರೂಪದ ನೀರಿನ ದರಗಳನ್ನು ವಿಧಿಸಲು ಸಹ ಪ್ರಸ್ತಾವಿಸಲಾಗಿದೆ.

ಸದರಿ ಉದ್ದೇಶಗಳಿಗಾಗಿ ಈ ಅಧಿನಿಯಮವನ್ನು ತಿದ್ದುಪಡಿಮಾಡುವುದು ಅಗತ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

ಕೆಲವು ಪ್ರಾಸಂಗಿಕ ಹಾಗೂ ಆನುಷಂಗಿಕ ತಿದ್ದುಪಡಿಗಳನ್ನು ಮಾಡಲೂ ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ -IV 2ಎ ದಿನಾಂಕ 21.8.1968 ರಲ್ಲಿ ಸಂಖ್ಯೆ 767 ರಲ್ಲಿ, ಪುಟ 6 ರಲ್ಲಿ ಪ್ರಕಟಿಸಲಾಗಿದೆ.)

## III

**2000ದ ತಿದ್ದುಪಡಿಮಾಡುವ ಅಧಿನಿಯಮ 24.-** ನೀರು ನಿರ್ವಹಣೆಯಲ್ಲಿ ಉತ್ತಮ ಫಲಿತಾಂಶ ಸಾಧಿಸಲು, ನೀರಾವರಿ ನಿರ್ವಹಣೆಯ ಸಂಬಂಧದ ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಅವರ ಮಹಾ ಮಂಡಲಗಳ ಮೂಲಕ ರೈತರನ್ನು ಆ ಸಂಬಂಧದಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅವರಿಗೆ ಅಧಿಕಾರ ನೀಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ, ಕರ್ನಾಟಕ ನೀರಾವರಿ ಅಧಿನಿಯಮ, 1965 ಇದನ್ನು ಈ ಮುಂದಿನವುಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,-

(i) ನೀರಾವರಿ ಕಾಮಗಾರಿಗಳ ನಿಯಂತ್ರಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ನೀರು ಬಳಕೆದಾರರ ಸಂಘಗಳಿಗೆ ವಹಿಸಿಕೊಡಲು ಉಪಬಂಧ ಕಲ್ಪಿಸುವುದು;

(ii) ನೀರಿನ ಹರಿಯುವಿಕೆಗೆ ತಡೆಯುಂಟು ಮಾಡುವುದನ್ನು ತಪ್ಪಿಸಲು ಅಡ್ಡ ಕಾಲುವೆಗಳ ವ್ಯವಸ್ಥೆ ಮಾಡಲು ಮತ್ತು ಅಡಿಗಾಲುವೆಗಳು ಮುಂತಾದವುಗಳನ್ನು ನಿರ್ಮಾಣ ಮಾಡಲು ನೀರು ಬಳಕೆದಾರರ ಸಂಘಗಳಿಗೆ ಅನುವು ಮಾಡಿಕೊಡುವುದು;

(iii) ಅವಶ್ಯವಿರುವೆಡೆಯಲ್ಲಿ, ನೀರುಗಾಲುವೆಗಳ ಕಾಮಗಾರಿಗಳ ನಿರ್ಮಾಣಕ್ಕಾಗಿ ಅನುವು ಮಾಡಿಕೊಡುವುದು;

(iv) ಬಳಕೆದಾರರು ಹೊಲ-ಕಾಲುವೆಯನ್ನು ದುರಸ್ತಿ ಮಾಡಲು ತಪ್ಪಿದ ಸಂದರ್ಭದಲ್ಲಿ, ಹೊಲ-ಕಾಲುವೆಯನ್ನು ದುರಸ್ತಿ ಮಾಡಲು ಮತ್ತು ಬಳಕೆದಾರರಿಂದ ಅದರ ವೆಚ್ಚವನ್ನು ವಸೂಲಿ ಮಾಡಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(v) ನೀರಾವರಿ ಕಾಮಗಾರಿಯಿಂದ ನೀರು ಸರಬರಾಜನ್ನು ವಿನಿಯಮಿಸಲು ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಲದೊಂದಿಗೆ ಸಮಾಲೋಚಿಸಲು ಉಪಬಂಧ ಕಲ್ಪಿಸುವುದು;

(vi) ನೀರನ್ನು ತಾತ್ಕಾಲಿಕವಾಗಿ ದೊರೆಯುವಂತೆ ಮಾಡಿದಾಗ ಹಾಗೂ ನೀರನ್ನು ಅನಧಿಕೃತವಾಗಿ ಬಳಸಿದಾಗ ನೀರಿನ ದರಗಳನ್ನು ವಿಧಿಸಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(vii) ಬೆಳೆ ಮಾದರಿಯನ್ನು ಉಲ್ಲಂಘಿಸಿದ ಮತ್ತು ನೀರಿನ ದರವನ್ನು ಸಂದಾಯ ಮಾಡದಿದ್ದ ಸಂದರ್ಭದಲ್ಲಿ ನೀರು ಸರಬರಾಜನ್ನು ನಿಲ್ಲಿಸಲು ಮತ್ತು ಬೆಳೆ ಮಾದರಿಯ ಉಲ್ಲಂಘನೆಯ ಸಂದರ್ಭದಲ್ಲಿ ದಂಡರೂಪದ ನೀರಿನ ದರಗಳನ್ನು ವಿಧಿಸಲು ನೀರು ಬಳಕೆದಾರರ ಸಂಘಕ್ಕೆ ಅಧಿಕಾರ ನೀಡುವುದು;

(viii) ನೀರು ಬಳಕೆದಾರರ ಸಂಘಗಳ ಅಧಿಕಾರ ವ್ಯಾಪ್ತಿಯೊಳಗೆ ಇರುವ ಜಮೀನುಗಳ ಸಂಬಂಧದಲ್ಲಿ ನಿರ್ವಹಣಾ ಉಪಕರವನ್ನು ವಿಧಿಸುವುದರಿಂದ ವಿನಾಯಿತಿಗೊಳಿಸುವುದು;

(ix) ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಉಪಬಂಧ ಕಲ್ಪಿಸುವುದು;

(x) ನೀರು ಬಳಕೆದಾರರ ಶೃಂಗಮಟ್ಟದ ಮಹಾಮಂಡಲದ ರಚನೆಗೆ ಉಪಬಂಧ ಕಲ್ಪಿಸುವುದು;

(xi) ನೀರು ಬಳಕೆದಾರರ ಸಂಘ, ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಲ, ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಲ ಮತ್ತು ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಲ-ಇವುಗಳ ಕಾರ್ಯಗಳನ್ನು ಸ್ಥೂಲವಾಗಿ ನಿರೂಪಿಸುವುದು.

ಅಲ್ಲದೆ, ಕರ್ನಾಟಕ ನೀರಾವರಿ (ಪುರೋಭಿವೃದ್ಧಿ, ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957 ಇದನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಮಾತ್ರ ಅನ್ವಯವಾಗುವಂತೆ ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿಸಲಾದ ಸಂಘಗಳಿಗೆ ಅನ್ವಯವಾಗದಂತೆ ನಿರ್ಬಂಧಿಸಿ ಅದನ್ನು ತಿದ್ದುಪಡಿ ಮಾಡುವುದು ಸಹ ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದಾಗಿ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದಾಗಿ, ಕರ್ನಾಟಕ ನೀರಾವರಿ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ಅಧ್ಯಾದೇಶ, 2000 ಇದನ್ನು ಘೋಷಿಸಲಾಗಿದೆ.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000 ದ ವಿ.ಸ. ವಿಧೇಯಕ ಸಂಖ್ಯೆ 29 ರಿಂದ ತೆಗೆದುಕೊಳ್ಳಲಾಗಿದೆ.)

## IV

**2002ರ ತಿದ್ದುಪಡಿ ಮಾಡುವ ಅಧಿನಿಯಮ 8.-** ಕರ್ನಾಟಕ ನೀರಾವರಿ ಅಧಿನಿಯಮ, 1965ನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಮೂಲಕ ನೀರು ಬಳಕೆದಾರರ ಸಂಘಗಳನ್ನು ನೀರು ಬಳಕೆದಾರರ ಯೋಜನೆಯ ಮಟ್ಟದ ಒಕ್ಕೂಟದ ಸದಸ್ಯರನ್ನಾಗಿ ಮಾಡಲು ಉಪಬಂಧಗಳನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಯಾವುದೇ ನೀರಾವರಿ ಕಾಮಗಾರಿಯಿಂದ ನೀರು ಸರಬರಾಜು ಮಾಡುವ ಕಾರ್ಯವನ್ನು ಮತ್ತು ಇದಕ್ಕಾಗಿ ನೀರಿನ ದರ ವಿಧಿಸುವ ಮತ್ತು ಸಂಗ್ರಹಿಸುವ ಕಾರ್ಯವನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವಹಿಸಲು ಕರ್ನಾಟಕ ನೀರಾವರಿ (ಪುರೋಭಿವೃದ್ಧಿ, ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಕೂಡ ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧ್ಯಾದೇಶ, 2001ನ್ನು (2001ರ ಕರ್ನಾಟಕ ಅಧ್ಯಾದೇಶ 6) ಉದ್ದೇಶ ಈಡೇರಿಕೆಗಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2002ರ ಕರ್ನಾಟಕ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 2 ರಿಂದ ಪಡೆಯಲಾಗಿದೆ.)

## V

**2002ರ ತಿದ್ದುಪಡಿ ಮಾಡುವ ಅಧಿನಿಯಮ 9.-** ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ನೀರಾವರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ.-

(i) "ನೀರು ಬಳಕೆದಾರರ ಅಸೋಸಿಯೇಷನ್" ಎಂಬುದಕ್ಕೆ ಪ್ರತ್ಯೇಕ ಪರಿಭಾಷೆಗಾಗಿ ಉಪಬಂಧ ಕಲ್ಪಿಸುವುದು ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ಒಂದು ನೀರು ಬಳಕೆದಾರರ ಅಸೋಸಿಯೇಷನ್ ನೋಂದಾಯಿತವಾಗುವವರೆಗೆ, ಎರಡು ಸಾವಿರ ಹೆಕ್ಟೇರುಗಳಿಗಿಂತ ಕಡಿಮೆ ಭೂಮಿಗೆ ನೀರಾವರಿ ಒದಗಿಸುವ ಸಣ್ಣ ನೀರಾವರಿ ಕೆರೆಗಳ ಸಂಬಂಧದಲ್ಲಿ, ಈ ತಿದ್ದುಪಡಿ ಅಧಿನಿಯಮದ ಪ್ರಾರಂಭಕ್ಕೆ ಮೊದಲು, ನೋಂದಾಯಿತವಾದ ನೀರು ಬಳಕೆದಾರರ ಸಂಘಗಳು ಮುಂದುವರಿಯುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ii) 4, 10, 14 ಮತ್ತು 27ನೇ ಪ್ರಕರಣಗಳ ಅಡಿಯಲ್ಲಿ ಕೆಲವು ಅಧಿಕಾರಗಳನ್ನು ನೀರು ಬಳಕೆದಾರರ ಅಸೋಸಿಯೇಷನ್ನಿಗೆ ಪ್ರದಾನ ಮಾಡುವುದು;

(iii) ನೀರು ಬಳಕೆದಾರರ ಅಸೋಸಿಯೇಷನ್ನನ್ನು ನಿರ್ವಹಣಾ ಉಪಕರ ವಿಧಿಸುವಿಕೆಯಿಂದ ವಿನಾಯಿತಿಗೊಳಿಸುವುದು;

(iv) ನೀರು ಬಳಕೆದಾರರ ಅಸೋಸಿಯೇಷನ್ನಿನ ಪ್ರಕಾರ್ಯಗಳನ್ನು ಪರಿಭಾಷಿಸುವುದು;

ನೀರು ಬಳಕೆದಾರರ ಅಸೋಸಿಯೇಷನ್ನಿನ ಮೇಲೆ ನೀರು ದರವನ್ನು ವಿಧಿಸಲು ಹಾಗೂ ಅದು ನೀರು ಶುಲ್ಕಗಳನ್ನು ನೀರು ಬಳಕೆದಾರರಿಂದ ಸಂಗ್ರಹಿಸಲು ಸಾಧ್ಯವಾಗುವಂತೆ ಮಾಡಲು, ಕರ್ನಾಟಕ ನೀರಾವರಿ (ಪುರೋಭಿವೃದ್ಧಿ, ವಂತಿಗೆ ಮತ್ತು ನೀರು ದರ ವಿಧಿಸುವ) ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಸಹ ಅವಶ್ಯಕವೆಂದು ಭಾವಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದರಿಂದ, ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧ್ಯಾದೇಶ, 2002ನ್ನು (2002ರ ಕರ್ನಾಟಕ ಅಧ್ಯಾದೇಶ 1) ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(2002ರ ಕರ್ನಾಟಕ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 7 ರಿಂದ ಪಡೆಯಲಾಗಿದೆ.)

## 1965ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 16

(1965ರ ಆಗಸ್ಟ್ ಹತ್ತೊಂಬತ್ತನೆಯ ದಿನದಂದು [1][ಕರ್ನಾಟಕ][1] ರಾಜಪತ್ರದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ನೀರಾವರಿ ಅಧಿನಿಯಮ, 1965

(1965ನೇ ಇಸವಿಯ ಜುಲೈ ತಿಂಗಳ 23ನೇ ದಿನದಂದು ರಾಷ್ಟ್ರಪತಿಯ ಅನುಮತಿ ಪಡೆದಿದೆ.)

**(1969ರ 12, 2000ರ 24, 2002ರ 8 ಮತ್ತು 2002ರ 9 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ.)**

[1][ಕರ್ನಾಟಕ ರಾಜ್ಯ][1] ದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ವಿನಿಯಮನ, ಅವುಗಳ ಮೂಲಕ ನೀರು ಸರಬರಾಜು, ತುರ್ತು ಸಂದರ್ಭಗಳಲ್ಲಿ ಕೆಲಸಗಾರರನ್ನು ದೊರಕಿಸಿಕೊಳ್ಳುವುದು ಮತ್ತು ನೀರಾವರಿಗೆ ಸಂಬಂಧಿಸಿದ ಇತರೆ ಕೆಲವು ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ವಿನಿಯಮನ, ಅವುಗಳ ಮೂಲಕ ನೀರು ಸರಬರಾಜು, ತುರ್ತು ಸಂದರ್ಭಗಳಲ್ಲಿ ಕೆಲಸಗಾರರನ್ನು ದೊರಕಿಸಿಕೊಳ್ಳುವುದು ಮತ್ತು ನೀರಾವರಿಗೆ ಸಂಬಂಧಿಸಿದ ಇತರೆ ಕೆಲವು ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ವಿಹಿತವಾಗಿದ್ದರಿಂದ;

ಇದು ಭಾರತ ಗಣರಾಜ್ಯದ ಹದಿನಾರನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.**- (1) ಈ ಅಧಿನಿಯಮವನ್ನು [1][ಕರ್ನಾಟಕ][1] ನೀರಾವರಿ ಅಧಿನಿಯಮ, 1965 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆಯ ಮೂಲಕ 1.1.1966 ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನಾಲಾ ಅಧಿಕಾರಿ" ಎಂದರೆ, 3ನೇ ಪ್ರಕರಣದ ಮೇರೆಗೆ ನಾಲಾ ಅಧಿಕಾರಿಯಾಗಿ ನೇಮಕಗೊಂಡ ಅಥವಾ ನಾಲಾ ಅಧಿಕಾರಿಯ ಅಧಿಕಾರಗಳನ್ನು ನಿಹಿತಗೊಳಿಸಲಾದ ಯಾರೇ ಅಧಿಕಾರಿ;

(ಬಿ) "ಮುಖ್ಯ ಇಂಜಿನಿಯರ್" ಎಂದರೆ, ರಾಜ್ಯ ಸರ್ಕಾರದಿಂದ ನೀರಾವರಿಗಾಗಿ ಮುಖ್ಯ ಇಂಜಿನಿಯರ್ ಎಂದು ನೇಮಕಗೊಂಡ ಒಬ್ಬ ಅಧಿಕಾರಿ ಮತ್ತು ಅದರಲ್ಲಿ ಈ ಅಧಿನಿಯಮದ ಮೇರೆಗೆ ಮುಖ್ಯ ಇಂಜಿನಿಯರ್‌ನ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ನೇಮಕಗೊಂಡ ಯಾರೇ ಅಧಿಕಾರಿಯು ಒಳಗೊಳ್ಳುತ್ತಾನೆ;

[1][(ಬಿಬಿ) "ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ" ಎಂದರೆ, ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980 (1980ರ ಕರ್ನಾಟಕ ಅಧಿನಿಯಮ 6) ಇದರ ಅಡಿಯಲ್ಲಿ ಸ್ಥಾಪಿತವಾದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ;][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) "ಉಪ ಆಯುಕ್ತ" ಪದವು, ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ಉಪ ಆಯುಕ್ತನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವುದಕ್ಕೆ ನೇಮಕ ಮಾಡಿದ ಉಪ ವಿಭಾಗಾಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಡಿ) "ನಾಲಾ ಕಾಮಗಾರಿ" ಯು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತದೆ,-

(i) ನಿರುಪಯುಕ್ತ ಅಥವಾ ಹೆಚ್ಚುವರಿ ನೀರನ್ನು ಹೊರ ಹಾಕಲು ನೈಸರ್ಗಿಕ ಅಥವಾ ಕೃತಕವಾದ ಕಾಲುವೆಗಳು ಮತ್ತು ಅಂತಹ ಕಾಲುವೆಗಳಿಗೆ ಸಂಬಂಧಿಸಿದ ಕಾಮಗಾರಿಗಳು ಅಥವಾ ಅದಕ್ಕೆ ಸಹಾಯಕವಾದ ಎಲ್ಲಾ ಕಾಮಗಾರಿಗಳು;

(ii) ನೀರಾವರಿ ಕಾಮಗಾರಿಗಳಿಂದ, ಅಣೆಕಟ್ಟುಗಳಿಂದ, ಕೋಡಿಗಳಿಂದ, ಏರಿಗಳಿಂದ, ತೂಬುಗಳಿಂದ, ಮರದ ತಡೆಗಟ್ಟೆಗಳಿಂದ ಮತ್ತು ಅದಕ್ಕೆ ಸಂಬಂಧಿಸಿದ ಇತರ ಕಾಮಗಾರಿಗಳಿಂದ ನೀರು ಹೊರಹಾಕುವ ಕಾಲುವೆಗಳು, ಇದರಲ್ಲಿ ತ್ಯಾಜ್ಯ ನೀರನ್ನು ಹೊರಹಾಕುವ ಕಾಮಗಾರಿಗಳು ಸೇರುವುದಿಲ್ಲ ;

(iii) ನೀರು ಹರಿದು ಹೋಗುವುದಕ್ಕಾಗಿ ಬಂಜರು ಭೂಮಿಯನ್ನು ಕೃಷಿಯೋಗ್ಯ ಮಾಡಿದ ಪದ್ಧತಿಯ ಸಂಬಂಧವಾಗಿ ಸರ್ಕಾರವು ಮಾಡಿದ ಅಥವಾ ಸುಧಾರಿಸಿದ ಯಾವುದೇ ಕಾಮಗಾರಿ; ಮತ್ತು

(iv) ನೆರೆಯಿಂದ ಅಥವಾ ಸವೆತದಿಂದ ಭೂಮಿಗಳನ್ನು ಸಂರಕ್ಷಿಸುವುದಕ್ಕಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯಾಗಲಿ ರಾಜ್ಯ ಸರಕಾರವು ನಿರ್ಮಿಸಿದ ಅಥವಾ ನಿರ್ವಹಿಸಿದ ಎಲ್ಲಾ ಕಾಮಗಾರಿಗಳು;

(ಇ) "ಹೊಲ-ಕಾಲುವೆ" ಎಂದರೆ, ನೀರಾವರಿ ಕಾಮಗಾರಿಯಿಂದ ಪ್ರತಿ ಸೆಕೆಂಡಿಗೆ ಒಂದು ಘನ ಅಡಿ ಮೀರದಂತಹ ನೀರನ್ನು ಹೊತ್ತು ತರುವಂತಹ ಸಾಮರ್ಥ್ಯ ಹೊಂದಿರುವ ಯಾವುದೇ ನೀರಿನ ಮಾರ್ಗ, ಹಿಕ್ಕಲು ಅಥವಾ ಕೊಳವೆ ಮತ್ತು ಅದು ಆ ಕಾಲುವೆ ಅಥವಾ ಕೊಳವೆಗೆ ನೀರು ಸರಬರಾಜು ಮಾಡುವಂತಹ ತೂಬು ಅಥವಾ ಹೊರ ಮಾರ್ಗಗಳನ್ನು ಬಿಟ್ಟು, ಅಂತಹ ಹೊಲ-ಕಾಲುವೆಗೆ ಸಂಬಂಧಿಸಿರುವ ಎಲ್ಲಾ ಉಪ ಕಾಮಗಾರಿಗಳನ್ನು ಒಳಗೊಳ್ಳುತ್ತದೆ ;

(ಎಫ್) "ಪ್ರವಾಹ ತಡೆಗಟ್ಟೆ" ಎಂದರೆ, ಯಾವುದೇ ನೀರಾವರಿ ಪದ್ಧತಿಯ ಅಥವಾ ಕೃಷಿ ಯೋಗ್ಯಗೊಳಿಸುವ ಕಾಮಗಾರಿಗಳ ಸಂಬಂಧದಲ್ಲಿ ಸರ್ಕಾರವು ನಿರ್ಮಾಣ ಮಾಡಿದ ಅಥವಾ ನಿರ್ವಹಿಸಿದ ಯಾವುದೇ ತಡೆಗಟ್ಟೆ ಅಥವಾ ಪ್ರವಾಹದಿಂದ ನೀರು ತುಂಬಿ ಹೋಗದಂತೆ ರಕ್ಷಿಸಲು, ರಾಜ್ಯ ಸರ್ಕಾರವು, ಅಂತಹ ಸಂಬಂಧಿಸಿದ ಯಾವುದೇ ಪದ್ಧತಿ ನಿರ್ವಹಿಸಬೇಕಾದುದೆಂದು ಘೋಷಿಸಲಾದಂತವುಗಳನ್ನು ಸರ್ಕಾರವು ನಿರ್ಮಿಸಿದ ಅಥವಾ ನಿರ್ವಹಿಸುವ ಯಾವುದೇ ತಡೆಗಟ್ಟೆ ಮತ್ತು ಅದರಲ್ಲಿ ಅಂತಹ ತಟೆಗಟ್ಟೆಗಳ ಸಂಬಂಧದಲ್ಲಿ ಎಲ್ಲಾ ತಡೆಗೋಡೆಗಳು, ಚಾಚುಗೋಡೆಗಳು, ಅಣೆಕಟ್ಟುಗಳು ಮತ್ತು ತಡೆಗಟ್ಟೆಗಳಿಗೆ ಸಂಬಂಧಿಸಿದ ಇತರ ಎಲ್ಲ ಸಂರಕ್ಷಕ ಕಾಮಗಾರಿಗಳು ಒಳಗೊಳ್ಳುತ್ತವೆ;

(ಜಿ) "ನೀರಾವರಿ ಅಧಿಕಾರಿ" ಎಂದರೆ, 3ನೇ ಪ್ರಕರಣದ ಮೇರೆಗೆ ನೀರಾವರಿ ಅಧಿಕಾರಿ ಎಂದು ನೇಮಕಗೊಂಡ ಅಥವಾ ನೀರಾವರಿ ಅಧಿಕಾರಿಯ ಅಧಿಕಾರಗಳನ್ನು ನಿಹಿತಗೊಳಿಸಲಾದ ಯಾರೇ ಅಧಿಕಾರಿ;

(ಎಚ್) "ನೀರಾವರಿ ಕಾಮಗಾರಿ"ಯು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತದೆ,-

(i) ಸರ್ಕಾರವು, ನೀರಿನ ಸರಬರಾಜು, ಹರಿಸುವಿಕೆ ಅಥವಾ ಸಂಗ್ರಹಣೆ ಇವುಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯಾಗಲಿ ನಿರ್ಮಿಸಿದ, ನಿರ್ವಹಿಸುತ್ತಿರುವ ಅಥವಾ ನಿಯಂತ್ರಿಸುತ್ತಿರುವ ಎಲ್ಲಾ ಜಲಾಶಯಗಳು, ಕೆರೆಗಳು, ಬಾವಿಗಳು, ಅಣೆಕಟ್ಟುಗಳು, ಬಾಂಧಾರಗಳು, ಕೊಳಗಳು, ಚಿಲುಮೆ ಕೊಳಗಳು, ನಾಲೆಗಳು, ಹೊಲ-ಕಾಲುವೆಗಳು, ಬುಗ್ಗೆಗಳು, ಕೊಳವೆಗಳು, ಅಡಿ ಕಾಲುವೆಗಳು, ಮೇಲು ಕಾಲುವೆಗಳು ಮತ್ತು ತೂಬುಗಳು;

(ii) ಅಂತಹ ಜಲಾಶಯಗಳು, ಕೆರೆಗಳು, ಅಣೆಕಟ್ಟುಗಳು, ಬಾಂಧಾರಗಳು, ನಾಲೆಗಳು, ಕೊಳವೆಗಳು, ತೂಬುಗಳು-ಇವುಗಳಿಗೆ ಸಂಬಂಧಿಸಿದ ಎಲ್ಲ ಕಾಮಗಾರಿಗಳು, ತಡೆಗಟ್ಟೆಗಳು, ರಚನೆಗಳು, ನೀರು ಸರಬರಾಜು ಮಾಡುವ ಮತ್ತು ನೀರು ಹೊರಹಾಕುವ ಕಾಲುವೆಗಳು ಮತ್ತು ಅಂತಹ ಜಲಾಶಯ, ಕೆರೆ, ಅಣೆಕಟ್ಟು, ಬಾಂಧಾರ, ನಾಲೆ, ಕಾಲುವೆ, ಕೊಳವೆ ಮತ್ತು ತೂಬು ಇವುಗಳ ನಿರ್ಮಾಣ ಅಥವಾ ನಿರ್ವಹಣೆಗೆ ಅನುಕೂಲ ಮಾಡಿಕೊಡಲು ನಿರ್ಮಿಸಿದ ಎಲ್ಲ ರಸ್ತೆಗಳು;

(iii) ಎಲ್ಲ ನಾಲಾ ಕಾಮಗಾರಿಗಳು ಮತ್ತು ಪ್ರವಾಹ ತಡೆಗಟ್ಟೆಗಳು;

(iv) ರಾಜ್ಯ ಸರ್ಕಾರವು, 5ನೇ ಪ್ರಕರಣದ ಉಪಬಂಧಗಳ ಅನ್ವಯ ಮಾಡಬಹುದಾದಂತಹ ಅಥವಾ ಯಾವುದೇ ಈಗಿರುವ ನೀರಾವರಿ ಕಾಮಗಾರಿಗಳ ಉದ್ದೇಶಗಳಿಗಾಗಿ, ಈ ಅಧಿನಿಯಮದ ಜಾರಿಗಿಂತ ಮೊದಲು ನೀರನ್ನು ಉಪಯೋಗಿಸಿಕೊಂಡ ಅಥವಾ ಬಳಸಿದ ನದಿಯ, ತೊರೆಯ, ಸರೋವರದ, ನೈಸರ್ಗಿಕವಾಗಿ ಸಂಗ್ರಹವಾದ ನೀರು ಅಥವಾ ನೈಸರ್ಗಿಕವಾಗಿ ಹರಿದು ಹೋಗುವ ನೀರು ಕಾಲುವೆಯ ಯಾವುದೇ ಭಾಗ;

(v) ಸರ್ಕಾರವು, ಅಂತಹ ಜಲಾಶಯ, ಕೆರೆ, ಅಣೆಕಟ್ಟು, ಬಾಂಧಾರ, ನಾಲೆ, ಕಾಲುವೆ, ಕೊಳವೆ, ತೂಬು ಇವುಗಳ ಉದ್ದೇಶಗಳಿಗಾಗಿ ಬಳಸಿಕೊಂಡ ಎಲ್ಲಾ ಜಮೀನುಗಳು ಮತ್ತು ಅಂತಹ ಜಮೀನಿನ ಮೇಲಿರುವ ಎಲ್ಲಾ ಕಟ್ಟಡಗಳು, ಯಂತ್ರೋಪಕರಣಗಳು, ಬೇಲಿಗಳು, ಗೇಟುಗಳು, ಮತ್ತಿತರ ನಿರ್ಮಾಣಗಳು;

(ಐ) "ಭೂ ಹಿಡುವಳಿದಾರ" ಅಥವಾ "ಹಿಡುವಳಿದಾರ" ಎಂದರೆ, ಯಾವ ವ್ಯಕ್ತಿಯಲ್ಲಿ, ಸಂಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯೇ ಆಗಲಿ ತನ್ನ ಸ್ವಂತ ಖಾತೆಯಲ್ಲಾಗಲಿ ಅಥವಾ ಪೂರ್ಣವಾಗಿಯೇ ಆಗಲಿ ಅಥವಾ ಭಾಗಶ:ವಾಗಿಯೇ ಆಗಲಿ ಮತ್ತೊಬ್ಬ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳ ಒಂದು ವರ್ಗಕ್ಕಾಗಲಿ ಅಥವಾ ಸಾರ್ವಜನಿಕರಿಗಾಗಿಯಾಗಲಿ ಸಂಪೂರ್ಣವಾಗಿ ಅಥವಾ ಭಾಗಶ:ವಾಗಿ ಆಗಲಿ ವಿಶ್ವಸ್ಥನಾಗಿ ಭೂಮಿಯನ್ನು ಧಾರಣ ಮಾಡುವ ಹಕ್ಕನ್ನು ನಿಹಿತಗೊಳಿಸಲಾಗಿದೆಯೋ ಆ ವ್ಯಕ್ತಿ ಮತ್ತು ಅದರಲ್ಲಿ ಸ್ವಾಧೀನವಾದ ಹಕ್ಕನ್ನು ನಿಹಿತಗೊಳಿಸಲಾದಂಥ ಅಡಮಾನ ಪಡೆದವನೂ ಒಳಗೊಳ್ಳುತ್ತಾನೆ;

(ಜೆ) "ಅಧಿಸೂಚನೆ" ಎಂದರೆ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಕೆ) "ಅನುಭೋಗದಾರ" ಎಂದರೆ ಯಾವುದೇ ಜಮೀನಿನ ಸಂಬಂಧದಲ್ಲಿ, ಅದರಲ್ಲಿ ಹಿತಾಸಕ್ತಿಯುಳ್ಳ ಮತ್ತು ಸ್ವತಃ ಅಥವಾ ತನ್ನ ನೌಕರರ ಮೂಲಕ ಅಥವಾ ಕೂಲಿ ಕೆಲಸಗಾರರಿಂದ ಜಮೀನಿನ ಸಾಗುವಳಿ ಮಾಡಿಸುವಂತಹ ಯಾರೇ ವ್ಯಕ್ತಿ ಮತ್ತು ಇದರಲ್ಲಿ ಗೇಣಿದಾರನೂ ಸೇರುತ್ತಾನೆ;

(ಎಲ್) "ಒಡೆಯ" ಪದವು, ನಿರ್ದಿಷ್ಟಪಡಿಸಲಾದ ವಸ್ತುವಿನ ಒಡೆತನದಲ್ಲಿ ಜಂಟಿ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು ಈ ಆಧಿನಿಯಮದ ಮೇರೆಗೆ ಒಡೆಯನಿಗೆ ಸೇರಿರುವ ಎಲ್ಲಾ ಹಕ್ಕುಗಳು ಮತ್ತು ಬಾಧ್ಯತೆಗಳು ಆ ಒಡೆತನದಲ್ಲಿನ ಅಂತಹ ಜಂಟಿ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸೇರತಕ್ಕದ್ದು ;

(ಎಮ್) "ಪಟೇಲ" ಎಂದರೆ, ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಪಟೇಲನೆಂದು ಘೋಷಿಸಬಹುದಾದಂತಹ ಅಧಿಕಾರಿ;

(ಎನ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು;

(ಒ) "ತಹಶೀಲ್ದಾರ" ಎಂಬ ಪದದಲ್ಲಿ, ಈ ಅಧಿನಿಯಮದ ಮೇರೆಗೆ ತಹಶೀಲ್ದಾರನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ರಾಜ್ಯ ಸರ್ಕಾರದಿಂದ ನೇಮಕಗೊಂಡ ಯಾರೇ ಅಧಿಕಾರಿಯು ಒಳಗೊಳ್ಳುತ್ತಾನೆ;

[1][(ಪಿ) "ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳ" ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾದ ಮತ್ತು ಅದರ ಬೈಲಾಗಳಲ್ಲಿ ನಿರ್ದಿಷ್ಟಪಡಿಸಲಾದ ಸದಸ್ಯರನ್ನು ಒಳಗೊಂಡಂಥ ನೀರು ಬಳಕೆದಾರರ ಶೃಂಗಮಟ್ಟದ ಸಂಘ;

1. 2000 ಅಧಿನಿಯಮ ಸಂಖ್ಯೆ 24ರ ಮೂಲಕ 14.6.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಪಿಪಿ) "ನೀರು ಬಳಕೆದಾರರ ಅಸೋಸಿಯೇಷನ್" ಎಂದರೆ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) ಅಡಿಯಲ್ಲಿ ನೋಂದಾಯಿತವಾಗಿರುವ ನೀರು ಬಳಕೆದಾರರ ಒಂದು ಅಸೋಸಿಯೇಷನ್. ಇದು, ಎರಡು ಸಾವಿರ ಹೆಕ್ಟೇರುಗಳಿಗಿಂತ ಕಡಿಮೆ ಭೂಮಿಗೆ ನೀರಾವರಿ ಒದಗಿಸುವ ಒಂದು ಕೆರೆಯಾಗಿರುವ ಆದರೆ, ಬೃಹತ್ ಅಥವಾ ಮಧ್ಯಮ ನೀರಾವರಿ ಯೋಜನಾ ಅಚ್ಚುಕಟ್ಟು ಪ್ರದೇಶದೊಳಗೆ ಬರುವ ಕೆರೆಗಳನ್ನು ಹೊರತುಪಡಿಸಿದ ಒಂದು ನೀರಾವರಿ ಕಾಮಗಾರಿಯ ಅಡಿಯಲ್ಲಿ,-

(ಎ) ಭೂಮಿಯ ಸಾಗುವಳಿಗಾಗಿ ಶೇಕಡಾ ಅರವತ್ತಕ್ಕಿಂತ ಕಡಿಮೆಯಿಲ್ಲದ ನೀರು ಬಳಕೆದಾರರ ಸದಸ್ಯರನ್ನು; ಅಥವಾ

(ಬಿ) ಭೂಮಿಯ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಷ್ಟು ಭೂಮಿಯ ಮತ್ತು ಹಿಡುವಳಿಯ ಸಾಗುವಳಿಗಾಗಿ ನೀರು ಬಳಕೆದಾರರ ಬಹುಸಂಖ್ಯಾ ಸದಸ್ಯರನ್ನು

- ಒಳಗೊಂಡಿರುತ್ತದೆ:

ಪರಂತು, ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭಕ್ಕೆ ಮೊದಲು ಅಂಥ ಕೆರೆಯ ಸಂಬಂಧದಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ನೀರು ಬಳಕೆದಾರರ ಸಂಘವು, ಒಂದು ನೀರು ಬಳಕೆದಾರರ ಅಸೋಸಿಯೇಷನ್ ನೋಂದಾಯಿತವಾಗುವವರೆಗೆ ಮುಂದುವರೆಯಬಹುದು;][1]

1. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಕ್ಯೂ) "ನೀರು ಬಳಕೆದಾರರ ವಿತರಣೆಯ ಮಟ್ಟದ ಮಹಾಮಂಡಳ" ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾದ ಮತ್ತು ರಾಜ್ಯ

ಸರ್ಕಾರವು ಅಧಿಸೂಚಿಸಬಹುದಾದಂತೆ, ಭಾರೀ ಅಥವಾ ಮಧ್ಯಮ ನೀರಾವರಿ ಯೋಜನೆಯ ವಿತರಣೆಗೆ ಸಂಬಂಧಿಸಿದಂತೆ ಒಂದು ಪ್ರದೇಶದೊಳಗೆ ನೀರು ಬಳಕೆದಾರರ ಸಂಘಗಳ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರುಗಳು ಇರತಕ್ಕ ನೀರು ಬಳಕೆದಾರರ ವಿತರಣೆ ಸಂಘಗಳ ಮಹಾಮಂಡಳ;

(ಆರ್) "ನೀರು ಬಳಕೆದಾರರ ಯೋಜನೆಯ ಮಟ್ಟದ ಮಹಾಮಂಡಳ" ಎಂದರೆ,-

(i) ಬೃಹತ್ ನೀರಾವರಿ ಯೋಜನೆಯ ಸಂದರ್ಭದಲ್ಲಿ, ಯೋಜನಾ ಮಟ್ಟದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾದ ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ, ಬೃಹತ್ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಒಂದು ಪ್ರದೇಶದೊಳಗೆ [1][ನೀರು ಬಳಕೆದಾರರ ಸಂಘಗಳ ಅಥವಾ][1] ನೀರು ಬಳಕೆದಾರರ ವಿತರಣೆಯ ಮಟ್ಟದ ಮಹಾಮಂಡಳಗಳ ಸದಸ್ಯರ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಲ್ಲದಷ್ಟು ಸದಸ್ಯರು ಇರತಕ್ಕ [1][ನೀರು ಬಳಕೆದಾರರ ಸಂಘಗಳ ಅಥವಾ][1] ನೀರು ಬಳಕೆದಾರರ ವಿತರಣೆಯ ಮಟ್ಟದ ಮಹಾಮಂಡಳ;

1. 2002ರ ಅಧಿನಿಯಮ ಸಂಖ್ಯೆ 8ರ ಮೂಲಕ 13.11.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ii) ಮಧ್ಯಮ ನೀರಾವರಿ ಯೋಜನೆಯ ಸಂದರ್ಭದಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾದ ಮತ್ತು ರಾಜ್ಯ ಸಕಾರವು ಅಧಿಸೂಚಿಸಬಹುದಾದಂತೆ, ಮಧ್ಯಮ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಒಂದು ಪ್ರದೇಶದೊಳಗೆ ನೀರು ಬಳಕೆದಾರರ ಸಂಘಗಳ ಸದಸ್ಯರ ಶೇಕಡಾ ಐವತ್ತೊಂದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಇರತಕ್ಕ ಯೋಜನಾ ಮಟ್ಟದ ನೀರು ಬಳಕೆದಾರರ ಸಂಘಗಳ ಮಹಾಮಂಡಳ;

(iii) ಸಣ್ಣ ನೀರಾವರಿ ಅಥವಾ ಏತನೀರಾವರಿ ಕಾಮಗಾರಿಗಳ ಸಂದರ್ಭದಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾದ ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ, ಅಂಥ ಒಂದು ಪ್ರದೇಶದೊಳಗೆ ಸಣ್ಣ ನೀರಾವರಿ ಅಥವಾ ಏತ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನೀರು ಬಳಕೆದಾರರ ಸಂಘಗಳ ಸದಸ್ಯರ ಶೇಕಡಾ ಐವತ್ತೊಂದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಇರತಕ್ಕ ನೀರು ಬಳಕೆದಾರರ ಸಂಘಗಳ ಮಹಾಮಂಡಳ;

(ಎಸ್) "ನೀರು ಬಳಕೆದಾರರ ಸಂಘ" ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಇದರ ಅಡಿಯಲ್ಲಿ ನೋಂದಾಯಿತವಾಗಿರುವ ಮತ್ತು ಸಂಘದ ಕಾರ್ಯಾಚರಣೆ ಪ್ರದೇಶದೊಳಗೆ ಬರುವ [1][ಆದರೆ, ಎರಡು ಸಾವಿರ ಹೆಕ್ಟೇರುಗಳಿಗಿಂತ ಕಡಿಮೆ ಭೂಮಿಗೆ ನೀರಾವರಿ ಒದಗಿಸುವ ಅಥವಾ ಬೃಹತ್ ಅಥವಾ ಮಧ್ಯಮ ನೀರಾವರಿ ಯೋಜನಾ ಅಚ್ಚುಕಟ್ಟು ಪ್ರದೇಶದೊಳಗೆ ಬರುವ ಒಂದು ಕೆರೆಯನ್ನು ಹೊರತುಪಡಿಸಿದ][1] ನೀರಾವರಿ ಕಾಮಗಾರಿಯ ಅಡಿಯಲ್ಲಿ,-

1. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ: 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಭೂಮಿಯ ಸಾಗುವಳಿಗಾಗಿ ಶೇಕಡಾ ಅರವತ್ತಕ್ಕಿಂತ ಕಡಿಮೆ ಇಲ್ಲದ ನೀರು ಬಳಕೆದಾರರ ಸದಸ್ಯರನ್ನು; ಅಥವಾ

(ಬಿ) ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇಲ್ಲದಂತೆ ಭೂಮಿಯ ಮತ್ತು ಹಿಡುವಳಿಯ ಸಾಗುವಳಿಗಾಗಿ, ಸದಸ್ಯರ ಪೈಕಿ ಅಧಿಕ ಸಂಖ್ಯೆಯ ಸದಸ್ಯರು ಇರತಕ್ಕ ನೀರು ಬಳಕೆದಾರರ ಸಹಕಾರ ಸಂಘ.

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ "ಕಾರ್ಯಾಚರಣೆಯ ಪ್ರದೇಶ" ಎಂದರೆ, ನೀರಾವರಿ ಅಧಿಕಾರಿಯು [1][ಕಾಲಕಾಲಕ್ಕೆ][1] ಅಧಿಸೂಚಿಸಬಹುದಾದಂತೆ ನೀರಾವರಿ ಕಾಮಗಾರಿ ವ್ಯಾಪ್ತಿಯಲ್ಲಿ ಬರುವ ಭೂಭಾಗಕ್ಕೆ ಹೊಂದಿಕೊಂಡ ಭೂಭಾಗವನ್ನು ಒಳಗೊಂಡ ಒಂದು ಪ್ರದೇಶ.][1]

1. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**3. ಅಧಿಕಾರಿಗಳ ನೇಮಕಾತಿ.-** ರಾಜ್ಯಸರ್ಕಾರವು ಅಥವಾ ನಿಯಮಿಸಬಹುದಾದಂತಹ ಷರತ್ತುಗಳಿಗೆ ಒಳಪಟ್ಟು, ಈ ಸಂಬಂಧದಲ್ಲಿ ಅಧಿಕಾರ ಪಡೆದಿರುವ ಸರ್ಕಾರದ ಯಾರೇ ಅಧಿಕಾರಿಯು ಅಧಿಸೂಚನೆಯ ಮೂಲಕ,-

(ಎ) ರಾಜ್ಯ ಸರ್ಕಾರ ಅಥವಾ ಅಂತಹ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದಂತಹ ಪದನಾಮಗಳೊಂದಿಗೆ ಅಂತಹ ಅಧಿಕಾರಿಗಳನ್ನು ನೇಮಿಸಬಹುದು ಮತ್ತು ಅವರಿಗೆ ಈ ಅಧಿನಿಯಮದ ಮೇರೆಗೆ ಅಂತಹ ಪ್ರದೇಶ ಅಥವಾ ಅಂತಹ ನೀರಾವರಿ ಕಾಮಗಾರಿಗಳ ಮೇಲೆ ಅನುಕ್ರಮವಾಗಿ ಅಂತಹ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಹಿಸಬಹುದು;

(ಬಿ) ರಾಜ್ಯ ಸರ್ಕಾರ ಅಥವಾ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಯಾವುದೇ ಇಲಾಖೆಯಲ್ಲಿನ ಸರ್ಕಾರದ ಯಾರೇ ಅಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಅಂತಹ ಅಧಿಕಾರಗಳನ್ನು ವಹಿಸಿಕೊಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ಅಂತಹ ಪ್ರದೇಶಗಳ ಅಥವಾ ಅಂತಹ ನೀರಾವರಿ ಕಾಮಗಾರಿಗಳ ಮೇಲೆ ಅಂತಹ ಕರ್ತವ್ಯಗಳನ್ನು ಅವನಿಗೆ ವಿಧಿಸಬಹುದು.

## ಅಧ್ಯಾಯ – II

## ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ

**4. ಸರ್ಕಾರದ ಸಮ್ಮತಿ ಮತ್ತು ಷರತ್ತುಗಳಿಗೊಳಪಟ್ಟಂತೆ ಮಾತ್ರವೇ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ.-** (1) ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರದ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕಾರ ನೀಡಬಹುದಾದಂತಹ ಇತರ ಪ್ರಾಧಿಕಾರಿಯ ಪೂರ್ವ ಮಂಜೂರಾತಿ ಇಲ್ಲದೆ ಮತ್ತು ರಾಜ್ಯ ಸರ್ಕಾರ ಅಥವಾ ಅಂಥ ಪ್ರಾಧಿಕಾರಿಯು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟ ಹೊರತು, ಯಾವುದೇ ಜಲಾಶಯ, ಕೆರೆ, ಅಣೆಕಟ್ಟು, ಬಾಂಧಾರ, ಕೊಳ, ಚಿಲುಮೆಕೊಳ, ನಾಲೆ, ಹೊಲ ಕಾಲುವೆ, ಬುಗ್ಗೆ, ಅಡಿಗಾಲುವೆ ಅಥವಾ ಮೇಲುಕಾಲುವೆ – ಇವುಗಳ ಪೂರ್ಣ ಅಥವಾ ಭಾಗಶ: ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆಯನ್ನು ಮಾಡತಕ್ಕದ್ದಲ್ಲ:

[1][ಪರಂತು, ರಾಜ್ಯ ಸರ್ಕಾರವು, ಯಾವುದೇ ನೀರಾವರಿ ಕಾಮಗಾರಿಯ ನಿಯಂತ್ರಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯೇ ಆಗಲಿ ನೀರು ಬಳಕೆದಾರರ ಸಂಘಕ್ಕೆ [2][ಅಥವಾ ಸಂದರ್ಭಾನುಸಾರ ನೀರು ಬಳಕೆದಾರರ ಅಸೋಸಿಯೇಷನ್‌ಗೆ][2] ವಹಿಸಬಹುದು ಮತ್ತು ಆ ತರುವಾಯ, ಅಂಥ ನೀರಾವರಿ ಕಾಮಗಾರಿಯ ನಿಯಂತ್ರಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಯು ಅಂಥ ನೀರು ಬಳಕೆದಾರರ ಸಂಘದ [2][ಅಥವಾ ಸಂದರ್ಭಾನುಸಾರ ನೀರು ಬಳಕೆದಾರರ ಅಸೋಸಿಯೇಷನ್‌ಗೆ][2] ಜವಾಬ್ದಾರಿಯಾಗತಕ್ಕದ್ದು.][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ರಾಜ್ಯ ಸರ್ಕಾರವು, ಯಾವುದೇ ನಿರ್ಮಾಣ ಮಾಡಿದ ಅಥವಾ ನಿರ್ಮಾಣ ಮಾಡಲು ಉದ್ದೇಶಿಸಿದ ಯಾವುದೇ ನೀರಾವರಿ ಕಾಮಗಾರಿಯಿಂದ ಸೂಕ್ತ ನೀರಾವರಿ ಆಗಬೇಕೆಂಬ ಹಿತದೃಷ್ಟಿಯಿಂದ ಯಾವುದೇ ಪ್ರದೇಶ ಅಥವಾ ಪ್ರದೇಶಗಳಲ್ಲಿ ಬಾವಿಗಳ ನಿರ್ಮಾಣವನ್ನು ನಿಯಂತ್ರಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟಲ್ಲಿ, ಅದು ಅಧಿಸೂಚನೆ ಮೂಲಕ ಅಂತಹ ಪ್ರದೇಶ ಅಥವಾ ಪ್ರದೇಶಗಳನ್ನು ನಿರ್ದಿಷ್ಟಪಡಿಸಬಹುದು; ಮತ್ತು ನಂತರ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರದ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಇತರ ಪ್ರಾಧಿಕಾರಿಯ ಪೂರ್ವ ಮಂಜೂರಾತಿಯ ಹೊರತು ಮತ್ತು ರಾಜ್ಯ ಸರ್ಕಾರ ಅಥವಾ ಅಂತಹ ಪ್ರಾಧಿಕಾರಿಯು ವಿಧಿಸಬಹುದಾದ ಷರತ್ತಿಗೊಳಪಟ್ಟ ಹೊರತು ಅಂತಹ ಪ್ರದೇಶಗಳೊಳಗೆ ಅಥವಾ ಪ್ರದೇಶಗಳಲ್ಲಿ ಯಾವುದೇ ಬಾವಿಯನ್ನು ನಿರ್ಮಿಸತಕ್ಕದ್ದಲ್ಲ.

**5. ನೀರಾವರಿ ಕಾಮಗಾರಿಗಳ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಬೇಕಾದಾಗ ಹೊರಡಿಸಬೇಕಾದ ಅಧಿಸೂಚನೆ.-** (1) ರಾಜ್ಯ ಸರ್ಕಾರ ಅಥವಾ ಇದರ ಸಂಬಂಧದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತನಾದ ಯಾರೇ ಅಧಿಕಾರಿಗೆ, ನೈಸರ್ಗಿಕವಾಗಿ ನೀರು ಹರಿಯುತ್ತಿರುವ ಯಾವುದೇ ನದಿಯ ಅಥವಾ ಹಳ್ಳದ ನೀರನ್ನು ಅಥವಾ ಯಾವುದೇ ಸರೋವರ ಅಥವಾ ನಿಂತ ನೀರಿನ ಯಾವುದೇ ಇತರ ಸ್ವಾಭಾವಿಕ ಶೇಖರಣೆಯ ನೀರನ್ನು ಈಗ ಇರುವ ಅಥವಾ ಉದ್ದೇಶಿತ ನೀರಾವರಿ ಕಾಮಗಾರಿಗಳ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ವಿನಿಯೋಗಿಸುವುದು ಅಥವಾ ಬಳಸುವುದು ವಿಹಿತ ಎಂದು ಕಂಡುಬಂದರೆ, ರಾಜ್ಯ ಸರ್ಕಾರ ಅಥವಾ ಅಧಿಕೃತ ಅಧಿಕಾರಿಯು, ಅಧಿಸೂಚನೆಯ ಮೂಲಕ, ಆ ನೀರನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಒಂದು ದಿನದ ನಂತರ, ಅಂದರೆ ಅಧಿಸೂಚನೆ ದಿನಾಂಕದಿಂದ ಮೂರು ತಿಂಗಳಿಗಿಂತ ಮುಂಚಿತವಲ್ಲದಂತೆ ವಿನಿಯೋಗಿಸುವುದಾಗಿ ಅಥವಾ ಬಳಸಿಕೊಳ್ಳುವುದಾಗಿ ಘೋಷಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ದಿನಾಂಕದ ತರುವಾಯ, ಯಾವುದೇ ಸಮಯಕ್ಕೆ, ಆ ನೀರನ್ನು ವಿನಿಯೋಗಿಸುವುದಕ್ಕಾಗಿ ಅಥವಾ ಬಳಸಿಕೊಳ್ಳುವುದಕ್ಕಾಗಿ ನೀರಾವರಿ ಅಧಿಕಾರಿಯು, ಯಾವುದೇ ಜಮೀನನ್ನು ಪ್ರವೇಶಿಸಬಹುದು, ಯಾವುದೇ ತಡೆಯನ್ನು ತೆಗೆದುಹಾಕಬಹುದು, ಯಾವುದೇ ನಾಲೆಯನ್ನು ಮುಚ್ಚಬಹುದು ಮತ್ತು ಅವಶ್ಯಕವಾದ ಯಾವುದೇ ಕಾರ್ಯವನ್ನು ಮಾಡಬಹುದು ಮತ್ತು ಅಂತಹ ಉದ್ದೇಶಕ್ಕಾಗಿ ತಾನು ಸೂಕ್ತವೆಂದು

ಭಾವಿಸುವಂತಹ ಅಧೀನ ಅಧಿಕಾರಿಗಳನ್ನು ಅಥವಾ ಇತರ ವ್ಯಕ್ತಿಗಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಬಹುದು ಅಥವಾ ಪ್ರತಿಯೋಜಿಸಬಹುದು ಅಥವಾ ನೇಮಿಸಿಕೊಳ್ಳಬಹುದು.

**6. ವಿಚಾರಣೆಗಾಗಿ ಪ್ರವೇಶ.–** ಉದ್ದೇಶಿತ ನೀರಾವರಿ ಕಾಮಗಾರಿಯ ಅಥವಾ ಹಾಲಿ ಇರುವ ನೀರಾವರಿ ಕಾಮಗಾರಿಯ ನಿರ್ವಹಣೆಯ ಸಂಬಂಧದಲ್ಲಿ ಯಾವುದೇ ವಿಚಾರಣೆ ಅಥವಾ ತಪಾಸಣೆಯನ್ನು ಮಾಡುವುದು ಅವಶ್ಯವಾದಾಗಲೆಲ್ಲ, ನೀರಾವರಿ ಅಧಿಕಾರಿ ಅಥವಾ ಅಂತಹ ನೀರಾವರಿ ಅಧಿಕಾರಿಯ ಸಾಮಾನ್ಯ ಅಥವಾ ವಿಶೇಷ ಆದೇಶದ ಮೇರೆಗೆ ಕಾರ್ಯ ಮಾಡುತ್ತಿರುವ ಯಾರೇ ಅಧಿಕಾರಿಯು,–

(ಎ) ಆ ಉದ್ದೇಶಗಳಿಗಾಗಿ ಅವಶ್ಯವೆಂದು ಅವನು ಯೋಚಿಸಿದಂತೆ ಜಮೀನನ್ನು ಪ್ರವೇಶಿಸಬಹುದು; ಮತ್ತು

(ಬಿ) ಆ ಪ್ರದೇಶದ, ಆ ಭೂಮಿಯು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗುವ ಸಂಭವವಿದೆ ಎಂದು ಒಂದು ಅಧಿಸೂಚನೆಯನ್ನು, ರಾಜ್ಯ ಸರ್ಕಾರವು, ಭೂಸ್ವಾಧೀನ ಅಧಿನಿಯಮ, 1894ರ 4ನೇ ಪ್ರಕರಣದ ಉಪಬಂಧಗಳ ಮೇರೆಗೆ ಹೊರಡಿಸಿದ್ದರೆ, ಅವನು, ಚಲಾಯಿಸಬಹುದಾಗಿದ್ದ ಎಲ್ಲ ಅಧಿಕಾರಗಳನ್ನು ಮತ್ತು ಮಾಡಬಹುದಾಗಿದ್ದ ಎಲ್ಲ ಕಾರ್ಯಗಳನ್ನು ಆ ಜಮೀನಿನ ಸಂಬಂಧದಲ್ಲಿ ಚಲಾಯಿಸಬಹುದು ಮತ್ತು ಮಾಡಬಹುದು; ಹಾಗೂ

(ಸಿ) ಅಂತಹ ವಿಚಾರಣೆ ಮತ್ತು ತಪಾಸಣೆಯ ಉದ್ದೇಶಕ್ಕಾಗಿ ಜಲಮಾಪಕಗಳನ್ನು ಅಳವಡಿಸಬಹುದು ಹಾಗೂ ನಿರ್ವಹಿಸಬಹುದು ಮತ್ತು ಅವಶ್ಯವಾದ ಇತರ ಎಲ್ಲ ಕೆಲಸಗಳನ್ನು ಮಾಡಬಹುದು.

**7. ಸರಬರಾಜನ್ನು ತಪಾಸಣೆ ಮಾಡುವ ಮತ್ತು ವಿನಿಯಮಿಸುವ ಅಧಿಕಾರ.–** ನೀರಾವರಿ ಅಧಿಕಾರಿ ಅಥವಾ ಅಂತಹ ನೀರಾವರಿ ಅಧಿಕಾರಿಯ ಸಾಮಾನ್ಯ ಅಥವಾ ವಿಶೇಷ ಆದೇಶದ ಮೇರೆಗೆ ಕಾರ್ಯ ಮಾಡುವ ಯಾರೇ ವ್ಯಕ್ತಿಯು, ಸರಬರಾಜಾದ ನೀರಿನ ಬಳಕೆಯ ತಪಾಸಣೆ ಮಾಡುವ ಅಥವಾ ವಿನಿಯಮಿಸುವ ಅಥವಾ ಆ ಮೂಲಕ ನೀರಾವರಿಯಾದ ಅಥವಾ ನೀರಾವರಿಗೆ ಒಳಪಡುವ ಜಮೀನಿನ ಅಳತೆ ಮಾಡುವ  ಅಥವಾ ನೀರು ದರವನ್ನು ವಿಧಿಸಲು ಮತ್ತು ಅಂತಹ ನೀರು ಸರಬರಾಜು ಮಾಡುತ್ತಿರುವಂತಹ ನೀರಾವರಿ ಕಾಮಗಾರಿಯ ಸೂಕ್ತ ವಿನಿಯಮ, ನಿರ್ವಹಣೆ ಮತ್ತು ವ್ಯವಸ್ಥಾಪನೆಗಾಗಿ ಅವಶ್ಯವಿರುವ ಎಲ್ಲಾ ಕೆಲಸಗಳನ್ನು ಮಾಡುವ ಉದ್ದೇಶಕ್ಕಾಗಿ ಯಾವುದೇ ಜಮೀನು, ಕಟ್ಟಡ ಅಥವಾ ಹೊಲ–ಕಾಲುವೆಯನ್ನು ಪ್ರವೇಶಿಸಬಹುದು.

**8. ದುರಸ್ತಿ ಮಾಡಲು ಮತ್ತು ಅಪಘಾತ ತಡೆಯಲು ಪ್ರವೇಶಾಧಿಕಾರ.–** ನೀರಾವರಿ ಕಾಮಗಾರಿಗೆ ಯಾವುದೇ ಅಪಘಾತ ಅಥವಾ ಹಾನಿಯ ಬಗ್ಗೆ ಶಂಕೆ ಉಂಟಾದರೆ ಅಥವಾ ಯಾವುದೇ ಅಪಘಾತ ಅಥವಾ ಹಾನಿ ಉಂಟಾದರೆ ನೀರಾವರಿ ಅಧಿಕಾರಿ ಅಥವಾ ಯಾರೇ ನೀರಾವರಿ ಅಧಿಕಾರಿಯ ಸಾಮಾನ್ಯ ಅಥವಾ ವಿಶೇಷ ಆದೇಶದ ಮೇರೆಗೆ ಕೆಲಸ ಮಾಡುವ ವ್ಯಕ್ತಿ ಅಥವಾ ವ್ಯಕ್ತಿಗಳು, ನೀರಾವರಿ ಕಾಮಗಾರಿಯು ಹೊಂದಿಕೊಂಡಿರುವ ಅಥವಾ ನೆರೆಹೊರೆಯಲ್ಲಿರುವ ಯಾವುದೇ ಜಮೀನನ್ನು ಪ್ರವೇಶಿಸಬಹುದು ಮತ್ತು ಮರಗಳನ್ನು, ಮತ್ತಿತರ ಸಾಮಾನುಗಳನ್ನು ತೆಗೆದು ಹಾಕಬಹುದು ಮತ್ತು ಅಂತಹ ಅಪಘಾತ ತಡೆಯುವಿಕೆಗಾಗಿ ಅಥವಾ ಯಾವುದೇ ಹಾನಿಯ ದುರಸ್ತಿಯ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತಹ ಎಲ್ಲಾ ಕೆಲಸಗಳನ್ನು ಕೈಗೊಳ್ಳಬಹುದು.

**9. ಅನುಭೋಗದಾರನಿಗೆ ನೋಟೀಸು.–** ನೀರಾವರಿ ಅಧಿಕಾರಿ ಅಥವಾ ಈ ಸಂಬಂಧದಲ್ಲಿ ಆತನ ಸಾಮಾನ್ಯ ಅಥವಾ ವಿಶೇಷ ಅದೇಶದ ಮೇರೆಗೆ ಕೆಲಸ ಮಾಡುವ ಯಾರೇ ಇತರ ವ್ಯಕ್ತಿಯು, 6, 7 ಅಥವಾ 8ನೇ ಪ್ರಕರಣದ ಉಪಬಂಧಗಳ ಮೇರೆಗೆ ಪ್ರವಾಹ ತಡೆಗಟ್ಟೆಗೆ ಹೊಂದಿಕೊಂಡಿರದ ನೀರಾವರಿ ಕಾಮಗಾರಿಯಿಂದ ನೀರು ಸರಬರಾಜು ಮಾಡದಿರುವಂತಹ ಯಾವುದೇ ಕಟ್ಟಡ ಅಥವಾ ಆವರಣ ಇರುವ ಅಂಗಳ ಅಥವಾ ವಾಸವಿರುವ ಮನೆಯ ಪಕ್ಕದಲ್ಲಿರುವ ತೋಟವನ್ನು ಯಾವಾಗಲಾದರೂ ಪ್ರವೇಶಿಸಬಹುದೆಂದು ಪ್ರಸ್ತಾಪಿಸಿದಲ್ಲಿ, ಅವನು ಆ ಸಂದರ್ಭದ ತುರ್ತಿಗನುಸಾರ ವಾಗಿರುವಂಥ ಅಂತಹ ಕಟ್ಟಡದ, ಅಂಗಳದ ಅಥವಾ ತೋಟದ ಅಧಿಭೋಗದಾರನಿಗೆ ಸೂಕ್ತ ಲಿಖಿತ ನೋಟೀಸನ್ನು ಮುಂಚಿತವಾಗಿ ನೀಡತಕ್ಕದ್ದು.

**10. ಕಾಲುವೆಗಳನ್ನು ದಾಟುವ ಸಾಧನಗಳನ್ನು ಒದಗಿಸುವುದು ಮತ್ತು ನೀರು ಹರಿವಿನ ಅಡಚಣೆಗಳನ್ನು ನಿವಾರಿಸುವುದು.–** ರಾಜ್ಯ ಸರ್ಕಾರವು [1][ಅಥವಾ ಸಂದರ್ಭಾನುಸಾರ ನೀರು ಬಳಕೆದಾರರ ಸಂಘವು [2][ಅಥವಾ ನೀರು ಬಳಕೆದಾರರ ಅಸೋಸಿಯೇಷನ್ನು][2]ಅದಕ್ಕೆ ವಹಿಸಿಕೊಟ್ಟಂತಹ ಯಾವುದೇ ನೀರಾವರಿ ಕಾಮಗಾರಿ ಸಂಬಂಧದಲ್ಲಿ][1] ಹೊಂದಿಕೊಂಡಂತಹ ಭೂಮಿಯ ನಿವಾಸಿಗಳ ಸಮಂಜಸ ಅನುಕೂಲಕ್ಕೆ ಅಗತ್ಯವೆಂದು ಭಾವಿಸುವಂಥ ಸ್ಥಳಗಳಲ್ಲಿ ಕಾಲುವೆಗಳನ್ನು ಮತ್ತು ನಾಲೆಗಳನ್ನು ದಾಟುವುದಕ್ಕೆ ಸೂಕ್ತವಾದ ಸಾಧನಗಳನ್ನು ಒದಗಿಸತಕ್ಕದ್ದು ಮತ್ತು ಹೊಂದಿಕೊಂಡಂಥ ಭೂಮಿಗೆ ನೀರು ಹರಿದುಹೋಗಲು ಕಾಲುವೆಯಿಂದ ಅಥವಾ ನಾಲೆಯಿಂದ ಅಡಚಣೆಯಾಗುವುದನ್ನು ತಪ್ಪಿಸಲು  ಸೂಕ್ತ ಸೇತುವೆಗಳನ್ನು, ಅಡಿಗಾಲುವೆಗಳನ್ನು ಅಥವಾ ಇತರ ಕಾಮಗಾರಿಗಳನ್ನು ನಿರ್ಮಿಸತಕ್ಕದ್ದು.

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**11. ಸರ್ಕಾರವು ಕೆಲವು ಪರಿಮಿತಿಗಳೊಳಗೆ ನದಿಗಳು, ಇತ್ಯಾದಿಗಳಿಗೆ ಇರುವ ಅಡ್ಡಿಗಳನ್ನು ನಿಷೇಧಿಸುವುದು.**- ಯಾವುದೇ ನದಿ, ಹೊಳೆ ಅಥವಾ ಸ್ವಾಭಾವಿಕವಾಗಿ ನೀರು ಹರಿವಿನ ನಾಲೆಯ ಅಡಚಣೆಯಿಂದಾಗಿ, ಸಾರ್ವಜನಿಕ ಆರೋಗ್ಯಕ್ಕೆ ಅಥವಾ ಸಾರ್ವಜನಿಕ ಅನುಕೂಲತೆಗೆ ಅಥವಾ ಯಾವುದೇ ನೀರಾವರಿ ಕಾಮಗಾರಿಗೆ ಅಥವಾ ನೀರಾವರಿ ಕಾಮಗಾರಿಯಿಂದ ನೀರು ಸರಬರಾಜಾಗುವಂತಹ ಯಾವುದೇ ಭೂಮಿಗೆ ಹಾನಿ ಉಂಟಾಗಿದೆ ಅಥವಾ ಉಂಟಾಗಬಹುದು ಎಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಾಗಲೆಲ್ಲ, ಅದು, ಅಧಿಸೂಚನೆ ಮೂಲಕ ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಪರಿಮಿತಿ ಯೊಳಗೆ ಅಂತಹ ಅಡಚಣೆಯನ್ನು ನಿಷೇಧಿಸಬಹುದು ಅಥವಾ ಅಂಥ ಪರಿಮಿತಿಯೊಳಗೆ ಅಂತಹ ಅಡಚಣೆಯನ್ನು ಅಥವಾ ಇತರ ಮಾರ್ಪಾಟನ್ನು ಮಾಡಲು ಆದೇಶಿಸಬಹುದು ಮತ್ತು ಆ ತರುವಾಯ, ಅಂತಹ ಪರಿಮಿತಿಯೊಳಗೆ ಇರುವಂತಹ ಸದರಿ ನದಿ, ತೊರೆ ಅಥವಾ ನೈಸರ್ಗಿಕವಾಗಿ ನೀರು ಹರಿದು ಹೋಗುವ ಕಾಲುವೆಯನ್ನು 2ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ನೀರು ಹೊರಕ್ಕೆ ಹರಿಸುವ ಕಾಮಗಾರಿ ಎಂದು ಭಾವಿಸತಕ್ಕದ್ದು.

**12. ನೀರಾವರಿ ಅಧಿಕಾರಿಯು ಅಡಚಣೆಯನ್ನು ಉಂಟುಮಾಡುವ ವ್ಯಕ್ತಿಗೆ ಆದೇಶವನ್ನು ಹೊರಡಿಸುವುದು.**- ನೀರಾವರಿ ಅಧಿಕಾರಿಯು, 11ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ನಂತರ, ಯಾವುದೇ ಅಂತಹ ಅಡಚಣೆಯನ್ನು ಉಂಟುಮಾಡುವ ಅಥವಾ ಅದರ ನಿಯಂತ್ರಣವನ್ನು ಹೊಂದಿರುವ ಯಾರೇ ವ್ಯಕ್ತಿಗೆ, ಅಂತಹ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಅವಧಿಯೊಳಗೆ ಅದನ್ನು ತೆಗೆದುಹಾಕಲು ಅಥವಾ ಅದನ್ನು ಮಾರ್ಪಾಟು ಮಾಡಲು ಆದೇಶಿಸಬಹುದು.

**13. ನೀರಾವರಿ ಅಧಿಕಾರಿಯು ಅಡೆತಡೆಯನ್ನು ತೆಗೆದುಹಾಕಲು ವ್ಯವಸ್ಥೆ ಮಾಡುವುದು.**- 12ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಅಂತಹ ವ್ಯಕ್ತಿಯು ಆದೇಶವನ್ನು ಪಾಲಿಸದಿದ್ದಲ್ಲಿ, ನೀರಾವರಿ ಅಧಿಕಾರಿಯು, ಆ ಅಡೆತಡೆಯನ್ನು ತೆಗೆದುಹಾಕುವ ಅಥವಾ ಮಾರ್ಪಾಟುಗೊಳಿಸುವ ವ್ಯವಸ್ಥೆ ಮಾಡಬಹುದು ಮತ್ತು ಅಂತಹ ವ್ಯಕ್ತಿಯು, ಹಾಗೆ ತೆಗೆದು ಹಾಕಿದ್ದಕ್ಕೆ ಅಥವಾ ಮಾರ್ಪಾಟು ಮಾಡಿದ್ದಕ್ಕೆ ಆದ ವೆಚ್ಚವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ಯಾರಿಗೆ ಆ ಆದೇಶವನ್ನು ನೀಡಲಾಗಿರುವುದೋ ಆ ವ್ಯಕ್ತಿಯು, ಹಾಗೆ ತೆಗೆದು ಹಾಕಿದ್ದಕ್ಕೆ ಅಥವಾ ಮಾರ್ಪಾಟಿಗೆ ಆದ ವೆಚ್ಚವನ್ನು ಸಂದಾಯ ಮಾಡಬೇಕೆಂದು ಕೇಳಿದಾಗ, ಸಂದಾಯ ಮಾಡದಿದ್ದರೆ ಅಂತಹ ವೆಚ್ಚವನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲಿ ಮಾಡಲು ಅವಕಾಶವಿರತಕ್ಕದ್ದು.

**14. ನಾಲಾ ಕಾಮಗಾರಿ ನಿರ್ಮಾಣ.**- ಯಾವಾಗಲಾದರೂ [1][ಯಾವುದೇ ನೀರು ಬಳಕೆದಾರರ ಸಂಘಕ್ಕೆ ಯಾವುದೇ ನೀರಾವರಿ ಕಾಮಗಾರಿ ವಹಿಸಿಕೊಟ್ಟ ಸಂದರ್ಭದಲ್ಲಿ ಮತ್ತು ರಾಜ್ಯ ಸರ್ಕಾರಕ್ಕೆ ಇತರ ಸಂದರ್ಭಗಳಲ್ಲಿ][1] ಸಾರ್ವಜನಿಕ ಆರೋಗ್ಯಕ್ಕಾಗಿ ಅಥವಾ ಯಾವುದೇ ಜಮೀನಿನ ಸೂಕ್ತ ಸಾಗುವಳಿಯ ಸುಧಾರಣೆಗಾಗಿ ಅಥವಾ ನೀರಾವರಿಗೆ ಅಥವಾ ಯಾವುದೇ ನಾಲಾ ಕಾಮಗಾರಿ ಅಗತ್ಯವಿದೆಯೆಂದು ಅಥವಾ ಪ್ರವಾಹದಿಂದ ಅಥವಾ ನೀರಿನ ಇತರ ಶೇಖರಣೆಗಳಿಂದ ಅಥವಾ ನದಿಯ ಮೂಲಕ ಆದ ಭೂಸವೆತದಿಂದ ರಕ್ಷಣೆ ಅಗತ್ಯವಿದೆಯೆಂದು ಕಂಡುಬಂದಾಗಲೆಲ್ಲಾ [2][ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ, ನೀರು ಬಳಕೆದಾರರ ಸಂಘವು][2] [3][ಅಥವಾ ನೀರು ಬಳಕೆದಾರರ ಅಸೋಸಿಯೇಷನ್ನು][3] ತನ್ನ ವಿವೇಚನೆಗನುಗುಣವಾಗಿ ಅಂತಹ ಕಾಮಗಾರಿಯ ನಿರ್ಮಾಣಕ್ಕಾಗಿ ಒಂದು ಯೋಜನೆಯನ್ನು ತಯಾರುಮಾಡಿ ಅದನ್ನು ಕಾರ್ಯಗತಗೊಳಿಸಬಹುದು ಮತ್ತು ಅಂಥ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಲು ರಾಜ್ಯ ಸರ್ಕಾರದಿಂದ [1][ಅಥವಾ ಸಂದರ್ಭಾನುಸಾರ, ನೀರು ಬಳಕೆದಾರರ ಸಂಘದಿಂದ][1] [3][ಅಥವಾ ನೀರು ಬಳಕೆದಾರರ ಅಸೋಸಿಯೇಷನ್‌ನಿಂದ][3] ಅಧಿಕೃತನಾದ ವ್ಯಕ್ತಿಯು ಅದಕ್ಕೆ ಸಂಬಂಧಪಟ್ಟಂತೆ ನೀರಾವರಿ ಅಧಿಕಾರಿಗಳಿಗೆ 6, 7 ಮತ್ತು 8ನೇ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು ಹಾಗೂ 9 ಮತ್ತು 35ನೇ ಪ್ರಕರಣಗಳ ಮೂಲಕ ನೀರಾವರಿ ಅಧಿಕಾರಿಗಳಿಗೆ ವಿಧಿಸಿದ ಹೊಣೆಗಾರಿಕೆಗಳಿಗೆ ಅವನು ಬದ್ಧನಾಗಿರತಕ್ಕದ್ದು.

1. 2000ದ ಅಧಿನಿಯಮದ ಸಂಖ್ಯೆ 24ರ ಮೂಲಕ ದಿನಾಂಕ 14.6.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2000ದ ಅಧಿನಿಯಮದ ಸಂಖ್ಯೆ 24ರ ಮೂಲಕ ದಿನಾಂಕ 14.6.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ 25.02.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ - III

## ಹೊಲ - ಕಾಲುವೆಗಳು

**15. ಯಾವುದೇ ಪ್ರದೇಶದಲ್ಲಿ ಹೊಲ -ಕಾಲುವೆಗಳ ಅಗತ್ಯತೆಯನ್ನು ಮತ್ತು ಅವುಗಳ ಪಂಕ್ತೀಕರಣವನ್ನು ನಿರ್ಧರಿಸುವುದು:**- (1) ಸಾಗುವಳಿ ಉದ್ದೇಶಗಳಿಗಾಗಿ ಕಾಮಗಾರಿಯಿಂದ ನೀರು ಸರಬರಾಜು ಅಗತ್ಯವಿರುವ ಭೂಮಿಗಳಿಗೆ ಹಾಗೆ ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಪ್ರದೇಶದಲ್ಲಿ ಹೊಲ-ಕಾಲುವೆಗಳ ನಿರ್ಮಾಣವು ಅಗತ್ಯವೆಂದು ನೀರಾವರಿ ಅಧಿಕಾರಿಗೆ ಮನದಟ್ಟಾದರೆ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಿರುವ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಮುಂಚಿತವಲ್ಲದ ದಿನಾಂಕದ ನಂತರ ಅಂತಹ ಹೊಲ ಕಾಲುವೆಗಳನ್ನು ನಿರ್ಮಾಣ ಮಾಡಬಹುದೆಂದು

ಘೋಷಿಸಬಹುದು. ಅಂತಹ ಅಧಿಸೂಚನೆಯ ಒಂದು ಪ್ರತಿಯನ್ನು, ಸಂಬಂಧಪಟ್ಟ ಗ್ರಾಮಗಳಲ್ಲಿ ಪ್ರಕಟಣೆಗಾಗಿ ಆ ಪ್ರದೇಶದ ತಹಶೀಲ್ದಾರರಿಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದ ನಂತರ, ನೀರಾವರಿ ಅಧಿಕಾರಿಯು ಹೊಲ-ಕಾಲುವೆಗಳ ಸೂಕ್ತ ಪಂಕ್ತೀಕರಣವನ್ನು ನಿರ್ಧರಿಸತಕ್ಕದ್ದು ಮತ್ತು ಅದರ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವೆಂದು ಅವನು ಅಭಿಪ್ರಾಯಪಡುವ ಜಮೀನನ್ನು ಗುರುತು ಮಾಡತಕ್ಕದ್ದು. ಅಂತಹ ಗ್ರಾಮ ಅಥವಾ ಗ್ರಾಮಗಳಲ್ಲಿರುವ ಜಮೀನಿನ ಅಂಥ ಭಾಗವನ್ನು ಹಾಗೆ ಗುರುತು ಮಾಡಲಾಗಿದೆ ಎಂಬುದಾಗಿ ಅವರ ಕಛೇರಿಯ ನೋಟೀಸು ಬೋರ್ಡಿನ ಮೇಲೆ ಅಂಟಿಸುವ ಮೂಲಕ ಒಂದು ಅಧಿಸೂಚನೆಯನ್ನು ಕೂಡಲೇ ಪ್ರಕಟಿಸತಕ್ಕದ್ದು ಮತ್ತು ಹೊಲ-ಕಾಲುವೆಯನ್ನು ಯಾವ ಗ್ರಾಮಗಳ ಮೂಲಕ ಹಾದು ಹೋಗುತ್ತದೆಯೋ ಅಂತಹ ಪ್ರತಿ ಗ್ರಾಮಗಳಲ್ಲಿ, ಅಂತಹ ಜಮೀನುಗಳ ಮೇಲೆ ಪ್ರಕಟಣೆ ಸಲುವಾಗಿ ತಹಶೀಲ್ದಾರರಿಗೆ ಅಂತಹ ಅಧಿಸೂಚನೆಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು. ಅವನು ಅಂತಹ ಜಮೀನು ಇರುವಂತಹ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗೆ ಸಹ ಅಂತಹ ಅಧಿಸೂಚನೆಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

**16. ಜಿಲ್ಲಾಧಿಕಾರಿಯು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು.–** (1) 15ನೆಯ ಪ್ರಕರಣದ ಮೇರೆಗೆ ಅಧಿಸೂಚನೆಯ ಪ್ರತಿಯನ್ನು ಸ್ವೀಕರಿಸಿದ ಮೇಲೆ, [1][ಜಿಲ್ಲಾಧಿಕಾರಿಯು ಅಂತಹ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಅಂತಹ ಜಮೀನಿನ ಮಾಲೀಕನಿಗೆ ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ನೋಟೀಸನ್ನು ಕೊಡತಕ್ಕದ್ದು ಮತ್ತು ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಸೂಕ್ತ ಅವಕಾಶವನ್ನು ಅವರಿಗೆ ಕೊಟ್ಟ ನಂತರ,][1] ಅಂತಹ ಜಮೀನು ಹೊಲ-ಕಾಲುವೆಗೆ ಅಗತ್ಯವಾಗಿದೆ ಎಂದು ಮನದಟ್ಟಾದಲ್ಲಿ, ಭೂ ಸ್ವಾಧೀನ ಅಧಿನಿಯಮ, 1894ರ 6ನೇ ಪ್ರಕರಣದ ಮೇರೆಗೆ ಭೂಮಿಯ ಸ್ವಾಧೀನಕ್ಕಾಗಿ ರಾಜ್ಯ ಸರ್ಕಾರವು ಘೋಷಣೆ ಹೊರಡಿಸಿದ್ದರೆ ಹೇಗೋ ಹಾಗೆ ಮತ್ತು ಸರ್ಕಾರವು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ಅಂತಹ ಭೂಮಿಯ ಸ್ವಾಧೀನಕ್ಕಾಗಿ ಆದೇಶವನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗೆ ನಿರ್ದೇಶಿಸಿದ್ದರೆ ಮತ್ತು ರಾಜ್ಯ ಸರ್ಕಾರವು ಸದರಿ ಅಧಿನಿಯಮದ 17ನೇ ಪ್ರಕರಣದ ಮೇರೆಗೆ ತ್ವರಿತ ಸ್ವಾಧೀನವನ್ನು ತೆಗೆದುಕೊಳ್ಳಲು ಆದೇಶಗಳನ್ನು ಹೊರಡಿಸಿದ್ದರೆ ಹೇಗೋ ಹಾಗೆ, ಆ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳತಕ್ಕದ್ದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಭೂಸ್ವಾಧೀನ ಅಧಿನಿಯಮ, 1894ರಲ್ಲಿ ಏನೇ ಒಳಗೊಂಡಿದ್ದರೂ, 15ನೇ ಪ್ರಕರಣದ ಮೇರೆಗೆ ಒಂದು ಹೊಲ-ಕಾಲುವೆಯ ನಿರ್ಮಾಣದ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಸಾರ್ವಜನಿಕ ಉದ್ದೇಶಕ್ಕಾಗಿ ಎಂದು ಭಾವಿಸತಕ್ಕದ್ದು. [1][XXX][1]

[1][**ವಿವರಣೆ:** I X X X

**ವಿವರಣೆ:** II X X X][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**17. ಸ್ವಾಧೀನಪಡಿಸಿಕೊಂಡಂತಹ ಭೂಮಿ ಸರ್ಕಾರದ ಸ್ವತ್ತಾಗಿರುವುದು.–** ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ, ನೀರಾವರಿ ಅಧಿಕಾರಿಯು, ಗೊತ್ತುಪಡಿಸಿದ ರೀತಿಯಲ್ಲಿ ಗಡಿ ಗುರುತುಗಳನ್ನು ಮಾಡತಕ್ಕದ್ದು ಮತ್ತು ಆನಂತರ ಭೂಮಿಯ ಮಾಲಿಕತ್ವವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

[1][**18. X X X**

**19. X X X**][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**20. ಹೊಲ -ಕಾಲುವೆಗಳ [1][ಬಳಕೆದಾರರ][1] ಹೊಣೆಗಾರಿಕೆಗಳು:–** (1) ಪ್ರತಿಯೊಬ್ಬ ಹೊಲ-ಕಾಲುವೆಯ [1][ಬಳಕೆದಾರನು][1],–

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ನೀರು ಹರಿದು ಹೋಗಲು ಅನುಕೂಲವಾಗುವಂತೆ ಅಂತಹ ಹೊಲ-ಕಾಲುವೆಯನ್ನು ದುರಸ್ತಿ ಮಾಡಿ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲು ಬದ್ಧನಾಗಿರತಕ್ಕದ್ದು;

[1][(ಬಿ) X X X][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಹೊಲ-ಕಾಲುವೆಯ ಪ್ರತಿಯೊಬ್ಬ ಬಳಕೆದಾರನೂ [1][XXX][1] ಅಧ್ಯಾಯ IVರ ಉಪಬಂಧಗಳಿಗೊಳಪಟ್ಟು ನಿಯಮಿಸಬಹುದಾದಂತಹ ನಿಬಂಧನೆಗಳ ಮೇಲೆ ಅಂತಹ ಹೊಲ-ಕಾಲುವೆಯಿಂದ ನೀರಿನ ಸರಬರಾಜಿಗೆ ಹಕ್ಕುದಾರನಾಗಿರತಕ್ಕದ್ದು.

[1][**21.** **X X X**

**22.** **X X X**

**23.** **X X X**][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**24. ಕಾಮಗಾರಿಯನ್ನು ಮಾಡಲು ಅಥವಾ ಹೊಲ-ಕಾಲುವೆಯನ್ನು ದುರಸ್ತಿ ಮಾಡಲು ಬಳಕೆದಾರನು ತಪ್ಪಿದರೆ, ಅದನ್ನು ನೀರಾವರಿ ಅಧಿಕಾರಿಯು ಮಾಡುವುದು.**- (1) ಹೊಲ-ಕಾಲುವೆಯ ಯಾರೇ ಬಳಕೆದಾರನು 20ನೆಯ ಪ್ರಕರಣದ (1)ನೆಯ ಉಪ ಪ್ರಕರಣದ (ಎ) ಖಂಡದ ಮೂಲಕ ಅವನಿಗೆ ವಿಧಿಸಿದ ಯಾವುದೇ ಹೊಣೆಗಾರಿಕೆಯನ್ನು ಪೂರ್ಣಗೊಳಿಸಲು ತಪ್ಪಿದಲ್ಲಿ, ನೀರಾವರಿ ಅಧಿಕಾರಿಯು, ನೋಟೀಸಿನ ಮೂಲಕ, ಅಂತಹ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಏಳು ದಿವಸಗಳಿಗಿಂತ ಕಡಿಮೆ ಇಲ್ಲದ ಅವಧಿಯೊಳಗೆ ಅವಶ್ಯ ದುರಸ್ತಿಯನ್ನು ಮಾಡಬೇಕೆಂದು ಅವನನ್ನು ಅಗತ್ಯಪಡಿಸಬಹುದು ಮತ್ತು ಅವನು ಹಾಗೆ ಮಾಡಲು ತಪ್ಪಿದ ಸಂದರ್ಭದಲ್ಲಿ ಮತ್ತು ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ಅಂತಹ ದುರಸ್ತಿ ಮಾಡಲು ತಗಲುವ ಎಲ್ಲಾ ವೆಚ್ಚಗಳು, ರಾಜ್ಯ ಸರ್ಕಾರಕ್ಕೆ ಅಂಥ ಬಳಕೆದಾರನಿಂದ ಬರತಕ್ಕ ಮತ್ತು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಿಕೊಳ್ಳಲು ಅವಕಾಶವಿರತಕ್ಕ ಮೊತ್ತವಾಗಿರತಕ್ಕದ್ದು:

[1][ಪರಂತು, ನೀರು ಬಳಕೆದಾರರ ಸಂಘಕ್ಕೆ ವಹಿಸಲಾದ ನೀರಾವರಿ ಕಾಮಗಾರಿಯ ಸಂಬಂಧದಲ್ಲಿ, ಅಂಥ ವೆಚ್ಚಗಳನ್ನು, ಒಂದು ಸಹಕಾರಿ ಸಂಘಕ್ಕೆ ಅಂಥ ಬಳಕೆದಾರರಿಂದ ಬರಬೇಕಾದ ಬಾಕಿ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅದನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಉಪಬಂಧಗಳಿಗೆ ಅನುಸಾರವಾಗಿ ವಸೂಲಿ ಮಾಡಲು ಸಹ ಅವಕಾಶವಿರತಕ್ಕದ್ದು.][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) X X X][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**25.** **XXX**][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**26.** **ಸ್ವಾಧೀನಪಡಿಸಿಕೊಂಡ ಭೂಮಿಗಳಲ್ಲಿ ಹೊಲ -ಕಾಲುವೆಯ ನಿರ್ಮಾಣ.**- ಯಾವುದೇ ಭೂಮಿಯನ್ನು 16ನೆಯ ಪ್ರಕರಣದನ್ವಯ ಸ್ವಾಧೀನಪಡಿಸಿಕೊಂಡ ಮತ್ತು 17ನೆಯ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸಿದ ನಂತರ ನೀರಾವರಿ ಅಧಿಕಾರಿಯು ಆ ಪ್ರದೇಶದಲ್ಲಿ ಅಗತ್ಯವಾದ ಹೊಲ-ಕಾಲುವೆಗಳನ್ನು ನಿರ್ಮಾಣ ಮಾಡತಕ್ಕದ್ದು.][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ- IV

## ನೀರಾವರಿಯ ವಿನಿಯಮನ

**27. ನೀರಾವರಿ ಕಾಮಗಾರಿಗಳಿಂದ ಒದಗುವ ನೀರು ಸರಬರಾಜು ವಿನಿಯಮನ.**- ಒಂದು ಅಧಿಸೂಚನೆಯ ಮೂಲಕ, ಯಾವುದೇ ನೀರಾವರಿ ಕಾಮಗಾರಿ ಅಥವಾ ನೀರಾವರಿ ಕಾಮಗಾರಿಗಳ ವರ್ಗದ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಸೂಕ್ತವಾಗಿ ಅಧಿಕಾರ ಪಡೆದ ನೀರಾವರಿ ಅಧಿಕಾರಿಯು, ನಂತರ ತಾನು ಸೂಕ್ತವೆಂದು ಭಾವಿಸುವಂತಹ ವಿಚಾರಣೆ ನಡೆಸಿದ ಮತ್ತು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಷ್ಟು ಸಂಖ್ಯೆಯ ಸರ್ಕಾರಿ ಮತ್ತು ಸರ್ಕಾರೇತರ

ಸದಸ್ಯರುಗಳನ್ನೊಳಗೊಂಡಂತೆ ನೇಮಿಸಿದ ಸಮಿತಿಯೊಂದಿಗೆ ಸಮಾಲೋಚನೆ ನಡೆಸಿದ ನಂತರ, ಪ್ರತಿವರ್ಷ ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ, ನಿರ್ದಿಷ್ಟಪಡಿಸಬಹುದಾದ ವರ್ಷಗಳ ಅವಧಿಗೆ ಒಂದು ಸಲ ಯಾವುದೇ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡವುಗಳನ್ನು ವಿನಿಯಮಿಸಬಹುದು,-

(i) ನೀರಾವರಿಗಾಗಿ ನೀರನ್ನು ಹೊರಕ್ಕೆ ಬಿಡುವ ವೇಳೆ;

(ii) ಸರಬರಾಜಿನ ಅವಧಿ;

(iii) ಸರಬರಾಜಿನ ಪರಿಮಾಣ; ಮತ್ತು

(iv) ಬೇರೆ ಬೇರೆ ಸಮಯಗಳಲ್ಲಿ ಸರಬರಾಜು ಮಾಡಬೇಕಾದ ಪ್ರದೇಶಗಳು.

**ವಿವರಣೆ**.- ಭೂಮಿಯ ನೀರಾವರಿಗೆ ನೀರು ದೊರಯುವಂತೆ ಮಾಡಿದಲ್ಲಿ, ಅಂತಹ ಭೂಮಿಗೆ ನೀರನ್ನು ಸರಬರಾಜು ಮಾಡಲಾಗಿದೆಯೆಂದು ಭಾವಿಸತಕ್ಕದ್ದು:

[1][ಪರಂತು, ನೀರಾವರಿ ಕಾಮಗಾರಿಯನ್ನು ನೀರು ಬಳಕೆದಾರರ ಸಂಘಕ್ಕೆ ವಹಿಸಿರುವ ಸಂದರ್ಭದಲ್ಲಿ, ನೀರಾವರಿ ಅಧಿಕಾರಿಯು, ರಾಜ್ಯ ಸರ್ಕಾರವು ಹಾಗೆ ನೇಮಕ ಮಾಡಿದ ಸಮಿತಿಯೊಡನೆ ಸಮಾಲೋಚಿಸುವುದಕ್ಕೆ ಬದಲಾಗಿ,-

(i) ನೀರು ಬಳಕೆದಾರರ ಸಂಘದ ಕಾರ್ಯಾಚರಣೆ ಪ್ರದೇಶವು ಒಂದು ಅಥವಾ ಹೆಚ್ಚು ಸಣ್ಣ ನೀರಾವರಿ ಕಾಮಗಾರಿಗಳಿಗೆ ಅಥವಾ ಏತ ನೀರಾವರಿ ಕಾಮಗಾರಿಗಳಿಗೆ ವ್ಯಾಪಿಸಿರುವ ಸಂದರ್ಭದಲ್ಲಿ, ಅಂಥ ನೀರು ಬಳಕೆದಾರರ ಸಂಘದೊಂದಿಗೆ; ಮತ್ತು

(ii) ಇತರ ಸಂದರ್ಭಗಳಲ್ಲಿ, ನೀರು ಬಳಕೆದಾರರ ಯೋಜನೆಯ ಮಟ್ಟದ ಮಹಾ ಮಂಡಳದೊಂದಿಗೆ

- ಸಮಾಲೋಚಿಸತಕ್ಕದ್ದು:][1]

[2][ಮತ್ತೂ ಪರಂತು, ಒಂದು ನೀರಾವರಿ ಕಾಮಗಾರಿಯನ್ನು ಒಂದು ನೀರು ಬಳಕೆದಾರ ಅಸೋಸಿಯೇಷನ್ನಿಗೆ ವಹಿಸಿದಾಗ, ನೀರಾವರಿ ಅಧಿಕಾರಿಯು, ರಾಜ್ಯ ಸರ್ಕಾರವು ಹಾಗೆ ನೇಮಕ ಮಾಡಲಾದ ಸಮಿತಿಯೊಡನೆ ಸಮಾಲೋಚಿಸುವ ಬದಲಿಗೆ ನೀರು ಬಳಕೆದಾರರ ಅಸೋಸಿಯೇಷನ್ನಿನೊಂದಿಗೆ ಸಮಾಲೋಚಿಸತಕ್ಕದ್ದು.][2]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 14.6.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ 25.2.2002 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**28. ನೀರಾವರಿ ಕಾಮಗಾರಿಯಿಂದ ನೀರು ಬಳಸಲು ಅನುಮತಿ ಕೋರಿ ಅರ್ಜಿ**.- (1) 27ನೆಯ ಪ್ರಕರಣದ ಮೇರೆಗೆ ನೀರು ಸರಬರಾಜನ್ನು ವಿನಿಯಮಿಸಲಾಗಿರುವಂತಹ ಯಾವುದೇ ಪ್ರದೇಶದಲ್ಲಿ ಸೇರಿಲ್ಲದ [1][XXX][1] ಭೂಮಿಗೆ ನೀರಾವರಿಗಾಗಿ, ನೀರಾವರಿ ಕಾಮಗಾರಿಯಿಂದ ನೀರು ಸರಬರಾಜನ್ನು ಕೋರುವ ಯಾರೇ ವ್ಯಕ್ತಿಯು, ಆ ಬಗ್ಗೆ ನೀರಾವರಿ ಅಧಿಕಾರಿಗೆ ಲಿಖಿತ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಂತಹ ನೀರಾವರಿ ಕಾಮಗಾರಿಯಿಂದ ನೀರು ದೊರಕುವಂತೆ ಮಾಡಲಾಗುವ ಭೂಮಿಗಳ ವಿಸ್ತೀರ್ಣವನ್ನು ನಿರ್ಧರಿಸಿ, ರಾಜ್ಯ ಸರ್ಕಾರವು ಮಾಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೊಳಪಟ್ಟು ಅಂತಹ ಅಧಿಕಾರಿಯು 27ನೆಯ ಪ್ರಕರಣದ ಮೇರೆಗೆ ನೀರಿನ ಸರಬರಾಜನ್ನು ವಿನಿಯಮಿಸಿರುವಂಥ ಯಾವುದೇ ಪ್ರದೇಶದಲ್ಲಿ ಸೇರಿರುವ [1][XXX][1] ಭೂಮಿಗಳಿಗೆ ನೀರಿನ ಸರಬರಾಜಿಗೆ ತೊಂದರೆ ಆಗದಂತೆ ಸರಬರಾಜು ಮಾಡಬಹುದೆಂದು ಅಭಿಪ್ರಾಯಪಟ್ಟಲ್ಲಿ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಆರು ವರ್ಷಗಳಿಗೆ ಮೀರದಂತಹ ಅವಧಿಗಾಗಿ ನೀರನ್ನು ಸರಬರಾಜು ಮಾಡಬಹುದು ಎಂದು ಅಂಥ ಆದೇಶವನ್ನು ಮಾಡಬಹುದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಭೂಮಿಗೆ ನೀರು ಸರಬರಾಜು ಆರು ನಿರಂತರ ವರ್ಷಗಳ ಅವಧಿಯವರೆಗೆ ಮಾಡಿದ ತರುವಾಯ ಅಂತಹ ಭೂಮಿಯ ಹಿಡುವಳಿದಾರನು ನೀರು ಸರಬರಾಜು ಖಾಯಂ ಆಗಿ ದೊರೆಯಬೇಕೆಂದು ಅರ್ಜಿ ಸಲ್ಲಿಸಿದಲ್ಲಿ, ಅಂತಹ ಅರ್ಜಿಯನ್ನು ನೀರಾವರಿ ಅಧಿಕಾರಿಯ ಅಭಿಪ್ರಾಯದೊಂದಿಗೆ ಜಿಲ್ಲೆಯ ಜಿಲ್ಲಾಧಿಕಾರಿಗೆ ಕಳುಹಿಸತಕ್ಕದ್ದು. ಆಗ ಜಿಲ್ಲೆಯ ಜಿಲ್ಲಾಧಿಕಾರಿಯು, 27ನೆಯ ಪ್ರಕರಣದನ್ವಯ ನೀರು ಸರಬರಾಜಿನ ವಿನಿಯಮಕ್ಕೊಳಪಟ್ಟಿರುವ ಪ್ರದೇಶದಲ್ಲಿ ಆ ಭೂಮಿಯನ್ನು [1][XXX][1] ಕಾನೂನಿನ ಅನುಸಾರವಾಗಿ ಸೇರಿಸಲು ಕ್ರಮ ಕೈಗೊಳ್ಳತಕ್ಕದ್ದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) (1)ನೇ ಮತ್ತು (2)ನೇ ಉಪ ಪ್ರಕರಣಗಳ ಮೇರೆಗೆ ತಾತ್ಕಾಲಿಕ ಸಾಗುವಳಿಗಾಗಿ ನೀರನ್ನು ಬಳಸಿಕೊಳ್ಳುವುದಕ್ಕೆ ವಿಧಿಸಬಹುದಾದ ನೀರು ದರವು [1][ಅಥವಾ ಸಂದರ್ಭಾನುಸಾರ ನೀರು ಚಾರ್ಜುಗಳು][1] [2][XXX][2] [1][ಆ ನೀರು ದರದ ಅಥವಾ ಸಂದರ್ಭಾನುಸಾರ ನೀರು ಚಾರ್ಜುಗಳ][1] ಎರಡುಪಟ್ಟು ಆಗಿರತಕ್ಕದ್ದು.

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದಿಂದ ಈ ಬಗ್ಗೆ ಅಧಿಕೃತ ಗೊಳಿಸಬಹುದಾದ ಅಂತಹ ಅಧಿಕಾರಿಯ ಮಂಜೂರಾತಿ ಪಡೆದು ಮತ್ತು ಅವರು ವಿಧಿಸಬಹುದಾದಂತಹ ಷರತ್ತುಗಳು, ಸಂದಾಯಗಳು ಮತ್ತು ನಿರ್ಬಂಧಗಳಿಗೊಳಪಟ್ಟು, ನೀರಾವರಿ ಅಧಿಕಾರಿಯು, 27ನೆಯ ಪ್ರಕರಣದ ಮೇರೆಗೆ ನೀರು ಸರಬರಾಜಿನ ವಿನಿಯಮಿಸಲಾದ ಯಾವುದೇ ಪ್ರದೇಶದಲ್ಲಿ ಸೇರಿಸಲಾಗಿರುವ [1][XXX][1] ಭೂಮಿಗಳಿಗೆ ಆಗುವ ನೀರು ಸರಬರಾಜಿಗೆ ತೊಂದರೆ ಆಗದಂತೆ, ಕೃಷಿಯೇತರ ಉದ್ದೇಶಗಳಿಗಾಗಿ ನೀರಾವರಿ ಕಾಮಗಾರಿಯಿಂದ ನೀರನ್ನು ತೆಗೆದುಕೊಳ್ಳಲು ಅನುಮತಿ ಕೊಡಬಹುದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(5) ಈ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಅನುಮತಿಯನ್ನು ಪಡೆಯದೆ ನೀರಾವರಿ ಕಾಮಗಾರಿಯಿಂದ ನೀರನ್ನು ಯಾರೇ ವ್ಯಕ್ತಿಯು ಉಪಯೋಗಿಸಿದಲ್ಲಿ, ಅಂಥ ಅನಧಿಕೃತ ನೀರು ಬಳಕೆಗಾಗಿ ಈ ಅಧಿನಿಯಮದ ಮೇರೆಗೆ ಅವನು ಅನುಭವಿಸಬೇಕಾದ ಯಾವುದೇ ದಂಡನೆಗೆ ಹೆಚ್ಚುವರಿಯಾಗಿ, ಅನುಮತಿಗಾಗಿ ಅರ್ಜಿ ಸಲ್ಲಿಸಿ ಅನುಮತಿ ಪಡೆದಿದ್ದಲ್ಲಿ, ಅವನು ಅನ್ಯಥಾ ಸಂದಾಯಮಾಡಬೇಕಾಗಿದ್ದ ನೀರು ದರದ [1][ಅಥವಾ ಸಂದರ್ಭಾನುಸಾರ ನೀರು ಚಾರ್ಜು][1] ಹೊರತು, ಅಂತಹ ನೀರಿನ ಅನಧಿಕೃತ ಉಪಯೋಗಕ್ಕಾಗಿ ಗೊತ್ತುಪಡಿಸಿದ ಅಧಿಕಾರಿಯು ನಿರ್ಧರಿಸಬಹುದಾದ ಹತ್ತುಪಟ್ಟಿಗಿಂತ ಕಡಿಮೆಯಾಗದ ಮತ್ತು ಮೂವತ್ತು ಪಟ್ಟಿಗಿಂತ ಹೆಚ್ಚಾಗದ ದರದಲ್ಲಿ ನೀರು ದರವನ್ನು [1][ಅಥವಾ ಸಂದರ್ಭಾನುಸಾರ ನೀರು ಚಾರ್ಜನ್ನು][1]ಅವನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**29. ನೀರಿನ ಸರಬರಾಜನ್ನು ನಿಲ್ಲಿಸುವುದು.**- ಯಾವುದೇ ಹೊಲ-ಕಾಲುವೆ ಅಥವಾ ನೀರು ಸರಬರಾಜಿಗೆ ಅರ್ಹನಾಗಿರುವಂತಹ ಯಾರೇ ವ್ಯಕ್ತಿಗೆ ನೀರಿನ ಸರಬರಾಜನ್ನು ಈ ಕೆಳಕಂಡ ಸಂದರ್ಭಗಳ ಹೊರತು, ನಿಲ್ಲಿಸತಕ್ಕದ್ದಲ್ಲ,-

(ಎ) ಸಕ್ಷಮ ಪ್ರಾಧಿಕಾರವು ಆದೇಶಿಸಿದ ಯಾವುದೇ ಕಾಮಗಾರಿಯನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಅಂತಹ ಸರಬರಾಜನ್ನು ಅಷ್ಟು ಕಾಲದವರೆಗೆ ನಿಲ್ಲಿಸುವ ಅಗತ್ಯವಿರುವಾಗಲೆಲ್ಲಾ ಮತ್ತು ಆ ವರೆಗೆ;

(ಬಿ) ಹೊಲ ಕಾಲುವೆಯಿಂದ ನೀರು ವ್ಯರ್ಥವಾಗಿ ಪೋಲಾಗದಂತೆ ತಡೆಯುವುದಕ್ಕಾಗಿ ಅಂಥ ನೀರು ಸರಬರಾಜು ಆಗುವ ಹೊಲ ಕಾಲುವೆಯನ್ನು ಸುಸ್ಥಿತಿಯಲ್ಲಿ ಇಡುವಾಗಲೆಲ್ಲ ಮತ್ತು ಆ ವರೆಗೆ ;

(ಸಿ) ನೀರಿಗೆ ಹಕ್ಕುಳ್ಳ ಇತರ ವ್ಯಕ್ತಿಗಳ ನ್ಯಾಯಸಮ್ಮತ ಬೇಡಿಕೆಗೆ ಅನುಸಾರ ಸರದಿ ಪ್ರಕಾರ ಸರಬರಾಜನ್ನು ಮಾಡುವುದು ಅವಶ್ಯವಿದ್ದಾಗಲೆಲ್ಲ ಮತ್ತು ಆವರೆಗೆ;

(ಡಿ) ನೀರಿನ ಪೋಲು ಅಥವಾ ದುರುಪಯೋಗವನ್ನು ತಡೆಯುವುದಕ್ಕೆ ಅವಶ್ಯವಿರುವಾಗಲ್ಲೆಲ್ಲಾ ಮತ್ತು ಆವರೆಗೆ;

(ಇ) ನೀರಾವರಿ ಅಧಿಕಾರಿಯು, ಕಾಲಕಾಲಕ್ಕೆ ಯುಕ್ತ ನೋಟೀಸು ನೀಡಿ ನಿಗದಿಪಡಿಸತಕ್ಕ ಅವಧಿಗಳಲ್ಲಿ;

(ಎಫ್) ಯಾವುದೇ ನೈಸರ್ಗಿಕ ಅಥವಾ ಋತುಮಾನದ ಕಾರಣಗಳಿಂದಾಗಿ, ನೀರಾವರಿ ಕಾಮಗಾರಿಯಲ್ಲಿ ನೀರಿನ ಸರಬರಾಜು ಕಡಿಮೆಯಾದಾಗಲೆಲ್ಲ ಮತ್ತು ಹಾಗೆ ಮಾಡುವುದು ಅವಶ್ಯವಿರುವವರೆಗೆ ;

[1][(ಜಿ) 32ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯನ್ನು ಉಲ್ಲಂಘಿಸಿ ಬಿತ್ತನೆ, ನಾಟಿ ಮಾಡುವ ಅಥವಾ ಬೆಳೆ ಬೆಳೆಯಲು ನೀರನ್ನು ಬಳಸಿದಾಗಲೆಲ್ಲಾ ಮತ್ತು ಆವರೆಗೆ;

(ಹೆಚ್) ನೀರಾವರಿ ಅಧಿಕಾರಿಯ ನಿಯಂತ್ರಣಕ್ಕೂ ಮೀರಿದ ಯಾವುದೇ ಕಾರಣಕ್ಕಾಗಿ ನೀರಿನ ಸರಬರಾಜನ್ನು ನಿಲ್ಲಿಸುವ ಅಗತ್ಯವಾದಾಗಲ್ಲೆಲ್ಲ ಮತ್ತು ಆವರೆಗೆ ;

(ಐ) ಒಬ್ಬ ವ್ಯಕ್ತಿಯು ನೀರಿನ ದರದ ಅಥವಾ ಸಂದರ್ಭಾನುಸಾರ ನೀರಿನ ಚಾರ್ಜು ಬಾಕಿಯನ್ನು ಸಂದಾಯ ಮಾಡದಿರುವಾಗಲ್ಲೆಲ್ಲಾ ಮತ್ತು ಆವರೆಗೆ.][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**30. ಒಂದು ಅಥವಾ ಹೆಚ್ಚಿನ ಬೆಳೆಗಳ ನೀರಾವರಿಗಾಗಿ ನೀರಿನ ಸರಬರಾಜು.–** ಒಂದು ಅಥವಾ ಹೆಚ್ಚಿನ ಬೆಳೆಗಳ ನೀರಾವರಿಗೆ ಮಾತ್ರ, ನೀರಾವರಿ ಕಾಮಗಾರಿಯಿಂದ ನೀರು ಸರಬರಾಜಾದಾಗ, ಅಂತಹ ನೀರನ್ನು ಉಪಯೋಗಿಸುವ ಹಕ್ಕು ಅಂತಹ ಬೆಳೆ ಅಥವಾ ಬೆಳೆಗಳು ಫಸಲಿಗೆ ಬರುವವರೆಗೆ ಮಾತ್ರ ಮುಂದುವರಿಯತಕ್ಕದೆಂದು ಮತ್ತು ಆ ಹಕ್ಕು ಅಂತಹ ಬೆಳೆ ಅಥವಾ ಬೆಳೆಗಳಿಗೆ ಮಾತ್ರ ಅನ್ವಯವಾಗತಕ್ಕದ್ದೆಂದು ಭಾವಿಸತಕ್ಕದ್ದು.

**31. ಜಮೀನುಗಳಲ್ಲಿ [1][XXX][1] ಸಾಗುವಳಿಯನ್ನು ವಿನಿಯಮಿಸುವುದು.–** (1) 32ನೆಯ ಪ್ರಕರಣದ ಉಪಬಂಧಗಳಿಗೆ ಮತ್ತು ಕಾಲಕಾಲಕ್ಕೆ ಹೊರಡಿಸಬಹುದಾದಂತಹ ನಿರ್ದೇಶನಗಳಿಗೆ ಒಳಪಟ್ಟು, ನೀರಾವರಿ ಅಧಿಕಾರಿಯು ಯಾವುದೇ ವರ್ಷದಲ್ಲಿ ತನ್ನ ನಿಯಂತ್ರಣದಲ್ಲಿರುವ ನೀರಾವರಿ ಕಾಮಗಾರಿಯಲ್ಲಿ ಲಭ್ಯವಾಗುವ ನೀರಿನ ಪರಿಮಾಣವನ್ನು ಗಮನದಲ್ಲಿಟ್ಟುಕೊಂಡು, ಗೊತ್ತುಪಡಿಸಿದ ರೀತಿಯಲ್ಲಿ ಮತ್ತು ಗೊತ್ತುಪಡಿಸಿದ ಸಮಯದೊಳಗೆ ಪ್ರಕಟಿಸಿದ ಆದೇಶದ ಮೂಲಕ ಮತ್ತು ನಿಯಮಿತ ಅವಧಿಯೊಳಗೆ ಅಂತಹ ನೀರಾವರಿ ಕಾಮಗಾರಿಯಿಂದ ನೀರಾವರಿಯಾಗುವ ಪ್ರದೇಶದಲ್ಲಿ ಬರುವ ಪ್ರದೇಶಗಳಲ್ಲಿ ಅಥವಾ ಭೂಮಿಗಳಲ್ಲಿ [1][XXX][1] ಬತ್ತ, ಕಬ್ಬು ಅಥವಾ ಯಾವುದೇ ಸಾರ್ವಕಾಲಿಕ ಬೆಳೆ ಅಥವಾ ಬಿಟ್ಟು ಬಿಟ್ಟು ಆಗುವ ನೀರಾವರಿ ಖುಷ್ಕಿ ಬೆಳೆಗಳು ಅಥವಾ ಖುಷ್ಕಿ ಇಲ್ಲವೆ ಅರೆ ಖುಷ್ಕಿ ಬೆಳೆಗಳನ್ನು ಬೆಳೆಯಬಹುದೆಂದು ನಿರ್ಧರಿಸಬಹುದು ಮತ್ತು ತದನುಸಾರವಾಗಿ ನೀರಾವರಿಗಾಗಿ ನೀರಿನ ಸರಬರಾಜನ್ನು ವಿನಿಯಮಿಸಬಹುದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೆಯ ಉಪಪ್ರಕರಣದ ಮೇರೆಗಿನ ನೀರಾವರಿ ಅಧಿಕಾರಿಯ ತೀರ್ಮಾನಕ್ಕನುಸಾರವಾಗಿ ನೀರಾವರಿ ಕಾಮಗಾರಿಯಿಂದ ನೀರಿನ ಸರಬರಾಜಿಗೆ ಅರ್ಹವಾಗಿರುವ ಯಾವುದೇ ಭೂಮಿಗೆ ನೀರನ್ನು ಸರಬರಾಜು ಮಾಡಿರದಿದ್ದಲ್ಲಿ, ಅಂಥ ಭೂಮಿಯ ಹಿಡುವಳಿದಾರನು ಅಂತಹ ಭೂಮಿಯ ಖುಷ್ಕಿ ನಿರ್ಧರಣೆಯ ಮೊತ್ತವನ್ನು ಮಾತ್ರ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀರಾವರಿ ಅಧಿಕಾರಿಯ ಆದೇಶದ ವಿರುದ್ಧ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ, ಸದರಿ ಆದೇಶದ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದು.

**32. ನೀರಾವರಿ ಪ್ರದೇಶದಲ್ಲಿ ಬೆಳೆಯಬೇಕಾದ ಬೆಳೆಯ ಬಗೆಯನ್ನು ಮತ್ತು ಅಂತಹ ಬೆಳೆಯ ಬಿತ್ತನೆಯ ಅವಧಿಯನ್ನು ನಿರ್ಧರಿಸುವ ಅಧಿಕಾರ.–** (1) ಭೂಮಿಗಳ ಉತ್ತಮ ಸಾಗುವಳಿಗೆ ಮತ್ತು ನೀರಾವರಿ ಕಾಮಗಾರಿಯ ಜಲ ಸಂಪನ್ಮೂಲಗಳ ಯುಕ್ತ ರಕ್ಷಣೆಗಾಗಿ ಅಂತಹ ನೀರಾವರಿ ಕಾಮಗಾರಿ ಅಡಿಯಲ್ಲಿ ಭೂಮಿಯ ಮೇಲೆ ಬೆಳೆಯುವ ಬೆಳೆಯ ಬಗೆಗಳು ಮತ್ತು ಆ ಬಗೆಗಳ ಬಿತ್ತನೆಯ ಅವಧಿಯನ್ನು ವಿನಿಯಮಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದೂ ಮತ್ತು ಅಪೇಕ್ಷಣೀಯವೆಂದೂ ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ ಅದು ಹಾಗೆಂದು ಅಧಿಸೂಚನೆಯ ಮೂಲಕ ಒಂದು ಘೋಷಣೆಯನ್ನು ಮಾಡಬಹುದು.

(2) (1)ನೆಯ ಉಪ ಪ್ರಕರಣದ ಮೇರೆಗಿನ ಘೋಷಣೆಯನ್ನು ಮಾಡಿದ ಮೇಲೆ, ನೀರಾವರಿ ಅಧಿಕಾರಿಯು, 27ನೆಯ ಪ್ರಕರಣದ ಮೇರೆಗೆ ನೇಮಕವಾದ ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಜಿಲ್ಲಾಧಿಕಾರಿಯ ಅನುಮೋದನೆ ಪಡೆದು, ನಿರ್ದಿಷ್ಟಪಡಿಸಬಹುದಾದಂತಹ ರೀತಿಯಲ್ಲಿ ಪ್ರಕಟಿಸುವ ಅಧಿಸೂಚನೆಯ ಮೂಲಕ, ಅಂತಹ ನೀರಾವರಿ ಕಾಮಗಾರಿಯಿಂದ ನೀರು ಪಡೆಯುವ ಯಾವುದೇ ಭೂಮಿಯಲ್ಲಿ ಬೆಳೆಯತಕ್ಕ ಬೆಳೆಯ ಬಗೆಗಳನ್ನು ಮತ್ತು ಅಂತಹ ಬಗೆಯ ಬೆಳೆಗಳ ಬಿತ್ತನೆ ಕಾಲ ಮತ್ತು ನಾಟಿ ಮಾಡುವ ಕಾಲವನ್ನು ನಿರ್ದಿಷ್ಟಪಡಿಸಬಹುದು.

(3) (2)ನೆಯ ಉಪಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ನಂತರ, ಯಾರೇ ವ್ಯಕ್ತಿಯು ಅಂತಹ ನೀರಾವರಿ ಕಾಮಗಾರಿಯ ಅಧಿಸೂಚನೆಯ ಮೇರೆಗೆ ಯಾವುದೇ ಭೂಮಿಯಲ್ಲಿ ಬೆಳೆಯಬೇಕಾಗುವ ಅಂತಹ ನಿರ್ದಿಷ್ಟಪಡಿಸಿರುವ ಬೆಳೆಗಳ ಹೊರತಾಗಿ ಯಾವುದೇ ಬೆಳೆಯನ್ನು ಬೆಳೆಯತಕ್ಕದ್ದಲ್ಲ ಅಥವಾ ಬೆಳೆಸಲು ಅನುಮತಿಸತಕ್ಕದ್ದಲ್ಲ. ಯಾರೇ ವ್ಯಕ್ತಿಯು ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಹೊರತು ಯಾವುದೇ ಸಮಯದಲ್ಲಿ ಬೆಳೆಯನ್ನು ಬಿತ್ತತಕ್ಕದ್ದಲ್ಲ ಅಥವಾ ನಾಟಿ ಮಾಡತಕ್ಕದ್ದಲ್ಲ ಅಥವಾ ಬಿತ್ತುವುದಕ್ಕೆ ಅಥವಾ ನಾಟಿಮಾಡುವುದಕ್ಕೆ ಅನುಮತಿಸತಕ್ಕದ್ದಲ್ಲ.

[1][(4) ಯಾವುದೇ ಅನಧಿಕೃತ ಬೆಳೆಯನ್ನು ಬಿತ್ತಿದ ಅಥವಾ ಬೆಳೆದ ಅಥವಾ ಯಾವುದೇ ಭೂಮಿಯಲ್ಲಿ ಅಂತಹ ಅನಧಿಕೃತ ಬೆಳೆಯನ್ನು ಬಿತ್ತಲು ಅಥವಾ ಬೆಳೆಯಲು ಅವಕಾಶ ಕೊಟ್ಟ ವ್ಯಕ್ತಿಯನ್ನು ಕಂಡುಹಿಡಿಯಲಾಗದಿದ್ದ ಎಲ್ಲ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಂತಹ ಇತರ ವ್ಯಕ್ತಿಯನ್ನಲ್ಲದೆ ಭೂ ಹಿಡುವಳಿದಾರನು,–

(ಎ) ಈ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ಬದ್ಧನಾಗಿರತಕ್ಕದ್ದು ; ಮತ್ತು

(ಬಿ) ನೀರಾವರಿ ಅಧಿಕಾರಿಯು ನಿರ್ಧರಿಸಬಹುದಾದಂತೆ ಆತ ಅನ್ಯಥಾ ಸಂದಾಯ ಮಾಡಲು ಅಗತ್ಯವೆನಿಸಲಾದ ನೀರಿನ ದರದ [2][ಅಥವಾ ಸಂದರ್ಭಾನುಸಾರ ನೀರಿನ ಚಾರ್ಜುಗಳ][2] ಐದು ಪಟ್ಟುಗಿಂತ ಕಡಿಮೆ ಇಲ್ಲದ ಮತ್ತು

ಹತ್ತುಪಟ್ಟುಗಿಂತ ಹೆಚ್ಚಿಲ್ಲದ ನೀರಿನ ದರವನ್ನು [2][ಅಥವಾ ಸಂದರ್ಭಾನುಸಾರ ನೀರಿನ ಚಾರ್ಜು][2] ಗಳನ್ನು ಸಂದಾಯ ಮಾಡಲು ಸಹ ಬದ್ಧನಾಗಿರತಕ್ಕದ್ದು.

ಆದರೆ, ಯಾವುದೇ ಬೆಳೆಯನ್ನು ಬೆಳೆಯುವುದಕ್ಕಾಗಿ ನೀರಾವರಿ ಕಾಮಗಾರಿಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನೀರನ್ನು ಉಪಯೋಗಿಸದಿದ್ದಲ್ಲಿ (3) ಮತ್ತು (4)ನೇ ಉಪಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ - V

## ಪರಿಹಾರದ ಐತೀರ್ಪು

**33. ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿದ ಪರಿಣಾಮವಾಗಿ ಉಂಟಾದ ಹಾನಿಗೆ ಪರಿಹಾರ.**– ಈ ಅಧಿನಿಯಮದಿಂದ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಚಲಾಯಿಸಿದ ಪರಿಣಾಮವಾಗಿ ಉಂಟಾದ ಮತ್ತು ಖಚಿತಪಡಿಸಿಕೊಳ್ಳಬಹುದಾದ ಗಮನಾರ್ಹ ಹಾನಿಗೆ ಸಂಬಂಧಪಟ್ಟಂತೆ ಪರಿಹಾರಕ್ಕೆ ಐತೀರ್ಪು ನೀಡಬಹುದು:

ಪರಂತು, ಕೆಳಕಂಡವುಗಳಿಂದ ಉಂಟಾಗುವ ಯಾವುದೇ ಹಾನಿಯ ಸಂಬಂಧದಲ್ಲಿ ಯಾವುದೇ ನಷ್ಟ ಪರಿಹಾರದ ಐತೀರ್ಪು ನೀಡತಕ್ಕದ್ದಲ್ಲ,–

(ಎ) ಹವಾಮಾನ ಅಥವಾ ಭೂಸಾರ ಕೆಟ್ಟಿರುವುದು; ಅಥವಾ

(ಬಿ) ನೌಕಾ ಸಂಚಾರ ಅಥವಾ ದಿಮ್ಮಿ ಸಾಗಣೆಯ ಸಾಧನದ ಅಥವಾ ಜಾನುವಾರುಗಳಿಗೆ ನೀರುಣಿಸುವುದು–ಇವುಗಳನ್ನು ನಿಲ್ಲಿಸುವುದು;

(ಸಿ) 5ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಐದು ವರ್ಷಗಳವರೆಗೆ ಅಂಥ ನೀರಿನ ಸರಬರಾಜನ್ನು ಬಳಸಿಕೊಂಡಿರದಿದ್ದರೆ 5ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿದ ಪರಿಣಾಮವಾಗಿ ನೀರಿನ ಸರಬರಾಜನ್ನು ನಿಲ್ಲಿಸುವುದು ಅಥವಾ ನೀರಿನ ಪೂರೈಕೆ ಕಡಿಮೆಯಾಗಿರುವುದು; ಅಥವಾ

(ಡಿ) ಈ ಕೆಳಕಂಡ ಕಾರಣಗಳ ಮೂಲಕ,–

(i) ನೀರಾವರಿ ಕಾಮಗಾರಿಯ ಪ್ರಭಾರದಲ್ಲಿರುವ ಪ್ರಾಧಿಕಾರಿಯ ನಿಯಂತ್ರಣವನ್ನು ಮೀರಿದ ಯಾವುದೇ ಕಾರಣ;

(ii) ಕಾಲುವೆ ಅಥವಾ ನೀರಾವರಿ ಕಾಮಗಾರಿಯ ಯಾವುದೇ ದುರಸ್ತಿಗಳು, ಬದಲಾವಣೆಗಳು ಅಥವಾ ಹೆಚ್ಚುವರಿ ಕೆಲಸಗಳು ಕಾರ್ಯಗತಗೊಳಿಸುತ್ತಿರುವುದು;

(iii) ಕಾಲುವೆಯಲ್ಲಿ ನೀರಿನ ಯುಕ್ತ ಪ್ರವಾಹವನ್ನು ವಿನಿಯಮಿಸುವುದು ಅಥವಾ ನಿಶ್ಚಿತ ನೀರಾವರಿಯ ಮಾರ್ಗವನ್ನು ನಿರ್ವಹಿಸುವುದಕ್ಕಾಗಿ ನೀರಾವರಿ ಅಧಿಕಾರಿಯು ಅವಶ್ಯವೆಂದು ಭಾವಿಸಬಹುದಾದ ಯಾವುದೇ ಕ್ರಮಗಳು;

(iv) 29ನೇ ಪ್ರಕರಣದ (ಎ) ಖಂಡದಿಂದ (ಎಫ್) ಖಂಡದವರೆಗೆ ತಿಳಿಸಿದ ಸಂದರ್ಭಗಳು

– ಕಾಲುವೆ ಅಥವಾ ನೀರಾವರಿ ಕಾಮಗಾರಿಯಲ್ಲಿ ಯಾವುದೇ ನೀರು ಬರದಿದ್ದರಿಂದ ಅಥವಾ ನಿಂತಿದ್ದರಿಂದ ಹಾಗೆ ನೀರು ಬರದಿರುವುದು ಅಥವಾ ನಿಲ್ಲಿಸಿರುವುದು:

ಮತ್ತೂ ಪರಂತು, ಮೇಲಿನ ಪರಂತುಕದ (ಡಿ) ಖಂಡದಲ್ಲಿ ಹೇಳಿರುವ ಯಾವುದೇ ಕಾರಣದಿಂದ ಅವನ ಜಮೀನುಗಳಿಗೆ ನೀರಿನ ಸರಬರಾಜು ನಿಂತಿದ್ದರಿಂದ ಅಥವಾ ಕಡಿಮೆಯಾದ್ದರಿಂದ ಉಂಟಾಗುವ ನಷ್ಟಗಳಿಗೆ ಒಳಗಾಗುವ ಯಾರೇ ವ್ಯಕ್ತಿಯು ಸಂದಾಯ ಮಾಡಬೇಕಾಗಿರುವ ನೀರಿನ ದರದಲ್ಲಿ ರಾಜ್ಯ ಸರ್ಕಾರವು ಗೊತ್ತುಪಡಿಸಿದ ನೀರು ದರದ ಮಾಫಿಗೆ ಹಕ್ಕುಳ್ಳವನಾಗಿರತಕ್ಕದ್ದು.

**34. ಕ್ಲೇಮುಗಳಿಗೆ ಕಾಲ ಪರಿಮಿತಿ.**– ಯಾವ ಹಾನಿಯ ಬಗ್ಗೆ ದೂರು ಸಲ್ಲಿಸಲಾಗಿದೆಯೋ, ಆ ಹಾನಿಯು ಪ್ರಾರಂಭವಾದ ಸಮಯದಿಂದ ಒಂದು ವರ್ಷವು ಮುಕ್ತಾಯವಾದ ತರುವಾಯ ಆ ಯಾವುದೇ ಹಾನಿಯ ಬಗ್ಗೆ ಈ ಅಧಿನಿಯಮದ ಮೇರೆಗೆ ನಷ್ಟ ಪರಿಹಾರ ಕೋರುವ ಯಾವುದೇ ಕ್ಲೇಮನ್ನು ಪುರಸ್ಕರಿಸತಕ್ಕದ್ದಲ್ಲ, ಪರಂತು, ಕ್ಲೇಮುದಾರನು

ಅಂತಹ ಅವಧಿಯೊಳಗೆ ಕ್ಲೇಮು ಮಾಡದೇ ಇರುವುದಕ್ಕೆ ಸಾಕಷ್ಟು ಕಾರಣಗಳನ್ನು ಜಿಲ್ಲಾಧಿಕಾರಿಗೆ ಮನದಟ್ಟಾಗುವಂತೆ ತೋರಿಸಿದಲ್ಲಿ, ಅವನು ವಿಳಂಬವನ್ನು ಮಾಫಿ ಮಾಡಬಹುದು ಮತ್ತು ಆ ಕ್ಲೇಮನ್ನು ಪುರಸ್ಕರಿಸಬಹುದು.

**35. ಜಮೀನು, ಮುಂತಾದವುಗಳಲ್ಲಿ ಪ್ರವೇಶಮಾಡುವ ಮೂಲಕ ಉಂಟಾಗುವ ಹಾನಿಗೆ ನಷ್ಟ ಪರಿಹಾರ.**– (1) 5, 6, 7, ಮತ್ತು 8ನೇ ಪ್ರಕರಣಗಳ ಮೇರೆಗೆ ಯಾವುದೇ ಜಮೀನು ಅಥವಾ ಕಟ್ಟಡವನ್ನು ಪ್ರವೇಶಿಸುವ ಅಥವಾ ಸಾಮಗ್ರಿಗಳನ್ನು ಉಪಯೋಗಿಸುವ ಪ್ರತಿ ಸಂದರ್ಭದಲ್ಲಿ, ನೀರಾವರಿ ಅಧಿಕಾರಿಯು ಅಥವಾ ಪ್ರವೇಶಿಸುವ ವ್ಯಕ್ತಿಯು, ಪ್ರವೇಶದಿಂದ ಅಥವಾ ಯಾವುದೇ ಕೆಲಸದ ನಿರ್ವಹಣೆಯಿಂದ ಯಾವುದೇ ಬೆಳೆ, ಮರ, ಕಟ್ಟಡ ಅಥವಾ ಇತರ ಆಸ್ತಿಗೆ ಉಂಟಾದ ಹಾನಿಯ ಪ್ರಮಾಣವನ್ನು ಮತ್ತು ತೆಗೆದುಕೊಳ್ಳಲಾದ ಅಥವಾ ಉಪಯೋಗಿಸಿಕೊಳ್ಳಲಾದ ಸಾಮಗ್ರಿಗಳ ಮೌಲ್ಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ದಾಖಲು ಮಾಡಿಕೊಳ್ಳತಕ್ಕದ್ದು ಮತ್ತು ಅಂತಹ ನಮೂದಿತ ದಿನಾಂಕದಿಂದ ಒಂದು ತಿಂಗಳೊಳಗೆ ನೀರಾವರಿ ಅಧಿಕಾರಿಯು, ಭೂ ಹಿಡುವಳಿದಾರನಿಗೆ ಅಥವಾ ಸಂದರ್ಭಾನುಸಾರ ಆಸ್ತಿಯ ಒಡೆಯನಿಗೆ ನಷ್ಟ ಪರಿಹಾರದ ಮೊತ್ತವನ್ನು ನೀಡತಕ್ಕದ್ದು.

(2) ಹಾಗೆ ನಷ್ಟ ಪರಿಹಾರವನ್ನು ನೀಡಿದ ದಿನಾಂಕದಿಂದ ಒಂದು ವಾರದೊಳಗಾಗಿ ಅದನ್ನು ಒಪ್ಪಿಕೊಳ್ಳದಿದ್ದರೆ, ನೀರಾವರಿ ಅಧಿಕಾರಿಯು, ಕೂಡಲೇ ನಷ್ಟ ಪರಿಹಾರದ ಮೊತ್ತವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ವಿಷಯವನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸಿಕೊಡತಕ್ಕದ್ದು.

**36. ಕ್ಲೇಮುಗಳನ್ನು ಜಿಲ್ಲಾಧಿಕಾರಿಯ ಮುಂದೆ ಇಡುವುದು.**– (1) 35ನೇ ಪ್ರಕರಣದಲ್ಲಿ ಉಪಬಂಧಿಸಲಾದ ಸ್ವರೂಪದ ಕ್ಲೇಮುಗಳ ಹೊರತು, ಈ ಅಧಿನಿಯಮದ ಮೇರೆಗಿನ ನಷ್ಟ ಪರಿಹಾರದ ಎಲ್ಲಾ ಕ್ಲೇಮುಗಳನ್ನು, ಅಂತಹ ಕ್ಲೇಮು ಅಥವಾ ಅದರ ಭಾಗವು, ಉದ್ಭವಿಸುವ ಜಿಲ್ಲೆಯ ಜಿಲ್ಲಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ಜಿಲ್ಲಾಧಿಕಾರಿಯು, ಅಂತಹ ಎಲ್ಲಾ ಕ್ಲೇಮುಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಕೊಡತಕ್ಕ ಯಾವುದಾದರೂ ನಷ್ಟ ಪರಿಹಾರದ ಮೊತ್ತವಿದ್ದಲ್ಲಿ ಅದನ್ನು ನಿರ್ಧರಿಸತಕ್ಕದ್ದು. ಅಂತಹ ಮೊತ್ತವನ್ನು ನಿರ್ಧರಿಸುವಾಗ, ಜಿಲ್ಲಾಧಿಕಾರಿಯು [1][XXX][1] [1][XXX][1] ಭೂ ಸ್ವಾಧೀನ ಅಧಿನಿಯಮ, 1894ರ 23 ಮತ್ತು 24ನೇ ಪ್ರಕರಣಗಳ ಉಪಬಂಧಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು:

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು, ನಷ್ಟ ಪರಿಹಾರದ ಬಗ್ಗೆ ಐತೀರ್ಪು ನೀಡುವ ಸಮಯದಲ್ಲಿ ಯಾವ ಆಸ್ತಿಯ ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲಾಗಿದೆಯೋ ಆ ಆಸ್ತಿಯ ಮಾರುಕಟ್ಟೆ ಮೌಲ್ಯದಲ್ಲಿ ಆಗಿರಬಹುದಾದ ಇಳಿತಾಯಕ್ಕೆ ಗಮನಕೊಡತಕ್ಕದ್ದು ಮತ್ತು ಅಂಥ ಮಾರುಕಟ್ಟೆ ಮೌಲ್ಯವನ್ನು ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಆ ಮೊತ್ತವು ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಅಂಥ ಆಸ್ತಿಗಳ ವಾರ್ಷಿಕ ನಿವ್ವಳ ಲಾಭದಲ್ಲಿ ಉಂಟಾದ ಇಳಿತಾಯದ ಮೊತ್ತದ ಹನ್ನೆರಡು ಪಟ್ಟು ಮೊತ್ತವೆಂದು ಲೆಕ್ಕ ಮಾಡತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯು ನಷ್ಟ ಪರಿಹಾರದ ಮೊತ್ತವನ್ನು ನಿರ್ಧರಿಸುವ ಮುನ್ನ, ರಾಜ್ಯ ಸರ್ಕಾರ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾಂಥ ಅಧಿಕಾರಿಯ ಪೂರ್ವ ಅನುಮೋದನೆ ಪಡೆಯದೇ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**37. ಮೇಲ್ಮನವಿ.**– 35ನೇ ಅಥವಾ 36ನೇ ಪ್ರಕರಣದ ಮೇರೆಗೆ ಮಾಡಲಾದ ಜಿಲ್ಲಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶವು ತಲುಪಿದ ದಿನಾಂಕದಿಂದ 90 ದಿವಸಗಳೊಳಗಾಗಿ [1][ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯಾಧಿಕರಣ][1]ಕ್ಕೆ ಮೇಲ್ಮನವಿ ಮಾಡಿಕೊಳ್ಳಬಹುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**38. ನಷ್ಟ ಪರಿಹಾರವನ್ನು ಯಾವಾಗ ಸಂದಾಯ ಮಾಡಬೇಕು ಮತ್ತು ಸಂದಾಯ ಮಾಡಬೇಕಾದ ಬಡ್ಡಿ.**– ಈ ಅಧ್ಯಾಯದ ಮೇರೆಗೆ ಐತೀರ್ಪು ನೀಡಲಾದ ನಷ್ಟ ಪರಿಹಾರಕ್ಕಾಗಿ ಸಂದಾಯ ಮಾಡಬೇಕಾದ ಹಣದ ಎಲ್ಲಾ ಮೊತ್ತಗಳು, ಅಂತಿಮ ಐತೀರ್ಪು ನೀಡಿದ ಮೂರು ತಿಂಗಳ ತರುವಾಯ ಸಂದಾಯ ಬಾಕಿಯಾಗತಕ್ಕದ್ದು ಮತ್ತು ಅದರ ಬಗ್ಗೆ ಅರ್ಜಿ ಹಾಕಲು ಅಥವಾ ಅದನ್ನು ಸ್ವೀಕರಿಸಲು ಕ್ಲೇಮುದಾರನು ಮಾಡಿದ ಅಲಕ್ಷ್ಯ ಅಥವಾ ನಿರಾಕರಣೆಯ ಮೂಲಕ ಅಂಥ ಮೊತ್ತವು ಸಂದಾಯವಾಗದೆ ಉಳಿದಿರುವ ಸಂದರ್ಭದ ಹೊರತು, ಸದರಿ ಮೂರು ತಿಂಗಳ ತರುವಾಯ, ಸಂದಾಯವಾಗದೆ ಉಳಿದಿರುವ ಬಾಕಿ ಮೊತ್ತದ ಮೇಲೆ ಪ್ರತಿ ವರ್ಷಕ್ಕೆ ಶೇಕಡಾ ನಾಲ್ಕರ ಸರಳ ಬಡ್ಡಿಯ ಪಾವತಿಗೆ ಅವಕಾಶವಿರತಕ್ಕದ್ದು.

**[1][39. XXX][1]**

**1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.**

## ಅಧ್ಯಾಯ - VI

### ತುರ್ತು ಪರಿಸ್ಥಿತಿಗಳಲ್ಲಿ ಕೆಲಸಗಾರರನ್ನು ದೊರಕಿಸಿಕೊಳ್ಳುವುದು

**40. ತುರ್ತು ಕಾಮಗಾರಿ ಅಥವಾ ದುರಸ್ತಿ ಕೆಲಸಗಳು, ಇತ್ಯಾದಿಗಳಿಗೆ ಕೆಲಸಗಾರರನ್ನು ಕಡ್ಡಾಯವಾಗಿ ದೊರಕಿಸಿಕೊಳ್ಳುವುದು.**- (1) ನೀರಾವರಿ ಅಧಿಕಾರಿಗೆ ಅಥವಾ ಅವನ ಗೈರುಹಾಜರಿಯಲ್ಲಿ ತಹಶೀಲ್ದಾರನಿಗೆ,-

(ಎ) (i) ಯಾವುದೇ ಕಾಮಗಾರಿ ಅಥವಾ ದುರಸ್ತಿಯನ್ನು ತಕ್ಷಣ ಮಾಡದಿದ್ದರೆ, ನೀರಾವರಿ ಕಾಮಗಾರಿಯು ಹಠಾತ್ತಾಗಿ ಮತ್ತು ವ್ಯಾಪಕವಾಗಿ ಸಾರ್ವಜನಿಕ ಹಾನಿಯನ್ನು ಉಂಟು ಮಾಡುವಂತಹ ಗುರುತರ ಸ್ವರೂಪದ ಹಾನಿಯನ್ನು ಉಂಟು ಮಾಡುವುದೆಂದು ಅನಿಸಿದರೆ; ಅಥವಾ

(ii) ಈಗಾಗಲೇ ನಿರ್ಮಿಸಲಾಗಿರುವ ನೀರಾವರಿ ಅಥವಾ ನಾಲಾ ಮಾರ್ಗವನ್ನು ನಿರ್ವಹಿಸುವ ಸಲುವಾಗಿ ಅವಶ್ಯವಾಗಿರುವ ಯಾವುದಾದರೂ ನೀರಾವರಿ ಕಾಮಗಾರಿಯನ್ನು ತಕ್ಷಣವೇ ನಿರ್ವಹಿಸಿದ್ದ ಹೊರತು, ಗಂಭೀರ ಸ್ವರೂಪದ ಸಾರ್ವಜನಿಕ ನಷ್ಟವುಂಟಾಗುವುದೆಂದು ಅನಿಸಿದರೆ; ಮತ್ತು

(ಬಿ) ಅಂತಹ ಕಾಮಗಾರಿ ದುರಸ್ತಿ ಅಥವಾ ಪೂರ್ಣಗೊಳಿಸುವಿಕೆ ಇವುಗಳ ಸೂಕ್ತ ನಿರ್ವಹಣೆಗಾಗಿ ಅವಶ್ಯ ವ್ಯಕ್ತಿಗಳು, ಅಂತಹ ಹಾನಿ ಅಥವಾ ನಷ್ಟವನ್ನು ತಡೆಯಲು ಸಕಾಲದಲ್ಲಿ ಸಾಮಾನ್ಯ ರೀತಿಯಲ್ಲಿ ದೊರೆಯುವುದಿಲ್ಲವೆಂದು ಅನಿಸಿದರೆ

- ಅಂತಹ ಕಾಮಗಾರಿ, ದುರಸ್ತಿ ಅಥವಾ ಸುಗಮಗೊಳಿಸುವಿಕೆಯನ್ನು ಎಲ್ಲಿ ನಿರ್ವಹಿಸಬೇಕಾಗಿದೆಯೋ ಆ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ವಾಸಿಸುವ ಅಥವಾ ಜಮೀನು ಹೊಂದಿರುವ ದೃಢಕಾಯರಾದ ಎಲ್ಲ ಅಥವಾ ಯಾರೇ ವ್ಯಕ್ತಿಗಳನ್ನು ಈ ಸಂಬಂಧದಲ್ಲಿ ಒಬ್ಬ ಅಧಿಕಾರಿ ಅಥವಾ ಅವರಿಂದ ಅಧಿಕೃತಗೊಳಿಸಲಾದ ಇತರೆ ವ್ಯಕ್ತಿಯು ನಿರ್ದೇಶಿಸಬಹುದಾದಂತೆ ಆ ಕಾಮಗಾರಿಯ ನಿರ್ವಹಣೆಯಲ್ಲಿ ನೆರವು ನೀಡಲು ಆಂಥ ಅಧಿಕಾರಿಯು ಸ್ವತಃ ಕರೆಯುವುದು ಅಥವಾ ಸ್ಥಳದಲ್ಲಿರುವ ಗ್ರಾಮದ ಅಥವಾ ಗ್ರಾಮಗಳ ಪಟೇಲರನ್ನು ಅಂಥ ವ್ಯಕ್ತಿಗಳನ್ನು ಕರೆ ಕಳುಹಿಸಲು ಅಗತ್ಯ ಪಡಿಸುವುದು ಕಾನೂನು ಬದ್ಧವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ, ಯಾವುದೇ ಕಾಮಗಾರಿಯ ನಿರ್ವಹಣೆಗೆ ನೆರವಾಗಲು ದೃಢಕಾಯದ ವ್ಯಕ್ತಿಗಳಿಗೆ ಕರೆ ನೀಡುವಾಗ, ಮತ, ಕುಲ, ಜಾತಿ ಅಥವಾ ವರ್ಗ ಅಥವಾ ಇವುಗಳಲ್ಲಿಯ ಯಾವುವಾದರೂ ಕಾರಣಗಳ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲ.

(3) ಹಾಗೆ ಕರೆಸಿಕೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದ ಬಗ್ಗೆ ಜಿಲ್ಲಾಧಿಕಾರಿಗೆ ಮತ್ತು ನಾಲಾ ಅಧಿಕಾರಿಗೆ ಕೂಡಲೇ ವರದಿ ಮಾಡತಕ್ಕದ್ದು.

**41. ಕಡ್ಡಾಯವಾಗಿ ಕರೆಸಿಕೊಂಡ ವ್ಯಕ್ತಿಗಳಿಗೆ ಹಣ ಸಂದಾಯ.**- 40ನೇ ಪ್ರಕರಣದ ಮೇರೆಗೆ ಕಡ್ಡಾಯ ಕರೆಯನ್ನು ಪಾಲಿಸುವ ಎಲ್ಲ ವ್ಯಕ್ತಿಗಳಿಗೆ, ಕಾರ್ಯಸಾಧ್ಯವಾದಷ್ಟು ಬೇಗನೆ ಮತ್ತು ಅಂತಹ ಪಾಲನೆಯ ದಿನಾಂಕದಿಂದ ಯಾವುದೇ ಸಂದರ್ಭದಲ್ಲಿ ಹದಿನೈದು ದಿನಗಳೊಳಗಾಗಿ ಅವರು ಮಾಡಿದ ಕೆಲಸಕ್ಕಾಗಿ ನಾಲಾ ಅಧಿಕಾರಿ ಅಥವಾ ಸಂದರ್ಭಾನುಸಾರ ತಹಶೀಲ್ದಾರರು ಅದೇ ಕೆಲಸಕ್ಕಾಗಿ ಲೋಕೋಪಯೋಗಿ ಇಲಾಖೆಯ ಸಕ್ಷಮ ಅಧಿಕಾರಿಯು ತತ್ಕಾಲದಲ್ಲಿ ನಿಯಮಿಸಿದ ಸಂದಾಯವಾಗತಕ್ಕ ದರದ ಶೇಕಡಾ 50 ರಷ್ಟು ಹೆಚ್ಚಿನ ದರದಲ್ಲಿ ಹಣ ಸಂದಾಯ ಮಾಡತಕ್ಕದ್ದು:

ಪರಂತು, ರಾತ್ರಿ ವೇಳೆಯಲ್ಲಿ ಮಾಡಿದ ಕೆಲಸಕ್ಕೆ, ಅಂತಹ ದರದ ಎರಡು ಪಟ್ಟಿನಷ್ಟನ್ನು ಸಂದಾಯ ಮಾಡತಕ್ಕದ್ದು.

**42. 41ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ವಿರುದ್ಧ ಮೇಲ್ಮನವಿಗಳು.**- 41ನೇ ಪ್ರಕರಣದ ಮೇರೆಗೆ ಸಂದಾಯವಾಗಿ ಕೊಟ್ಟ ಮೊತ್ತವನ್ನು ಸ್ವೀಕರಿಸದಿರುವ ಯಾರೇ ವ್ಯಕ್ತಿಯು, ಹಾಗೆ ಕೊಟ್ಟ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು ಮತ್ತು ಅವರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

## ಅಧ್ಯಾಯ- VII

### ನೀರಾವರಿ ಕಾಮಗಾರಿಗಳ ನಿರ್ವಹಣೆ

**43. ನೀರಾವರಿ ಕಾಮಗಾರಿಗಳ ನಿರ್ವಹಣೆಯನ್ನು ವಹಿಸಿಕೊಳ್ಳಲು ಸರ್ಕಾರದ ಅಧಿಕಾರ.**- ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ನಿರ್ವಹಿಸುವ ಯಾವುದೇ ನೀರಾವರಿ ಕಾಮಗಾರಿಯಿಂದ ಭೂಮಿಗಳಿಗೆ ಸರಿಯಾಗಿ ನೀರಾವರಿಯಾಗಬೇಕೆಂಬ ಹಿತದೃಷ್ಟಿಯಿಂದ, ಅಂತಹ ನೀರಾವರಿ ಕಾಮಗಾರಿಯ ದುರಸ್ತಿಯನ್ನು ಸೂಕ್ತವಾಗಿ ಮಾಡಲು

ನಿರ್ವಹಣಾ ಕಾಮಗಾರಿಯನ್ನು ರಾಜ್ಯ ಸರ್ಕಾರವು ಕೈಗೊಳ್ಳತಕ್ಕದ್ದೆಂದು ಮತ್ತು ಅಂತಹ ನಿರ್ವಹಣೆಯ ವೆಚ್ಚ ಅಥವಾ ಅದರ ಯಾವುದೇ ಭಾಗದ ವೆಚ್ಚವನ್ನು ಅಂತಹ ನೀರಾವರಿ ಕಾಮಗಾರಿಯಿಂದ ಸೌಲಭ್ಯ ಪಡೆಯುವ ಭೂ ಹಿಡುವಳಿದಾರರಿಂದ ವಸೂಲಿ ಮಾಡತಕ್ಕದ್ದೆಂದು ರಾಜ್ಯ ಸರ್ಕಾರವು ಪರಿಗಣಿಸಿದಲ್ಲಿ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಹಾಗೆಂದು ಘೋಷಣೆಯನ್ನು ಮಾಡತಕ್ಕದ್ದು; ಮತ್ತು ತದನಂತರ ರಾಜ್ಯ ಸರ್ಕಾರವು ಅಂತಹ ಕಾಮಗಾರಿಯನ್ನು ಕೈಗೆತ್ತಿಕೊಳ್ಳತಕ್ಕದ್ದು; ಮತ್ತು ಅಂತಹ ನೀರಾವರಿ ಕಾಮಗಾರಿಯನ್ನು ಸುಸ್ಥಿತಿಯಲ್ಲಿರುವಂತೆ ನಿರ್ವಹಿಸತಕ್ಕದ್ದು:

ಪರಂತು, ಯಾರೇ ಭೂ ಹಿಡುವಳಿದಾರನ ಒಡೆತನಕ್ಕೆ ಸೇರಿದ್ದು, ಅಂಥ ಭೂ ಹಿಡುವಳಿದಾರನು, ಅವನು ನೀರಾವರಿ ಉದ್ದೇಶಕ್ಕಾಗಿ ವಾಸ್ತವವಾಗಿ ಬಳಸುವ ಯಾವುದೇ ಕೃತಕ ಜಲಾಶಯವನ್ನು ಕುರಿತಂತೆ ಕೆಳಕಂಡ ಸಂದರ್ಭಗಳ ಹೊರತು, ಈ ಅಧಿನಿಯಮದ ಮೇರೆಗೆ ಅಧಿಸೂಚನೆ ಹೊರಡಿಸತಕ್ಕದ್ದಲ್ಲ,-

(i) ಭೂ ಹಿಡುವಳಿದಾರನ ಕೋರಿಕೆಯ ಮೇರೆಗೆ; ಅಥವಾ

(ii) ಸಾರ್ವಜನಿಕ ಹಿತದೃಷ್ಟಿಯಿಂದ ಅಂತಹ ಅಧಿಸೂಚನೆಯನ್ನು ಹೊರಡಿಸುವುದು ಅವಶ್ಯವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಾಗ:

ಮತ್ತೂ ಪರಂತು, ಈ ಹಿಂದಿನ ಪರಂತುಕದ (ii)ನೇ ಖಂಡಕ್ಕೆ ಅನುಸಾರವಾಗಿ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ, ಆ ಭೂಹಿಡುವಳಿದಾರನಿಗೆ ಅವನ ಹಕ್ಕುಗಳ ಸಂಬಂಧದಲ್ಲಿ, ಜಿಲ್ಲೆಯ ಜಿಲ್ಲಾಧಿಕಾರಿಯು ನಿಯಮಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಐತೀರ್ಪು ನೀಡಬಹುದಾದಂಥ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**44. ನಿರ್ವಹಣಾ ಉಪಕರವನ್ನು ವಿಧಿಸುವುದು.-** (1) ತುಂಗಭದ್ರಾ ಮಂಡಳಿ ಅಥವಾ [1][ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ][1] ಅಥವಾ ಇತರೆ ಪ್ರಾಧಿಕಾರವು ನಿರ್ವಹಿಸುವ ಯಾವುದೇ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆಯುವ ಪ್ರದೇಶದಲ್ಲಿನ ಎಲ್ಲ ಭೂಮಿಗಳ ಮೇಲೆ ಪ್ರತಿ ಎಕರೆಗೆ ವಾರ್ಷಿಕವಾಗಿ ನಾಲ್ಕು ರೂಪಾಯಿಗಳಂತೆ ರಾಜ್ಯ ಸರ್ಕಾರವು ನಿರ್ವಹಣಾ ಉಪಕರವನ್ನು ವಿಧಿಸತಕ್ಕದ್ದು:

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆಯುವ ಯಾವುದೇ ಭೂಮಿಯ ಉಪಯೋಗಕ್ಕಾಗಿ ಎರಡು ನಿರಂತರ ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ನೀರು ದೊರೆಯುವಂತೆ ಮಾಡದಿದ್ದಲ್ಲಿ ಸದರಿ ಅವಧಿಯಲ್ಲಿ ಅಂತಹ ಜಮೀನಿನ ಸಂಬಂಧದಲ್ಲಿ ನಿರ್ವಹಣಾ ಉಪಕರವು ಸಂದಾಯವಾಗತಕ್ಕದ್ದಲ್ಲ:

ಮತ್ತೂ ಪರಂತು, ಈ ಹಿಂದಿನ ಪರಂತುಕದ ಮೇರೆಗೆ ಯಾವ ವರ್ಷದ ಸಂಬಂಧದಲ್ಲಿ ಅಂತಹ ಉಪಕರ ಸಂದಾಯವಾಗತಕ್ಕದ್ದಲ್ಲವೋ ಆ ಯಾವುದೇ ವರ್ಷದ ಬಗ್ಗೆ ನಿರ್ವಹಣಾ ಉಪಕರವನ್ನು ಸಂದಾಯ ಮಾಡಿರುವ ಹಾಗೆ ಸಂದಾಯ ಮಾಡಿದ ಮೊಬಲಗನ್ನು ಮರುಸಂದಾಯ ಮಾಡತಕ್ಕದ್ದು ಅಥವಾ ಅಂತಹ ಜಮೀನಿನ ಬಳಕೆಗೆ ನೀರು ದೊರಕುವಂತೆ ಮಾಡಲಾಗುವ ಯಾವುದೇ ನಂತರದ ವರ್ಷಕ್ಕೆ ಉಪಕರವನ್ನು ಸಂದಾಯ ಮಾಡುವ ಹೊಣೆಗಾರಿಕೆಯ ಸಂಬಂಧದಲ್ಲಿ ಸರಿಹೊಂದಾಣಿಕೆ ಮಾಡತಕ್ಕದ್ದು:

[1][ಇನ್ನೂ ಪರಂತು, ನೀರು ಬಳಕೆದಾರರ ಸಂಘವು [2][ಅಥವಾ ನೀರು ಬಳಕೆದಾರರ ಅಸೋಸಿಯೇಷನ್][2] ನಿರ್ವಹಿಸುತ್ತಿರುವ ಯಾವುದೇ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆಯುವ ಪ್ರದೇಶದಲ್ಲಿರುವ ಯಾವುದೇ ಭೂಮಿಗೆ ಸಂಬಂಧಪಟ್ಟಂತೆ ಈ ಉಪ ಪ್ರಕರಣದ ಮೇರೆಗೆ, ನಿರ್ವಹಣಾ ಉಪಕರವನ್ನು ವಿಧಿಸತಕ್ಕದ್ದಲ್ಲ ಮತ್ತು ಸಂಗ್ರಹಿಸತಕ್ಕದ್ದಲ್ಲ.][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ 25.2.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ವಹಣಾ ಉಪಕರವನ್ನು ವಿಧಿಸಿದ ದಿನ ಮತ್ತು ಆ ದಿನಾಂಕದಿಂದ ನಿರ್ವಹಣಾ ಉಪಕರವನ್ನು ಸಂದಾಯ ಮಾಡಲು ಬದ್ಧವಾದ ಜಮೀನುಗಳ ಮೇಲೆ ಪ್ರತ್ಯೇಕ ಶುಲ್ಕವೆಂಬುದಾಗಿ ಯಾವುದಾದರೂ ನೀರಾವರಿ ಉಪಕರವನ್ನು ವಿಧಿಸಿದ್ದರೆ, ಹಾಗೆ ವಿಧಿಸುವುದು ನಿಂತುಹೋಗತಕ್ಕದ್ದು.

(3) ನಿರ್ವಹಣಾ ಉಪಕರವು, ಯಾವ ಭೂಮಿಗೆ ಸಂಬಂಧಪಟ್ಟಂತೆ ಅದು ಸಂದಾಯವಾಗತಕ್ಕದ್ದೋ ಅದರ ಮೇಲಿನ ತೆರಿಗೆಯಾಗಿರತಕ್ಕದ್ದು; ಮತ್ತು [1][ಕರ್ನಾಟಕ][1] ಭೂ ಕಂದಾಯ ಅಧಿನಿಯಮ, 1964 (1964ರ [1][ಕರ್ನಾಟಕ][1]

ಅಧಿನಿಯಮ ಸಂಖ್ಯೆ 12) ಇದರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ನಿರ್ವಹಣಾ ಉಪಕರವು ಯಾವ ಜಮೀನಿನ ಸಂಬಂಧದಲ್ಲಿ ಸಂದಾಯವಾಗತಕ್ಕದ್ದೋ ಆ ಭೂಮಿಯ ಮೇಲೆ ಬಾಕಿ ಇರುವ ಭೂ ಕಂದಾಯದ ಸಂದಾಯ ಹಾಗೂ ವಸೂಲಿಗೆ ಅನ್ವಯವಾಗುವ ಹಾಗೆ ನಿರ್ವಹಣಾ ಉಪಕರ ಸಂದಾಯ ಹಾಗೂ ವಸೂಲಿಗೂ ಅನ್ವಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**45. ತುಂಗಭದ್ರಾ ಮಂಡಳಿ, ಮುಂತಾದವುಗಳಿಗೆ ಸಂದಾಯ.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ನೀರಾವರಿ ಕಾಮಗಾರಿ ನಿರ್ವಹಣೆಯ ಕರ್ತವ್ಯವು ತುಂಗಭದ್ರಾ ಮಂಡಳಿ, [1][ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ][1] ಅಥವಾ ಇತರೆ ಪ್ರಾಧಿಕಾರಕ್ಕೆ ವಹಿಸಿದಲ್ಲಿ, ಪ್ರತಿ ವರ್ಷದ ಅವಧಿಯಲ್ಲಿ ಅಂತಹ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆದ ಜಮೀನುಗಳ ಮೇಲೆ ನಿರ್ವಹಣಾ ಉಪಕರವೆಂಬುದಾಗಿ ಸಂಗ್ರಹಿಸಲಾದ ಮೊತ್ತಕ್ಕೆ ಸಮನಾದ ಮೊತ್ತವನ್ನು ಗೊತ್ತುಪಡಿಸಿದ ರೀತಿಯಲ್ಲಿ ತುಂಗಭದ್ರಾ ಮಂಡಳಿ, [1][ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯಿತಿ][1] ಅಥವಾ ಸಂಬಂಧಿಸಿದ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು.

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ - VIII

### ನೀರಾವರಿ ಕಾಮಗಾರಿಗಳ ರಕ್ಷಣೆ

**46. ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ ಪರಿಮಿತಿ.**– ನಿಯಮಿಸಬಹುದಾದಂತೆ ಹೊರತು, ನೀರಾವರಿ ಅಧಿಕಾರಿಯಲ್ಲದ ಯಾರೇ ವ್ಯಕ್ತಿಯು,–

(ಎ) ನೈಸರ್ಗಿಕ ತೊರೆಯ ಹರಿವಿನಲ್ಲಿ ಹಸ್ತಕ್ಷೇಪ ಅಥವಾ ಅದರ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ಹೊಲ-ಕಾಲುವೆಯ ಮೇಲೆ ಅಥವಾ ಕೆಳಗೆ ಹರಿಯುವ ಯಾವುದೇ ಕಾಲುವೆ ಅಥವಾ ತೊರೆಯ ಮೇಲೆ ಯಾವುದೇ ಮಣ್ಣಿನ ಅಥವಾ ಕಲ್ಲಿನ ಕಟ್ಟೆ ಅಥವಾ ಒಡ್ಡನ್ನು ನಿರ್ಮಿಸತಕ್ಕದ್ದಲ್ಲ.

**47. ಅಡ್ಡಹರಿಗಾಲುವೆ ಕಾಮಗಾರಿಗಳ ಕಾರ್ಯ ನಿರ್ವಹಣೆಯಲ್ಲಿ ಹಸ್ತಕ್ಷೇಪ.**– ನೀರಾವರಿ ಅಧಿಕಾರಿಯ ಲಿಖಿತ ಅನುಮೋದನೆಯ ಹೊರತು, ಯಾರೇ ವ್ಯಕ್ತಿಯು, ಕಾಲುವೆ ಅಥವಾ ನಾಲೆಗಳ ಸುರಕ್ಷೆಗಾಗಿ ಅಡಿಗಾಲುವೆಗಳು, ಮೇಲ್ಗಾಲುವೆಗಳು, ಮೇಲು ಮಾರ್ಗಗಳು, ಇಳಿಗೊಳವೆಗಳು, ಒಡ್ಡುಗಳು ಮತ್ತು ಸಂಬಂಧಿತ ಕಾಮಗಾರಿಗಳಂತಹ ವಿವಿಧ ಅಡ್ಡ ಹರಿಗಾಲುವೆಗಳ ಕಾಮಗಾರಿಗಳ ಯುಕ್ತ ಕಾರ್ಯನಿರ್ವಹಣೆಗೆ ಅಡಚಣೆಯುಂಟು ಮಾಡತಕ್ಕದ್ದಲ್ಲ.

**48. ಕಾಲುವೆಗಳ ಸುರಕ್ಷತೆಗೆ ಬಾಧಕವಾಗುವ ಕಾಮಗಾರಿಗಳ ಸಂಬಂಧದಲ್ಲಿ ಒಡೆಯರ ಹೊಣೆಗಾರಿಕೆಗಳು.**– (1) ಯಾವುದೇ ನೀರಾವರಿ ಕಾಮಗಾರಿಯ ಮೇಲು ಭಾಗದಲ್ಲಿ ಇರುವ ಕೆರೆ, ಬಾವಿ, ಕೊಳ, ಕುಂಟೆ, ಚಿಲುಮೆ ಕೊಳ, ಬುಗ್ಗೆ ಅಥವಾ ಇತರೆ ಜಲಾಶಯದ ಪ್ರತಿಯೊಬ್ಬ ಒಡೆಯರು, ಅಂತಹ ಕೆರೆ, ಬಾವಿ, ಕೊಳ, ಕುಂಟೆ, ಚಿಲುಮೆ ಕೊಳ, ಬುಗ್ಗೆ ಅಥವಾ ಜಲಾಶಯದ ಏರಿಗಳನ್ನು ಮತ್ತು ಹೆಚ್ಚುವರಿ ನೀರು ಹರಿಬಿಡುವ ವ್ಯವಸ್ಥೆಗಳನ್ನು ಸುರಕ್ಷಿತವಾದ ಮತ್ತು ಸಮರ್ಪಕ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ನೀರಾವರಿ ಅಧಿಕಾರಿಯು, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಏರಿಗಳು ಅಥವಾ ಕಾಮಗಾರಿಯ ಹೆಚ್ಚುವರಿ ನೀರು ಹರಿಬಿಡುವ ವ್ಯವಸ್ಥೆಗಳು ಸುಸ್ಥಿತಿಯಲ್ಲಿಲ್ಲ ಮತ್ತು ಕೆಳಗಿನ ನೀರಾವರಿ ಕಾಮಗಾರಿಗಳಿಗೆ ಅವು ಹಾನಿಯುಂಟು ಮಾಡುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಲ್ಲಿ, ನೋಟೀಸು ಜಾರಿಮಾಡಿ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಸಮಯದೊಳಗೆ ಏರಿಗಳನ್ನು ಅಥವಾ ಹೆಚ್ಚುವರಿ ನೀರು ಹರಿಬಿಡುವ ವ್ಯವಸ್ಥೆಗಳನ್ನು ಸುಸ್ಥಿತಿಗೆ ತರುವಂತೆ ಸಂಬಂಧಪಟ್ಟ ಒಡೆಯರಿಗೆ ತಿಳಿಸತಕ್ಕದ್ದು.

(3) ಸದರಿ ಒಡೆಯರು, ನಿರ್ದಿಷ್ಟಪಡಿಸಿದ ಕಾಲದೊಳಗೆ ಆ ನೋಟೀಸನ್ನು ಪಾಲಿಸಲು ತಪ್ಪಿದರೆ ಅಥವಾ ನೀರಾವರಿ ಅಧಿಕಾರಿಯ ಅಭಿಪ್ರಾಯದಲ್ಲಿ, ಅವರು ಮಾಡಿರುವ ದುರಸ್ತಿಗಳು ತೃಪ್ತಿಕರವಾಗಿರದಿದ್ದರೆ, ಅವನು ಅವಶ್ಯವಿರುವ ದುರಸ್ತಿ ಕಾರ್ಯವನ್ನು ಕೈಗೊಳ್ಳಬಹುದು; ಮತ್ತು ಅದರ ವೆಚ್ಚವನ್ನು ಭೂ ಕಂದಾಯದ ಬಾಕಿಯಂತೆ ಸದರಿ ಒಡೆಯರಿಂದ ವಸೂಲಿ ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ನೀರಾವರಿ ಅಧಿಕಾರಿಯ ಯಾವುದೇ ಆದೇಶದ ಮೇಲೆ ಆದೇಶ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗೆ ಜಿಲ್ಲಾಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದು ಮತ್ತು ಅದರ ಮೇಲೆ ಜಿಲ್ಲಾಧಿಕಾರಿಯು ನೀಡುವ ತೀರ್ಮಾನವು ಅಂತಿಮವಾಗಿರತಕ್ಕದ್ದು.

**49. ನೀರಾವರಿ ಕಾಮಗಾರಿಯ ಸಮೀಪ ಗಣಿಗಾರಿಕೆ ಅಥವಾ ಕಲ್ಲುಗಣಿಯ ಕಾರ್ಯಾಚರಣೆ.**- ಯಾರೇ ವ್ಯಕ್ತಿಯು, ನೀರಾವರಿ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ನೀರಾವರಿ ಕಾಮಗಾರಿಯ ಎಲ್ಲೆಗಳ ಒಂದು ಕಿಲೋಮೀಟರು ಅಂತರದೊಳಗೆ ಸ್ಫೋಟಕಗಳನ್ನು ಉಪಯೋಗಿಸಬೇಕಾದ ಅಗತ್ಯವಿರುವಂಥ ಗಣಿಗಾರಿಕೆ ಅಥವಾ ಕಲ್ಲು ಗಣಿ ಕಾರ್ಯಾಚರಣೆಗಳನ್ನು ನಡೆಸತಕ್ಕದ್ದಲ್ಲ.

**50. ನೀರಾವರಿ ಕಾಮಗಾರಿ ಸಮೀಪ ಬಾವಿಗಳನ್ನು ತೋಡುವುದು.**- 4ನೇ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು ನೀರಾವರಿ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೇ, ನೀರಾವರಿ ಕಾಮಗಾರಿಯ ಎಲ್ಲೆಗಳಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಷ್ಟು ಅಂತರದೊಳಗೆ ಯಾವುದೇ ಹೊಸ ಬಾವಿಯನ್ನು ತೋಡತಕ್ಕದ್ದಲ್ಲ.

**51. ತೂಬು ದ್ವಾರಗಳು, ಮುಂತಾದವುಗಳ ಕಾರ್ಯಾಚರಣೆ.**- ನೀರಾವರಿ ಅಧಿಕಾರಿಯಲ್ಲದ ಅಥವಾ ಈ ಸಂಬಂಧದಲ್ಲಿ ನೀರಾವರಿ ಅಧಿಕಾರಿಯಿಂದ ಕ್ರಮಬದ್ಧವಾಗಿ ಅಧಿಕಾರ ಪಡೆದ ವ್ಯಕ್ತಿಯಲ್ಲದ ಯಾರೇ ವ್ಯಕ್ತಿಯು ಜಲಾಶಯ, ಕಾಲುವೆ ಅಥವಾ ನಾಲೆಯ ತೂಬು ದ್ವಾರ, ನಿಯಂತ್ರಕ ಸಾಧನ ಅಥವಾ ಪ್ರವಾಹ ದ್ವಾರ ಇವುಗಳ ಕಾರ್ಯಾಚರಣೆ ಮಾಡುವ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**52. ಮೀನು ಹಿಡಿಯುವುದು ಮತ್ತು ದೋಣಿ ನಡೆಸುವುದು, ಇತ್ಯಾದಿ.**- ಯಾರೇ ವ್ಯಕ್ತಿಯು, ಸರ್ಕಾರದಿಂದ ನಿರ್ವಹಿಸಲಾದ ಅಥವಾ ನಿಯಂತ್ರಿಸಲಾದ ಒಂದು ಜಲಾಶಯ ಅಥವಾ ಕೆರೆ ಅಥವಾ ಒಂದು ಕಾಲುವೆಯ ಅಥವಾ ನಾಲೆಯ ಮೇಲೆ ಅಥವಾ ನಾಲೆಯಲ್ಲಿ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದಂತಹ ಅಧಿಕಾರಿಯಿಂದ ಲಿಖಿತ ಅನುಮತಿ ಪಡೆಯದೆ ಮತ್ತು ಗೊತ್ತುಪಡಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮತ್ತು ಗೊತ್ತುಪಡಿಸಬಹುದಾದಂತಹ ಫೀಜನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟ ಹೊರತು, ಮೀನು ಹಿಡಿಯುವ ಅಥವಾ ಯಾವುದೇ ದೋಣಿಯನ್ನು ನಡೆಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ:

ಪರಂತು, ನೀರಾವರಿ ಅಧಿಕಾರಿಯ ಸಹಮತಿ ಪಡೆದ ಹೊರತು, ಈ ಪ್ರಕರಣದ ಮೇರೆಗೆ ಅಧಿಕಾರ ಪಡೆದುಕೊಂಡಂತಹ ಯಾರೇ ಅಧಿಕಾರಿಯು ಐದು ನೂರು ಎಕರೆಗಳಿಗಿಂತ ಹೆಚ್ಚಿಲ್ಲದ ಅಚ್ಚುಕಟ್ಟು ಹೊಂದಿರುವ ಯಾವುದೇ ಕೆರೆಯಲ್ಲಿ ಮೀನನ್ನು ಹಿಡಿಯಲು ಯಾವುದೇ ಅನುಮತಿಯನ್ನು ನೀಡತಕ್ಕದ್ದಲ್ಲ.

**53. ಕಾಲುವೆಯಿಂದ ನೀರು ಹೊರಬಿಡುವುದನ್ನು ನಿಷೇಧಿಸುವುದು.**- ನೀರಾವರಿ ಅಧಿಕಾರಿ ಅಥವಾ ಈ ಸಂಬಂಧದಲ್ಲಿ ಕ್ರಮಬದ್ಧವಾಗಿ ಅಧಿಕಾರ ನೀಡಲಾದ ಯಾರೇ ಅಧಿಕಾರಿಯನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು, ಏರಿಯನ್ನು ಒಡೆಯುವ, ತೂಬನ್ನು ಅಥವಾ ಹೊರದಾರಿಯನ್ನು ನಿರ್ಮಾಣ ಮಾಡುವ ಅಥವಾ ಯಾವುದೇ ಇತರೆ ಇಂತಹದೇ ಉಲ್ಲಂಘನೆಯ ಮೂಲಕ ಕಾಲುವೆ ಅಥವಾ ನಾಲೆಯಿಂದ ನೀರನ್ನು ಹೊರಬಿಡತಕ್ಕದ್ದಲ್ಲ.

**54. ನಾಲೆಯಲ್ಲಿ ಅಥವಾ ಅದರ ಸಮೀಪದಲ್ಲಿ ಗಣಿ ಉತ್ಪನ್ನಗಳನ್ನು ಶೇಖರಿಸುವುದಕ್ಕೆ ನಿಷೇಧ.**- ಯಾವುದೇ ನಾಲೆಯಲ್ಲಿ ಅಥವಾ ನೈಸರ್ಗಿಕ ಅಥವಾ ಕೃತಕವಾಗಿರುವ ಯಾವ ಕಾಮಗಾರಿಯ ಮೂಲಕ ಮಳೆ ಅಥವಾ ಇತರ ನೀರು ಯಾವುದೇ ನೀರಾವರಿ ಕಾಮಗಾರಿಗೆ ಹರಿದುಹೋಗುವುದೋ ಆ ಇತರ ಕಾಮಗಾರಿಯಲ್ಲಿ ಅಥವಾ ಅದರ ಸಮೀಪದಲ್ಲಿ ಯಾರೇ ವ್ಯಕ್ತಿಯು ಗಣಿಯ ಯಾವುದೇ ಉತ್ಪನ್ನಗಳನ್ನು ಶೇಖರಿಸತಕ್ಕದ್ದಲ್ಲ.

## ಅಧ್ಯಾಯ- IX

## ದಂಡನೆಗಳು ಮತ್ತು ಕಾರ್ಯವಿಧಾನ

**55. ಅಧಿನಿಯಮದ ಮೇರೆಗಿನ ಅಪರಾಧಗಳು.**- ಯಾರಾದರೂ ಸ್ವಯಿಚ್ಛೆಯಿಂದ ಮತ್ತು ಕ್ರಮಬದ್ಧ ಅಧಿಕಾರವಿಲ್ಲದೆ,-

(i) ಯಾವುದೇ ನೀರಾವರಿ ಕಾಮಗಾರಿಗೆ ಹಾನಿಯುಂಟು ಮಾಡಿದರೆ, ಅದನ್ನು ಬದಲಾಯಿಸಿದರೆ, ವಿಸ್ತರಿಸಿದರೆ ಅಥವಾ ಅದಕ್ಕೆ ಅಡಚಣೆಯುಂಟು ಮಾಡಿದರೆ;

(ii) ಯಾವುದೇ ನೀರಾವರಿ ಕಾಮಗಾರಿಯಲ್ಲಿ ಹಸ್ತಕ್ಷೇಪ ಮಾಡುವಂತೆ ನೀರಿನ ಸರಬರಾಜನ್ನು ಅಥವಾ ಅದರಿಂದ, ಅದರ ಮೂಲಕ, ಅದರ ಮೇಲೆ ಅಥವಾ ಅದರ ಅಡಿ ನೀರಿನ ಪ್ರವಾಹವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಥವಾ ಯಾವುದೇ ನೀರಾವರಿ ಕಾಮಗಾರಿಯಲ್ಲಿ ಯಾವುದೇ ರೀತಿಯಿಂದ ನೀರಿನ ಮಟ್ಟವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಕೆಲಸದಲ್ಲಿ ಹಸ್ತಕ್ಷೇಪ ಮಾಡಿದರೆ;

(iii) ಯಾವುದೇ ನೀರಾವರಿ ಕಾಮಗಾರಿಯಲ್ಲಿ ಯಾವುದೇ ತೂಬು ಗುಂಡಿಯನ್ನು ಅಥವಾ ಹೊರದಾರಿ ಅಥವಾ ಅದೇ ರೀತಿಯ ಯಾವುದೇ ಇತರ ಸಾಧನವನ್ನು ತೆರೆಯುವುದು, ಮುಚ್ಚುವುದು ಅಥವಾ ಅದಕ್ಕೆ ಅಡಚಣೆಮಾಡುವುದು ಅಥವಾ ತೆರೆಯುವುದಕ್ಕೆ, ಮುಚ್ಚುವುದಕ್ಕೆ ಅಥವಾ ಅಡಚಣೆ ಮಾಡುವುದಕ್ಕೆ ಪ್ರಯತ್ನಿಸುವುದು ಅಥವಾ ಯಾವುದೇ ಇತರೆ ರೀತಿಯಲ್ಲಿ ಉಲ್ಲಂಘನೆ ಮಾಡಿದರೆ;

(iv) ಯಾವುದೇ ನೀರಾವರಿ ಕಾಮಗಾರಿಯ ನೀರನ್ನು ಸಾಮಾನ್ಯವಾಗಿ ಯಾವ ಉದ್ದೇಶಕ್ಕಾಗಿ ಬಳಸಲಾಗುವುದೋ ಆ ಉದ್ದೇಶಕ್ಕೆ ಕಡಿಮೆ ಯೋಗ್ಯವಾಗುವ ಹಾಗೆ ಆ ನೀರನ್ನು ಕಲುಷಿತಗೊಳಿಸಿದರೆ ಅಥವಾ ಮಲಿನಗೊಳಿಸಿದರೆ;

(v) ಲೋಕನೌಕರನ ಅಧಿಕಾರದಿಂದ ಸ್ಥಾಪಿಸಿದ ಯಾವುದೇ ಭೂಮಿ ಗುರುತು ಅಥವಾ ಸಮತಲ ಗುರುತು ಅಥವಾ ಜಲಮಾಪಕವನ್ನು ನಾಶಪಡಿಸಿದರೆ, ವಿರೂಪಗೊಳಿಸಿದರೆ ಅಥವಾ ಕದಲಿಸಿದರೆ;

(vi) ಯಾವುದೇ ನೀರಾವರಿ ಕಾಮಗಾರಿಯಲ್ಲಿ ನೀರಿನ ಹರಿಯುವಿಕೆಯನ್ನು ನಿಯಂತ್ರಿಸುವ, ವಿನಿಯಮಿಸುವ ಅಥವಾ ಅಳತೆ ಮಾಡುವ ಸಲುವಾಗಿ ಇರುವ ಯಾವುದೇ ಉಪಕರಣವನ್ನು ಅಥವಾ ಯಾವುದೇ ಉಪಕರಣದ ಭಾಗವನ್ನು ನಾಶಪಡಿಸಿದರೆ, ಕೆಡಿಸಿದರೆ ಅಥವಾ ತೆಗೆದುಹಾಕಿದರೆ;

(vii) 71ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಗೆ ವಿರುದ್ಧವಾಗಿ ನೀರಾವರಿ ಕಾಮಗಾರಿಯ ಯಾವುದೇ ಕಾಮಗಾರಿಗಳ, ಏರಿಗಳ, ಕಾಲುವೆಗಳ ಅಥವಾ ನಾಲೆಗಳ ಮೇಲೆ ಅಥವಾ ಅದಕ್ಕೆ ಅಡ್ಡಲಾಗಿ ಯಾವುದೇ ಪ್ರಾಣಿ ಅಥವಾ ವಾಹನವು ಹಾದುಹೋಗಬಾರದೆಂದು ಅವನಿಗೆ ತಿಳಿಸಿದ್ದರೂ ಸಹ ಹಾದುಹೋಗುವಂತೆ ಮಾಡಿದರೆ;

(viii) ಯಾವುದೇ ನೀರಾವರಿ ಕಾಮಗಾರಿಯ ಏರಿಯ ಮೇಲೆ ಯಾವುದೇ ಪ್ರಾಣಿಗಳು ಮೇಯುವಂತೆ ಮಾಡಿದರೆ ಅಥವಾ ಮೇಯುವುದಕ್ಕೆ ಅವಕಾಶ ಕೊಟ್ಟಿದ್ದರೆ ಅಥವಾ ಹಗ್ಗದಿಂದ ಕಟ್ಟಿಹಾಕಿದ್ದರೆ;

(ix) ಯಾವುದೇ ನೀರಾವರಿ ಕಾಮಗಾರಿಯ ರಕ್ಷಣೆಗಾಗಿ ಉದ್ದೇಶಿಸಲಾದ ಯಾವುದೇ ಮರ, ಪೊದೆ, ಹುಲ್ಲು ಅಥವಾ ಇತರೆ ಗಿಡಗಂಟೆಗಳನ್ನು ಕಿತ್ತು ಹಾಕಿದರೆ ಅಥವಾ ಅವುಗಳಿಗೆ ಹಾನಿಯುಂಟು ಮಾಡಿದರೆ;

(x) ಯಾವ ನೀರಿನ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರುವುದೋ ಆ ನೀರಿನ ಮುಕ್ತ ಹರಿಯುವಿಕೆಗೆ ಅಡ್ಡಲಾಗಿ ಒಡ್ಡು ನಿರ್ಮಿಸಿದರೆ ಅಥವಾ ಅನ್ಯಥಾ ಅಡಚಣೆಯುಂಟು ಮಾಡಿದರೆ;

(xi) ಹೊಲ-ಕಾಲುವೆಯ ನಿರ್ವಹಣೆಗೆ ಅಥವಾ ಹೊಲ-ಕಾಲುವೆಯ ಬಳಕೆಗೆ ಹೊಣೆಗಾರರಾಗಿದ್ದು, ಅದರ ನೀರಿನ ಪೋಲನ್ನು ತಡೆಯುವ ಸಲುವಾಗಿ, ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲು ಅಲಕ್ಷಿಸಿದರೆ ಅಥವಾ ಅದರಿಂದ ಆಗುವ ಅಧಿಕೃತ ನೀರಿನ ವಿತರಣೆಯಲ್ಲಿ ಹಸ್ತಕ್ಷೇಪ ಮಾಡಿದರೆ ಅಥವಾ ಅಂಥ ನೀರನ್ನು ಅನಧಿಕೃತ ರೀತಿಯಲ್ಲಿ ಬಳಸಿದರೆ;

[1][(xii) XXX;][1]

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(xiii) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ;

(xiv) 71ನೇ ಪ್ರಕರಣದ ಮೇರೆಗೆ ಮಾಡಲಾದ ಯಾವ ನಿಯಮದ ಉಲ್ಲಂಘನೆಯನ್ನು ಆ ಪ್ರಕರಣದ ಮೇರೆಗೆ ಮಾಡಲಾದ ನಿಯಮಗಳಲ್ಲಿ ಆ ಪ್ರಕರಣದ ಮೇರೆಗೆ ದಂಡನೀಯ ಅಪರಾಧವೆಂದು ಘೋಷಿಸಲಾಗಿದೆಯೋ ಆ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ

-ಅಪರಾಧ ನಿರ್ಣಯವಾದ ಮೇಲೆ (vi), (x), (xi) [1][xxx][1]ನೆಯ ಖಂಡಗಳ ಮೇರೆಗಿನ ಅಪರಾಧಗಳಿಗಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂತಹ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಯಾವುದೇ ಇತರೆ ಖಂಡದ ಮೇರೆಗಿನ ಅಪರಾಧಗಳಿಗೆ ಎರಡು ತಿಂಗಳುಗಳಿಗೆ ವಿಸ್ತರಿಸಬಹುದಾದಂತಹ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

1. 1969ರ ಅಧಿನಿಯಮ ಸಂಖ್ಯೆ 12ರ ಮೂಲಕ 19.6.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು, (iii) ಮತ್ತು (viii)ನೇ ಖಂಡಗಳ ಮೇರೆಗಿನ ಎರಡನೇ ಅಥವಾ ನಂತರದ ಅಪರಾಧಗಳಿಗೆ ಅಂತಹ ಜುಲ್ಮಾನೆಯು ಐವತ್ತು ರೂ.ಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು ಇತರೆ ಖಂಡಗಳ ಮೇರೆಗೆ ಅಂತಹ ಜುಲ್ಮಾನೆ ಇನ್ನೂರ ಐವತ್ತು ರೂ.ಗಳಿಗಿಂತ ಕಡಿಮೆ ಇರತಕ್ಕದ್ದಲ್ಲ:

ಮತ್ತೂ ಪರಂತು, ಅಪರಾಧವು ಮುಂದುವರಿದ ಸಂದರ್ಭದಲ್ಲಿ, ಅಪರಾಧ ಮುಂದುವರಿಕೆಯ ಅವಧಿಯಲ್ಲಿ ಐವತ್ತು ರೂ.ಗಳಿಗಿಂತ ಹೆಚ್ಚಿಲ್ಲದ ದೈನಂದಿನ ಜುಲ್ಮಾನೆಯನ್ನೂ ಸಹ ವಿಧಿಸತಕ್ಕದ್ದು.

**56. 55ನೇ ಪ್ರಕರಣದ ಮೇರೆಗೆ ಅಪರಾಧ ನಿರ್ಣೀತರಾದ ವ್ಯಕ್ತಿಗಳು ಹಾನಿ, ಮುಂತಾದವುಗಳ ದುರಸ್ತಿಗೆ ಬದ್ಧರಾಗಿರತಕ್ಕದ್ದು.**- 55ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು, ಅಪರಾಧ ನಿರ್ಣೀತನಾದಾಗ, ಮ್ಯಾಜಿಸ್ಟ್ರೇಟನು, ಸದರಿ ವ್ಯಕ್ತಿಯು ಆದೇಶದಲ್ಲಿ ನಿಗದಿಪಡಿಸಬೇಕಾದ ಅವಧಿಯೊಳಗೆ, ಯಾವ ಭೂಮಿ ಗುರುತು, ಸಮತಲ ಗುರುತು, ಜಲಮಾಪಕ ಅಥವಾ ಉಪಕರಣಗಳಿಗೆ ಸಂಬಂಧಿಸಿದಂತೆ ಅಪರಾಧ ನಿರ್ಣಯವಾಗಿದೆಯೋ ಅವುಗಳ ಅಪರಾಧದ ಸಂಬಂಧದಲ್ಲಿ ಅಡಚಣೆಗಳನ್ನು ನಿವಾರಿಸಲು ಅಥವಾ ಹಾನಿಯನ್ನು ದುರಸ್ತಿಪಡಿಸಲು ಅಥವಾ ಉಪಕರಣಗಳನ್ನು ಪುನ: ಇಡಲು, ದುರಸ್ತಿ ಮಾಡಲು ಆದೇಶಿಸಬಹುದು. ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂತಹ ಆದೇಶವನ್ನು ಪಾಲಿಸಲು ಅಂತಹ ವ್ಯಕ್ತಿಯು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ನೀರಾವರಿ ಅಧಿಕಾರಿಯು ಅಂತಹ ಆದೇಶದ ಅನುಸಾರ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಮತ್ತು ಅದರ ವೆಚ್ಚವನ್ನು ಅಂತಹ ವ್ಯಕ್ತಿಯಿಂದ ಭೂ ಕಂದಾಯದ ಬಾಕಿ ಎಂಬಂತೆ ವಸೂಲಿ ಮಾಡತಕ್ಕದ್ದು.

**57. ದುಷ್ಪ್ರೇರಣೆ.**- ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ ಎಸಗುವಂತೆ ಯಾರೇ ವ್ಯಕ್ತಿ ದುಷ್ಪ್ರೇರಣೆ ಮಾಡಿದಲ್ಲಿ ಅಥವಾ ಯಾವುದೇ ಅಂತಹ ಅಪರಾಧವನ್ನು ಮಾಡಲು ಪ್ರಯತ್ನಿಸಿದಲ್ಲಿ, ಅವನನ್ನು ಅಂತಹ ಅಪರಾಧಕ್ಕಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಿದ ಶಿಕ್ಷೆಯಿಂದ ದಂಡಿಸತಕ್ಕದ್ದು.

**58. ಕಿರುಕುಳ ಕೊಡಲು ಅಧಿಕಾರ ಚಲಾಯಿಸಿದ್ದಕ್ಕೆ ಶಿಕ್ಷೆ.**- (1) ಯಾರೇ ಅಧಿಕಾರಿ ಅಥವಾ ಈ ಅಧಿನಿಯಮದ ಮೇರೆಗೆ ಕ್ರಮ ತೆಗೆದುಕೊಳ್ಳಲು ಕ್ರಮಬದ್ಧವಾಗಿ ಅಧಿಕಾರ ಪಡೆದ ಇತರೆ ವ್ಯಕ್ತಿಯು, ಸಮಂಜಸ ಕಾರಣವಿಲ್ಲದೆ ಈ ಅಧಿನಿಯಮದ ಮೇರೆಗೆ, ಯಾವುದೇ ಅಧಿಕಾರವನ್ನು ಕಿರುಕುಳ ಕೊಡುವ ಉದ್ದೇಶಕ್ಕಾಗಿ ಅಥವಾ ದ್ವೇಷ ಭಾವನೆಯಿಂದ ಚಲಾಯಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ ಅವನು ದಂಡಿತನಾಗತಕ್ಕದ್ದು.

(2) ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಅಧಿಕಾರಿಯು ದೂರು ನೀಡಿದ್ದ ಹೊರತು, (1)ನೇ ಉಪ ಪ್ರಕರಣದ ಮೇರೆಗೆ ಯಾವ ಕಾನೂನು ಕ್ರಮವನ್ನೂ ಪುರಸ್ಕರಿಸತಕ್ಕದ್ದಲ್ಲ.

**59. ಇತರೆ ಕಾನೂನುಗಳ ಮೇರೆಗೆ ಶಿಕ್ಷೆಯನ್ನು ಪ್ರತಿಷೇಧಿಸದಿರುವುದು.**- ಈ ಅಧಿನಿಯಮದಲ್ಲಿರುವುದು ಯಾವುದೂ, ಯಾರೇ ವ್ಯಕ್ತಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಕಾರ್ಯಕ್ಕಾಗಿ ಅಥವಾ ಲೋಪಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಕಾನೂನು ಕ್ರಮ ಜರುಗಿಸುವಂತೆ ತಡೆಯತಕ್ಕದ್ದಲ್ಲ.

**60. ಈ ಅಧಿನಿಯಮದ ಮೇರೆಗಿನ ಅಪರಾಧಗಳು ಸಂಜ್ಞೇಯ ವಾಗಿರುವುದು.**- ಈ ಅಧಿನಿಯಮದ 55ನೇ ಪ್ರಕರಣದ (vii) ಮತ್ತು (viii)ನೇ ಖಂಡಗಳ ಮೇರೆಗಿನ ಅಪರಾಧಗಳ ಹೊರತು ಎಲ್ಲ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

[1][**60ಎ. ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು.**- (1) ಗೊತ್ತುಪಡಿಸಬಹುದಾದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಹಾಗೂ ಅಂಥ ರೀತಿಯಲ್ಲಿ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಯಾವುದೇ ವ್ಯವಹರಣೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅಥವಾ ಆ ತರುವಾಯ, ನೀರಾವರಿ ಅಧಿಕಾರಿಯು ಅಂಥ ವ್ಯಕ್ತಿಯು ಮಾಡಿರುವ ಅಥವಾ ಮಾಡಿದ್ದಾನೆಂದು ಸಂದೇಹಪಟ್ಟಿರುವ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳುವ ಸಲುವಾಗಿ ಐದು ಸಾವಿರ ರೂಪಾಯಿಗಳನ್ನು ಮೀರದ ಹಣದ ಸಂದಾಯಕ್ಕೆ ಒಪ್ಪಿಗೆ ಕೊಡಬಹುದು.

(2) ಅಂಥ ಮೊಬಲಗನ್ನು ಸಂದಾಯ ಮಾಡಿದಾಗ, ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿ ಇದ್ದರೆ, ಆತನನ್ನು ವಿಮೋಚನೆಗೊಳಿಸತಕ್ಕದ್ದು, ಯಾವುದೇ ಸ್ವತ್ತನ್ನು ಜಪ್ತಿ ಮಾಡಿದ್ದರೆ ಅದನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯ ಅಥವಾ ಸ್ವತ್ತಿನ ವಿರುದ್ಧ ಯಾವುದೇ ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.][1]

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**61. ಕಾಮಗಾರಿಗೆ ಆಗುವ ಅಡಚಣೆ ಅಥವಾ ಹಾನಿಯನ್ನು ನಿವಾರಿಸುವ ಅಧಿಕಾರ.**- ಯಾವುದೇ ಕಾಮಗಾರಿಯ ಪ್ರಭಾರದಲ್ಲಿರುವ ಅಥವಾ ಅದರಲ್ಲಿ ನಿಯೋಜಿತನಾಗಿರುವ ಯಾರೇ ವ್ಯಕ್ತಿಯ ಅಭಿಪ್ರಾಯದಲ್ಲಿ,-

(ಎ) ಯಾವುದೇ ನೀರಾವರಿ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ ನಾಶಪಡಿಸುತ್ತಾನೆಂದು, ಬದಲಿಸುತ್ತಾನೆಂದು, ವಿಸ್ತರಿಸುತ್ತಾನೆಂದು ಅಥವಾ ಅಡಚಣೆ ಉಂಟುಮಾಡುತ್ತಾನೆಂದು;

(ಬಿ) ಯಾವುದೇ ನೀರಾವರಿ ಕಾಮಗಾರಿಯಲ್ಲಿ ಅಥವಾ ಅದರಿಂದ ನೀರಿನ ಸರಬರಾಜಿನಲ್ಲಿ ಅಥವಾ ಅದರ ಹರಿಯುವಿಕೆಯಲ್ಲಿ ಸೂಕ್ತ ಅಧಿಕಾರವಿಲ್ಲದೆ ಹಸ್ತಕ್ಷೇಪ ಮಾಡಿ, ಅದರಿಂದ ಅಂತಹ ನೀರಾವರಿ ಕಾಮಗಾರಿಗೆ ಅಡಚಣೆಯುಂಟು ಮಾಡಿದ್ದಾನೆ ಅಥವಾ ನಾಶಪಡಿಸಿದ್ದಾನೆ ಅಥವಾ ಅದರ ಉಪಯುಕ್ತತೆಯನ್ನು ಕಡಿಮೆ ಮಾಡಿದ್ದಾನೆಂದು ಅಭಿಪ್ರಾಯಪಟ್ಟರೆ

– ಆ ವ್ಯಕ್ತಿಯನ್ನು, ಆ ಜಮೀನಿನಿಂದ ಅಥವಾ ಅದಕ್ಕೆ ಸೇರಿದ ಕಟ್ಟಡಗಳಿಂದ ಹೊರ ಹಾಕಬಹುದು ಅಥವಾ ವಾರಂಟಿಲ್ಲದೆ ಆತನನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಅನಗತ್ಯ ವಿಳಂಬ ಮಾಡದೆ ಪೊಲೀಸು ಅಧಿಕಾರಿಗೆ ಒಪ್ಪಿಸಬಹುದು ಅಥವಾ ಪೊಲೀಸು ಅಧಿಕಾರಿಯ ಗೈರುಹಾಜರಿಯಲ್ಲಿ, ಅತಿ ಹತ್ತಿರದ ಪೊಲೀಸು ಠಾಣೆಗೆ ಕರೆದೊಯ್ಯಬಹುದು ಅಥವಾ ಕರೆದೊಯ್ಯುವ ವ್ಯವಸ್ಥೆ ಮಾಡಬಹುದು.

**62. ಜುಲ್ಮಾನೆಯನ್ನು ಮಾಹಿತಿದಾರನಿಗೆ ಬಹುಮಾನವಾಗಿ ಕೊಡುವುದು.**– ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಯಾರೇ ವ್ಯಕ್ತಿಗೆ ಜುಲ್ಮಾನೆ ವಿಧಿಸಿದಾಗಲೆಲ್ಲ, ಅಂತಹ ಜುಲ್ಮಾನೆ ವಿಧಿಸುವ ಅಥವಾ ಅಂತಹ ಜುಲ್ಮಾನೆಯ ಶಿಕ್ಷೆಯನ್ನು ಮೇಲ್ಮನವಿಯಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಅಥವಾ ಅಂತಹ ಜುಲ್ಮಾನೆಯು ಶಿಕ್ಷೆಯ ಒಂದು ಭಾಗವಾಗಿರುವ ಶಿಕ್ಷೆಯನ್ನು ಸ್ಥಿರೀಕರಿಸುವ ನ್ಯಾಯಾಲಯವು, ಅಂತಹ ಇಡೀ ಜುಲ್ಮಾನೆಯ ಅಥವಾ ಅದರ ಅಂತಹ ಜುಲ್ಮಾನೆಯ ಯಾವುದೇ ಭಾಗವನ್ನು ಅಪರಾಧದ ಪತ್ತೆಗೆ ಅಥವಾ ಅಪರಾಧಿಯ ಅಪರಾಧ ನಿರ್ಣಯಕ್ಕೆ ದಾರಿಯಾಗುವ ಮಾಹಿತಿಯನ್ನು ಕೊಟ್ಟ ಆ ಯಾರೇ ವ್ಯಕ್ತಿಗೆ ಬಹುಮಾನದ ರೂಪದಲ್ಲಿ ಸಂದಾಯ ಮಾಡಬಹುದು.

ನ್ಯಾಯಾಲಯದ ಯಾವ ತೀರ್ಮಾನವು ಮೇಲ್ಮನವಿಗೆ ಅಥವಾ ಪುನರೀಕ್ಷಣೆಗೆ ಒಳಪಟ್ಟಿರುವುದೋ ಆ ನ್ಯಾಯಾಲಯವು ಜುಲ್ಮಾನೆಯನ್ನು ಬಹುಮಾನವಾಗಿ ಸಂದಾಯ ಮಾಡುವಂತೆ ಆದೇಶಿಸಿದರೆ ಹಾಗೆ ಸಂದಾಯ ಮಾಡಬೇಕೆಂದು ಆದೇಶಿಸಲಾದ ಆ ಮೊಬಲಗನ್ನು, ಮೇಲ್ಮನವಿಯನ್ನು ಸಲ್ಲಿಸಲು ಗೊತ್ತುಪಡಿಸಲಾದಂಥ ಅವಧಿಯು ಮುಕ್ತಾಯವಾಗುವವರೆಗೆ ಅಥವಾ ಮೇಲ್ಮನವಿ ಸಲ್ಲಿಸಿದ್ದರೆ, ಅದರ ತೀರ್ಮಾನದ ತರುವಾಯದವರೆಗೆ ಸಂದಾಯ ಮಾಡತಕ್ಕದ್ದಲ್ಲ.

## [1][ಅಧ್ಯಾಯ– IXಎ

## ನೀರು ಬಳಕೆದಾರರ ಸಂಘದ [2][ಮತ್ತು ನೀರು ಬಳಕೆದಾರರ ಅಸೋಸಿಯೇಷನ್ನಿನ][2] ಪ್ರಕಾರ್ಯಗಳು, ಇತ್ಯಾದಿ

1. 2000ದ ಅಧಿನಿಯಮ ಸಂಖ್ಯೆ 24ರ ಮೂಲಕ 14.06.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ ದಿನಾಂಕ 25.02.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**62ಎ. ನೀರು ಬಳಕೆದಾರರ ಸಂಘದ ಪ್ರಕಾರ್ಯಗಳು.**– ನೀರು ಬಳಕೆದಾರರ ಸಂಘವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ,–

(1) ಸಾಂಸ್ಥಿಕ ಹಣಕಾಸು ಪಡೆಯುವ ಮೂಲಕ ನೀರಾವರಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದು;

(2) ನೀರಾವರಿ ಇಲಾಖೆ ಅಥವಾ ಕೃಷ್ಣಾ ಜಲಭಾಗ್ಯ ನಿಗಮ ಅಥವಾ ಕರ್ನಾಟಕ ನೀರಾವರಿ ನಿಗಮದಿಂದ ಘನಮಾನದ ಆಧಾರದ ಮೇಲೆ ಸಗಟಾಗಿ ನೀರು ದೊರಕಿಸಿಕೊಳ್ಳುವುದು ಮತ್ತು ಸರ್ವ ಸದಸ್ಯರ ಸಭೆಯು ನೀರಿನ ವಿತರಣೆಗಾಗಿ ವಿಧಿಸಿದ ತತ್ವಗಳಿಗನುಸಾರವಾಗಿ ಭೂ ಹಿಡುವಳಿದಾರರಿಗೆ ಆ ನೀರನ್ನು ಸಮಪ್ರಮಾಣದಲ್ಲಿ ವಿತರಿಸುವುದು;

(3) ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಸಂಬಂಧದಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು;

(4) ನೀರು ದರಗಳನ್ನು ಮತ್ತು ಸೇವಾ ಶುಲ್ಕಗಳನ್ನು ವಿಧಿಸುವುದು ಮತ್ತು ಅವುಗಳನ್ನು ಭೂ ಹಿಡುವಳಿದಾರರಿಂದ ಸಂಗ್ರಹಿಸುವುದು;

(5) ನೀರನ್ನು ಯೋಗ್ಯ ರೀತಿಯಲ್ಲಿ ಮತ್ತು ಮಿತವ್ಯಯಕಾರಿಯಾಗಿ ಬಳಸುವ ಬಗ್ಗೆ ಮತ್ತು ಹೊಸ ತಂತ್ರಜ್ಞಾನವನ್ನು ಅಳವಡಿಸುವಲ್ಲಿ ಹಾಗೂ ಅವಶ್ಯಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಭೂಹಿಡುವಳಿದಾರರಿಗೆ ಶಿಕ್ಷಣ ನೀಡುವುದು ಮತ್ತು ತರಬೇತಿಗೊಳಿಸುವುದು;

(6) ಪ್ರತಿಯೊಂದು ನೀರಾವರಿ ಋತುವಿಗಾಗಿ ನೀರಿನ ಆಯವ್ಯಯ ಪತ್ರ ಮತ್ತು ಹಣಕಾಸು ಆಯವ್ಯಯ ಪತ್ರ ತಯಾರಿಸುವುದು;

(7) ಭೂಹಿಡುವಳಿದಾರರ ನಡುವೆ ಉದ್ಭವಿಸಬಹುದಾದ ವಿವಾದಗಳನ್ನು ಪರಿಹರಿಸುವುದು;

(8) ಸಂಘದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಮತ್ತು ದಕ್ಷ ನಿರ್ವಹಣೆಗಾಗಿ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವುದು;

(9) ಕೃಷಿಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು ಅಥವಾ ನಿರ್ವಹಿಸುವುದು;

(10) ನೀರಾವರಿ ಮತ್ತು ಹರಿಗಾಲುವೆ ವ್ಯವಸ್ಥೆಯ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವಲ್ಲಿ, ನೀರಾವರಿ ಇಲಾಖೆಗೆ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ನೆರವು ನೀಡುವುದು;

(11) ಸದಸ್ಯೇತರರಿಗೆ ಸಂಘದ ಸರ್ವ ಸದಸ್ಯರ ಸಭೆಯಿಂದ ಅನುಮೋದಿತವಾದ ದರಗಳಲ್ಲಿ ನೀರು ದರಗಳನ್ನು ಮತ್ತು ಸೇವಾ ಶುಲ್ಕಗಳನ್ನು ವಿಧಿಸುವುದು;

(12) ಸಮಾಪ್ತವಾಗುವ ವರ್ಷಕ್ಕಾಗಿ ಎಲ್ಲಾ ಸ್ವೀಕೃತಿಗಳ ಮತ್ತು ವೆಚ್ಚಗಳ ಬಗ್ಗೆ ಒಂದು ಲೆಕ್ಕಪರಿಶೋಧನ ವಿವರಣೆಯನ್ನು ಪ್ರತಿವರ್ಷ ನಿಯಮಿಸಲಾದ ದಿನಾಂಕದಂದು ಅಥವಾ ಅದಕ್ಕೆ ಮೊದಲು ನಿಯಮಿಸಲಾದ ಪ್ರಾಧಿಕಾರಕ್ಕೆ ಕಳುಹಿಸುವುದು;

(13) ನಿಯಮಿಸಲಾದಂಥ ದಿನಾಂಕದಂದು ಅಥವಾ ಅದಕ್ಕೆ ಮೊದಲು ಮತ್ತು ಅಂಥ ಪ್ರಾಧಿಕಾರಕ್ಕೆ ಸಂಘದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಒಂದು ವಿವರಣೆಯನ್ನು ಕಳುಹಿಸುವುದು;

(14) ಸಂಘದ ಸರ್ವ ಸದಸ್ಯರ ಸಭೆಯು ಮಾರ್ಗಸೂಚಿಗಳನ್ನು ತಯಾರಿಸತಕ್ಕದ್ದು ಮತ್ತು ಸಂಘದ ಬೈಲಾಗಳಿಗೆ ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ಅವರೊಂದಿಗೆ ಮಾಡಿಕೊಂಡ ಒಪ್ಪಂದದ ಷರತ್ತುಗಳಿಗೆ ಅನುಗುಣವಾಗಿ ಅದರ ದೈನಂದಿನ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯವಿಧಾನಗಳನ್ನು ನಿರ್ಧರಿಸುವುದು;

(15) ಸಂಘವು ನಿಯಮಿಸಲಾದ ಪ್ರಾಧಿಕಾರಕ್ಕೆ, ನಿಯಮಿಸಬಹುದಾದಂಥ ಮಾಹಿತಿಯನ್ನು ಒದಗಿಸುವುದು;

(16) ತನ್ನ ಕಾರ್ಯಾಚರಣೆಯ ಪ್ರದೇಶದಲ್ಲಿ ಸಾಲು ಮರಗಳನ್ನು ನೆಡಲು ಪ್ರೋತ್ಸಾಹಿಸುವುದು;

(17) ನಿಯಮಿಸಬಹುದಾದ ಅಂಥ ಇತರ ಕಾರ್ಯಗಳನ್ನು ನಿರ್ವಹಿಸುವುದು.

[1][**62ಎಎ. ನೀರು ಬಳಕೆದಾರರ ಅಸೋಸಿಯೇಷನ್ನಿನ ಪ್ರಕಾರ್ಯಗಳು.**– ನೀರು ಬಳಕೆದಾರರ ಅಸೋಸಿಯೇಷನ್ನು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ,–

(1) ಸಾಂಸ್ಥಿಕ ಹಣಕಾಸು ಪಡೆಯುವ ಮೂಲಕ ನೀರಾವರಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದು;

(2) ನೀರಾವರಿ ಇಲಾಖೆ ಅಥವಾ ಕೃಷ್ಣಾ ಜಲಭಾಗ್ಯ ನಿಗಮ ಅಥವಾ ಕರ್ನಾಟಕ ನೀರಾವರಿ ನಿಗಮದಿಂದ ಘನಮಾನದ ಆಧಾರದ ಮೇಲೆ ಸಗಟಾಗಿ ನೀರು ದೊರಕಿಸಿಕೊಳ್ಳುವುದು ಮತ್ತು ಸಾಮಾನ್ಯ ಸಭೆಯು ನೀರಿನ ವಿತರಣೆಗಾಗಿ ವಿಧಿಸಿದ ತತ್ವಗಳಿಗನುಸಾರವಾಗಿ ಭೂ ಹಿಡುವಳಿದಾರರಿಗೆ ಆ ನೀರನ್ನು ಸಮಪ್ರಮಾಣದಲ್ಲಿ ವಿತರಿಸುವುದು;

(3) ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಸಂಬಂಧದಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು;

(4) ನೀರು ದರಗಳನ್ನು ಮತ್ತು ಸೇವಾ ಶುಲ್ಕಗಳನ್ನು ಭೂಹಿಡುವಳಿದಾರರಿಂದ ಸಂಗ್ರಹಿಸುವುದು;

(5) ನೀರನ್ನು ಯೋಗ್ಯ ರೀತಿಯಲ್ಲಿ ಮತ್ತು ಮಿತವ್ಯಯಕಾರಿಯಾಗಿ ಬಳಸುವ ಬಗ್ಗೆ ಮತ್ತು ಹೊಸ ತಂತ್ರಜ್ಞಾನವನ್ನು ಅಳವಡಿಸುವಲ್ಲಿ ಹಾಗೂ ಅವಶ್ಯಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಭೂಹಿಡುವಳಿದಾರರಿಗೆ ಶಿಕ್ಷಣ ನೀಡುವುದು ಮತ್ತು ತರಬೇತಿಗೊಳಿಸುವುದು;

(6) ಪ್ರತಿಯೊಂದು ನೀರಾವರಿ ಋತುವಿಗಾಗಿ ನೀರಿನ ಆಯವ್ಯಯ ಪತ್ರ ಮತ್ತು ಹಣಕಾಸು ಆಯವ್ಯಯ ಪತ್ರ ತಯಾರಿಸುವುದು;

(7) ಭೂ ಹಿಡುವಳಿದಾರರ ನಡುವೆ ಉದ್ಭವಿಸಬಹುದಾದ ವಿವಾದಗಳನ್ನು ಪರಿಹರಿಸುವುದು;

(8) ಅಸೋಸಿಯೇಷನ್ನಿನ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಮತ್ತು ದಕ್ಷ ನಿರ್ವಹಣೆಗಾಗಿ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವುದು;

(9) ಕೃಷಿ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು ಅಥವಾ ನಿರ್ವಹಿಸುವುದು;

(10) ನೀರಾವರಿ ಮತ್ತು ಹರಿಗಾಲುವೆ ವ್ಯವಸ್ಥೆಯ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವಲ್ಲಿ, ನೀರಾವರಿ ಇಲಾಖೆಗೆ ನೆರವು ನೀಡುವುದು;

(11) ಸದಸ್ಯೇತರರಿಂದ ನೀರು ಬಳಕೆದಾರರ ಅಸೋಸಿಯೇಷನ್ನಿನ ಸಾಮಾನ್ಯ ಸಭೆಯಿಂದ ಅನುಮೋದಿತವಾದ ದರಗಳಲ್ಲಿ ನೀರು ದರಗಳನ್ನು ಮತ್ತು ಸೇವಾ ಶುಲ್ಕಗಳನ್ನು ಸಂಗ್ರಹಿಸುವುದು;

(12) ಸಮಾಪ್ತವಾಗುವ ವರ್ಷಕ್ಕಾಗಿ ಎಲ್ಲಾ ಸ್ವೀಕೃತಿಗಳ ಮತ್ತು ವೆಚ್ಚಗಳ ಬಗ್ಗೆ ಒಂದು ಲೆಕ್ಕಪರಿಶೋಧನ ವಿವರಣೆಯನ್ನು ಪ್ರತಿ ವರ್ಷ ನಿಯಮಿಸಲಾದ ದಿನಾಂಕದಂದು ಅಥವಾ ಅದಕ್ಕೆ ಮೊದಲು ನಿಯಮಿಸಲಾದ ಪ್ರಾಧಿಕಾರಕ್ಕೆ ಕಳುಹಿಸುವುದು;

(13) ನಿಯಮಿಸಲಾದಂಥ ದಿನಾಂಕದಂದು ಅಥವಾ ಅದಕ್ಕೆ ಮೊದಲು ಮತ್ತು ಅಂಥ ಪ್ರಾಧಿಕಾರಕ್ಕೆ ಅಸೋಸಿಯೇಷನ್ನಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಒಂದು ವಿವರಣೆಯನ್ನು ಕಳುಹಿಸುವುದು;

(14) ನೀರು ಬಳಕೆದಾರರ ಅಸೋಸಿಯೇಷನ್ನಿನ ಸಾಮಾನ್ಯ ಸಭೆಯಲ್ಲಿ, ನೀರು ಬಳಕೆದಾರರ ಅಸೋಸಿಯೇಷನ್ನಿನ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಗುಣವಾಗಿ ಅಸೋಸಿಯೇಷನ್ನಿನ ದಿನನಿತ್ಯದ ಕಾರ್ಯನಿರ್ವಹಣೆಗಾಗಿ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್‌ರೊಡನೆ ಮಾಡಿಕೊಳ್ಳುವ ಒಪ್ಪಂದದ ಷರತ್ತುಗಳಿಗೆ ಸಹ ಅನುಮೋದನೆಯನ್ನು ಪಡೆದುಕೊಳ್ಳುವುದು;

(15) ನಿಯಮಿಸಲಾದ ಪ್ರಾಧಿಕಾರಕ್ಕೆ, ನಿಯಮಿಸಲಾದಂಥ ಮಾಹಿತಿಯನ್ನು ಒದಗಿಸುವುದು;

(16) ತನ್ನ ಕಾರ್ಯಾಚರಣೆಯ ಪ್ರದೇಶದಲ್ಲಿ ಸಾಲು ಮರಗಳನ್ನು ನೆಡಲು ಪ್ರೋತ್ಸಾಹಿಸುವುದು;

(17) ನಿಯಮಿಸಬಹುದಾದ ಅಂಥ ಇತರ ಕಾರ್ಯಗಳನ್ನು ನಿರ್ವಹಿಸುವುದು.][1]

1. 2002ರ ಅಧಿನಿಯಮ ಸಂಖ್ಯೆ 9ರ ಮೂಲಕ 25.2.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**62ಬಿ. ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಳದ ಪ್ರಕಾರ್ಯಗಳು.**- ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಲವು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ,-

(1) ಯೋಜನೆಯ ಮಟ್ಟದ ಮಹಾಮಂಡಳದಿಂದ ತಯಾರಿಸಲಾದ ಕಾರ್ಯಾಚರಣೆ ಯೋಜನೆಗೆ ಸುಸಂಗತವಾಗಿ ಪ್ರತಿಯೊಂದು ನೀರಾವರಿ ಋತುವಿನ ಪ್ರಾರಂಭದಲ್ಲಿ, ಅದರ ಹಕ್ಕುದಾರಿಕೆಯ ಪ್ರದೇಶ, ಮಣ್ಣು ಮತ್ತು ಬೆಳೆಯ ನಮೂನೆ-ಇವುಗಳನ್ನು ಆಧರಿಸಿ ಒಂದು ಕಾರ್ಯಾಚರಣೆ ಯೋಜನೆಯನ್ನು ತಯಾರಿಸುವುದು;

(2) ಕೈಗೊಳ್ಳಬೇಕಾದ ಕ್ಲಿಷ್ಟ ನಿರ್ವಹಣಾ ಕಾಮಗಾರಿಗಳನ್ನು ಗುರುತಿಸುವುದು ಮತ್ತು ಈ ಕಾಮಗಾರಿಗಳ ಆದ್ಯತೆಯನ್ನು ನಿರ್ಧರಿಸುವುದು;

(3) ಕಾರ್ಯಾಚರಣೆಯಲ್ಲಿರುವ ಕಾಮಗಾರಿಗಳ ನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು ಮತ್ತು ಅವು ನಿಯಮಿಸಲಾದ ಗುಣಮಟ್ಟಗಳಿಗೆ ಅನುಗುಣವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(4) ವಿವಿಧ ಸಂಘಗಳ ನಡುವೆ ನೀರಿನ ಬಳಕೆಯನ್ನು ಮತ್ತು ಅದರ ಕಾರ್ಯಾಚರಣೆ ಪ್ರದೇಶದ ಬಗ್ಗೆ ಮೇಲ್ವಿಚಾರಣೆ ಮಾಡುವುದು ಮತ್ತು ವಿನಿಯಮಿಸುವುದು;

(5) ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಳದ ತೀರ್ಮಾನಗಳನ್ನು ಅನುಸರಿಸುವುದು;

(6) ನಿಯತಕಾಲಿಕವಾಗಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವುದು;

(7) ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಉತ್ತೇಜನ ನೀಡುವುದು;

(8) ಕಾಮಗಾರಿ ಕಾರ್ಯಾಚರಣೆ ಪ್ರದೇಶದಲ್ಲಿ ಸಾಲು ಮರಗಳನ್ನು ಬೆಳೆಸಲು ಪ್ರೋತ್ಸಾಹಿಸುವುದು;

(9) ನೀರು ಆಯವ್ಯಯ ಮತ್ತು ಬೆಳೆ ಯೋಜನೆಗಳನ್ನು ಸಿದ್ಧಪಡಿಸುವುದು.

**62ಸಿ. ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಲದ ಪ್ರಕಾರ್ಯಗಳು.**- ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಳವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ,-

(1) ಪ್ರತಿಯೊಂದು ನೀರಾವರಿ ಋತುವಿನ ಪ್ರಾರಂಭದಲ್ಲಿ, ಅದರ ಹಕ್ಕುದಾರಿಕೆ ಪ್ರದೇಶ, ಮಣ್ಣು ಮತ್ತು ಬೆಳೆಯ ನಮೂನೆ ಇವುಗಳನ್ನು ಆಧರಿಸಿ ಒಂದು ಕಾರ್ಯಾಚರಣೆ ಯೋಜನೆಯನ್ನು ತಯಾರಿಸುವುದು;

(2) ಕೈಗೊಳ್ಳಬೇಕಾದ ಕ್ಲಿಷ್ಟ ನಿರ್ವಹಣಾ ಕಾಮಗಾರಿಗಳನ್ನು ಗುರುತಿಸುವುದು ಮತ್ತು ಈ ಕಾಮಗಾರಿಗಳ ಆದ್ಯತೆ ನಿರ್ಧರಿಸುವುದು;

(3) ನಿರ್ವಹಿಸಲಾಗುತ್ತಿರುವ ನಿರ್ವಹಣಾ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಅವು ನಿಯಮಿಸಲಾದ ಗುಣಮಟ್ಟಗಳಿಗೆ ಅನುಗುಣವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು;

(4) ನೀರು ಆಯವ್ಯಯ ಮತ್ತು ಬೆಳೆ ಯೋಜನೆಗಳನ್ನು ತಯಾರಿಸುವುದು;

(5) ನಿಯತಕಾಲಿಕವಾಗಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವುದು;

(6) ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಉತ್ತೇಜನ ನೀಡುವುದು;

(7) ಕಾಮಗಾರಿಯ ಕಾರ್ಯಾಚರಣೆ ಪ್ರದೇಶದಲ್ಲಿ ಸಾಲು ಮರಗಳನ್ನು ಬೆಳೆಸಲು ಪ್ರೋತ್ಸಾಹ ನೀಡುವುದು.

**62ಡಿ. ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳ.–** (1) ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳದ ಆಡಳಿತ ಮಂಡಳಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು, ಇವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು, ಇವರು ಸಹ ಅಧ್ಯಕ್ಷರಾಗಿರತಕ್ಕದ್ದು;

(ಸಿ) ಸರ್ಕಾರದ ಕಾರ್ಯದರ್ಶಿ, ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ;

(ಡಿ) ನೀರಾವರಿ ವ್ಯವಸ್ಥಾಪನ ಸಹಭಾಗಿತ್ವದ ಕ್ಷೇತ್ರದಲ್ಲಿ ಪರಿಣಿತನಾಗಿರುವ ಮತ್ತು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿ;

(ಇ) ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳದ ಮುಖ್ಯ ಕಾರ್ಯನಿರ್ವಾಹಕ, ವ್ಯವಸ್ಥಾಪಕ ನಿರ್ದೇಶಕರು;

(ಎಫ್) ಎಲ್ಲಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರುಗಳು;

(ಜಿ) ರಾಜ್ಯದಲ್ಲಿನ ಸಣ್ಣ ನೀರಾವರಿ ಮತ್ತು ಏತ ನೀರಾವರಿ ಕಾಮಗಾರಿಗಳ ವಿವಿಧ ಯೋಜನೆಗಳನ್ನು ಪ್ರತಿನಿಧಿಸುವಷ್ಟು ಮತ್ತು ನೀರು ಬಳಕೆದಾರರ ಶೃಂಗಮಟ್ಟದ ಮಹಾಮಂಡಳದ ಬೈಲಾಗಳಲ್ಲಿ ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಚುನಾಯಿತರಾದ ವ್ಯಕ್ತಿಗಳು.

(2) ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳದ ಸದಸ್ಯರುಗಳ ಪೈಕಿಯಿಂದ ಉಪಾಧ್ಯಕ್ಷರನ್ನು ಚುನಾಯಿಸತಕ್ಕದ್ದು.

(3) ನೀರು ಬಳಕೆದಾರರ ಶೃಂಗ ಮಟ್ಟದ ಮಹಾಮಂಡಳವು, ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ವಿನಿಯಮನಕ್ಕೆ ಸಂಬಂಧಪಟ್ಟಂತೆ ಮತ್ತು ಅಲ್ಲಿಂದ ನೀರು ಸರಬರಾಜು ಮಾಡುವುದಕ್ಕೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಕಾರ್ಯನೀತಿಗಳು ಮತ್ತು ರೂಪಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡತಕ್ಕದ್ದು.

(4) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ, ನೀರು ಬಳಕೆದಾರರ ಶೃಂಗಮಟ್ಟದ ಮಹಾಮಂಡಳವು ನೀರು ಬಳಕೆದಾರರ ಯೋಜನೆಯ ಮಟ್ಟದ ಮಹಾಮಂಡಳಕ್ಕೆ, ನೀರು ಬಳಕೆದಾರರ ವಿತರಣೆ ಮಟ್ಟದ ಮಹಾಮಂಡಳಕ್ಕೆ ಮತ್ತು ನೀರು ಬಳಕೆದಾರರ ಸಂಘಕ್ಕೆ ನಿರ್ದೇಶನಗಳನ್ನು ನೀಡಬಹುದು.

**62ಇ. ಇತರ ಕಾನೂನುಗಳ ಪರಿಣಾಮ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು, ಇತರ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

**62ಎಫ್. ಕೆಲವು ಯೋಜನೆಗಳಿಗೆ ವಿನಾಯಿತಿ ನೀಡುವ ಅಧಿಕಾರ.–** ರಾಜ್ಯ ಸರ್ಕಾರವು, ಯಾವುದೇ ನೀರಾವರಿ ಪರಿಯೋಜನೆ ಅಥವಾ ಕಾಮಗಾರಿಗಳ ಗಾತ್ರ ಮತ್ತು ಸ್ವರೂಪವನ್ನು ಗಮನಿಸಿ ಅಧಿಸೂಚನೆಯ ಮೂಲಕ ನೀರು ಬಳಕೆದಾರರ ವಿತರಣೆಯ ಮಟ್ಟದ ಮಹಾಮಂಡಳದ ಅಥವಾ ನೀರು ಬಳಕೆದಾರರ ಯೋಜನಾ ಮಟ್ಟದ ಮಹಾಮಂಡಳಕ್ಕೆ ಸಂಬಂಧಿಸಿದ ಉಪಬಂಧಗಳ ಅನ್ವಯದಿಂದ ಅಂಥ ಪರಿಯೋಜನೆ ಅಥವಾ ಕಾಮಗಾರಿಗೆ ವಿನಾಯಿತಿ ನೀಡಬಹುದು.][1]

## ಅಧ್ಯಾಯ- X

### ಇತರ ವಿಷಯಗಳು

**63. ಅಪರಾಧಿ ಯಾರೆಂದು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ ಹಾನಿಯ ದುರಸ್ತಿ ವೆಚ್ಚವನ್ನು ವಸೂಲಿ ಮಾಡುವುದು.**- ಸೂಕ್ತ ಅಧಿಕಾರವಿಲ್ಲದೆ, ಯಾವುದೇ ನೀರಾವರಿ ಕಾಮಗಾರಿಗೆ ಯಾವುದೇ ಹಾನಿಯನ್ನು, ಬದಲಾವಣೆಯನ್ನು, ವಿಸ್ತರಣೆಯನ್ನು ಅಥವಾ ಅಡಚಣೆಯನ್ನು ಉಂಟುಮಾಡಿದ ವ್ಯಕ್ತಿಯು ಯಾರೆಂದು ಜಿಲ್ಲಾಧಿಕಾರಿಯು, ಸಾಕಷ್ಟು ಎಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಖಚಿತಪಡಿಸಿಕೊಳ್ಳಲಾಗದಿದ್ದರೆ ಅಥವಾ ಗುರುತಿಸಲಾಗದಿದ್ದರೆ, ಜಿಲ್ಲಾಧಿಕಾರಿಯು, ನೀರಾವರಿ ಅಧಿಕಾರಿಯ ಕೋರಿಕೆಯ ಮೇಲೆ ಆ ನೀರಾವರಿಯಿಂದ ಪ್ರಯೋಜನ ಪಡೆದ ಎಲ್ಲ ಭೂ ಹಿಡುವಳಿದಾರರಿಗೆ ಮತ್ತು ಅಧಿಭೋಗದಾರರಿಗೆ ಒಂದು ತಿಂಗಳಿಗೆ ಕಡಿಮೆ ಇಲ್ಲದ ಅವಧಿಯ ನೋಟೀಸು ನೀಡಿದ ನಂತರ ಮತ್ತು ಅವರ ಮನವಿಗಳೇನಾದರೂ ಇದ್ದರೆ, ಅವುಗಳ ಸುನಾವಣೆ ಮಾಡಿದ ನಂತರ, ಅಂತಹ ಹಾನಿಯನ್ನು ದುರಸ್ತಿಮಾಡುವ ಆಥವಾ ಬದಲಾವಣೆ ಅಥವಾ ವಿಸ್ತರಣೆಯನ್ನು ಅಥವಾ ಅಡಚಣೆಯನ್ನು ತೆಗೆದುಹಾಕುವುದರ ವೆಚ್ಚವನ್ನು ಅವರು ಸೂಕ್ತವೆಂದು ಭಾವಿಸುವಂತಹ ಪ್ರಮಾಣದಲ್ಲಿ ಭೂ ಕಂದಾಯದ ಬಾಕಿಯಂತೆ ಅವರಿಂದ ವಸೂಲಿ ಮಾಡಿಕೊಳ್ಳತಕ್ಕದ್ದು.

**64. ಅನಧಿಕೃತವಾಗಿ ನೀರನ್ನು ಬಳಸುತ್ತಿರುವ ವ್ಯಕ್ತಿಯನ್ನು ಕಂಡು ಹಿಡಿಯಲಾಗದಿದ್ದಾಗ ಹೊಣೆಗಾರಿಕೆ.**- (1) ಹೊಲ ಕಾಲುವೆಯ ಮೂಲಕ ಸರಬರಾಜು ಮಾಡಿದ ನೀರನ್ನು, ಯಾವುದೇ ಅನಧಿಕೃತ ರೀತಿಯಲ್ಲಿ ಬಳಸಿದಲ್ಲಿ ಮತ್ತು ಯಾರ ಕೃತ್ಯ ಅಥವಾ ಅಲಕ್ಷ್ಯತನದಿಂದ ಅಂತಹ ಬಳಕೆಯು ಆಗಿದೆಯೋ ಅವನನ್ನು ನೀರಾವರಿ ಅಧಿಕಾರಿಯು ಸಾಕಷ್ಟೆಂದು ಭಾವಿಸಬಹುದಾದಂಥ ವಿಚಾರಣೆಯ ನಂತರ, ಆತನನ್ನು ಕಂಡು ಹಿಡಿಯಲಾಗದಿದ್ದಲ್ಲಿ, ನೀರಾವರಿ ಅಧಿಕಾರಿಯು ನೀರಾವರಿಯಿಂದ ಪ್ರಯೋಜನ ಪಡೆದ ಎಲ್ಲ ಭೂ ಹಿಡುವಳಿದಾರರಿಗೆ ಮತ್ತು ಅಧಿಭೋಗದಾರರಿಗೆ ಒಂದು ತಿಂಗಳಿಗೆ ಕಡಿಮೆಯಿಲ್ಲದ ಅವಧಿಯ ನೋಟೀಸನ್ನು ನೀಡಿದ ನಂತರ ಮತ್ತು ಅವರ ಮನವಿಗಳೇನಾದರೂ ಇದ್ದರೆ, ಅವುಗಳ ಸುನಾವಣೆ ಮಾಡಿದ ನಂತರ ಅಧಿಕಾರಿಯು ನ್ಯಾಯೋಚಿತವೆಂದು ಭಾವಿಸಬಹುದಾದಂತಹ ಪ್ರಮಾಣದಲ್ಲಿ ಅಂತಹ ಹಿಡುವಳಿದಾರರಿಂದ ಮತ್ತು ಅಧಿಭೋಗದಾರರಿಂದ ಅಂತಹ ಬಳಕೆಗಾಗಿ ನಿಯಮಿಸಬಹುದಾದಂತಹ ವೆಚ್ಚಗಳನ್ನು ವಸೂಲಿ ಮಾಡಲು ಆದೇಶವನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ಅನಧಿಕೃತ ನೀರಿನ ಬಳಕೆಯ ಎಲ್ಲ ವೆಚ್ಚಗಳನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಲು ಅವಕಾಶವಿರತಕ್ಕದ್ದು.

**65. ಈ ಅಧಿನಿಯಮದ ಮೇರೆಗಿನ ಆದೇಶಗಳ ವಿರುದ್ಧ ಮೇಲ್ಮನವಿಗಳು.**- 12ನೇ ಅಥವಾ 24ನೇ ಪ್ರಕರಣದ ಮೇರೆಗೆ ನೀರಾವರಿ ಅಧಿಕಾರಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಜಿಲ್ಲೆಯ ಜಿಲ್ಲಾಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

**66. ಪುನರೀಕ್ಷಣೆಯ ಅಧಿಕಾರ.**- ಜಿಲ್ಲಾಧಿಕಾರಿಯ ಅಥವಾ ನೀರಾವರಿ ಅಧಿಕಾರಿಯ ಅಥವಾ ಜಿಲ್ಲಾಧಿಕಾರಿ ಅಥವಾ ನೀರಾವರಿ ಅಧಿಕಾರಿಗೆ ಅಧೀನರಾದ ಯಾರೇ ಅಧಿಕಾರಿಯಿಂದ ಅಂತಹ ಅಧಿಕಾರಿಯ ಯಾವುದೇ ತೀರ್ಮಾನದ ಅಥವಾ ಹೊರಡಿಸಲಾದ ಆದೇಶದ ಯತಾರ್ಥತೆ, ಕಾನೂನು ಬದ್ಧತೆ ಅಥವಾ ಔಚಿತ್ಯ ಇವುಗಳನ್ನು ಮತ್ತು ವ್ಯವಹರಣೆಗಳ ಕ್ರಮಬದ್ಧತೆಯನ್ನು ಸ್ವತ: ಖಚಿತಪಡಿಸಿಕೊಳ್ಳುವ ಉದ್ದೇಶಗಳಿಗಾಗಿ ವಿಭಾಗಾಧಿಕಾರಿಯು, ಈ ಅಧಿನಿಯಮದ ಮೇರೆಗೆ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು.

ಯಾವುದೇ ಪ್ರಕರಣದ ದಾಖಲೆಗಳನ್ನು ಪರೀಕ್ಷಿಸಿದಾಗ, ವಿಭಾಗಾಧಿಕಾರಿಯು ಅಂತಹ ಅಧಿಕಾರಿಯ ಯಾವುದೇ ಆದೇಶ ಅಥವಾ ತೀರ್ಮಾನವನ್ನು ಪರಿಷ್ಕರಿಸತಕ್ಕದ್ದೆಂದು ಪರಿಗಣಿಸಿದಾಗ ಅಂತಹ ಆದೇಶ ಅಥವಾ ತೀರ್ಮಾನವನ್ನು ಪರಿಷ್ಕರಿಸಬಹುದು ಅಥವಾ ಬದಲಾಯಿಸಬಹುದು ಮತ್ತು ವಿಭಾಗಾಧಿಕಾರಿಯವರು ನ್ಯಾಯೋಚಿತವೆಂದು ಭಾವಿಸಬಹುದಾದಂತಹ ಇತರೆ ಆದೇಶಗಳನ್ನು ಮಾಡಬಹುದು.

**67. ಸಾಕ್ಷಿಗಳನ್ನು ಕರೆಕಳಿಸುವ ಮತ್ತು ಪರೀಕ್ಷಿಸುವ ಅಧಿಕಾರ.**- ಯಾವುದೇ ವಿಚಾರಣೆಯನ್ನು ನಡೆಸಲು ಈ ಅಧಿನಿಯಮದ ಮೇರೆಗೆ ಅಧಿಕಾರ ಹೊಂದಿದ ಯಾರೇ ಅಧಿಕಾರಿಯು, ಸಾಕ್ಷಿದಾರರಿಗೆ ಕರೆ ಕಳಿಸುವುದಕ್ಕೆ ಮತ್ತು ಪರೀಕ್ಷಿಸುವುದಕ್ಕೆ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಸಂಬಂಧಿಸಿದ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೂಲಕ ಸಿವಿಲ್ ನ್ಯಾಯಾಲಯಕ್ಕೆ ಪ್ರದತ್ತವಾದಂತಹ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂತಹ ಪ್ರತಿಯೊಂದು ವಿಚಾರಣೆಯನ್ನು ಭಾರತೀಯ ದಂಡ ಸಂಹಿತೆಯ 193 ಮತ್ತು 224ನೇ ಪ್ರಕರಣಗಳ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.

**68. ನೋಟೀಸುಗಳನ್ನು ಜಾರಿ ಮಾಡುವುದು.**- ಈ ಅಧಿನಿಯಮದ ಮೇರೆಗಿನ ಯಾವುದೇ ನೋಟೀಸನ್ನು, ಅದರಲ್ಲಿ ನಮೂದಿಸಿರುವ ಅಧಿಕಾರಿಯ ಸಹಿ ಇರುವ ಒಂದು ಪ್ರತಿಯನ್ನು ತಲುಪಿಸುವ ಅಥವಾ ಕೊಡುವ ಮೂಲಕ ಜಾರಿಮಾಡತಕ್ಕದ್ದು. ಕಾರ್ಯಸಾಧ್ಯವಾಗಬಹುದಾದರೆ, ಅದರಲ್ಲಿ ಹೆಸರಿಸಿರುವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಬಹುದು.

ಅಂತಹ ವ್ಯಕ್ತಿಯನ್ನು ಕಂಡು ಹಿಡಿಯಲಾಗದಿದ್ದಾಗ, ನೋಟೀಸನ್ನು ಆತನ ಜೊತೆಗೆ ವಾಸಿಸುತ್ತಿರುವ ಅವನ ಕುಟುಂಬದ ಯಾವುದೇ ವಯಸ್ಕ ಪುರುಷ ಸದಸ್ಯನಿಗೆ ಜಾರಿ ಮಾಡಬಹುದು ಮತ್ತು ಅಂತಹ ವಯಸ್ಕ ಪುರುಷ ಸದಸ್ಯನು ಕಂಡು ಬರದಿದ್ದರೆ, ಅಂತಹ ನೋಟೀಸಿನ ಒಂದು ಪ್ರತಿಯನ್ನು ಅಂತಹ ವ್ಯಕ್ತಿಗೆ ಅವನ ಸಾಮಾನ್ಯ ವಾಸಸ್ಥಳಕ್ಕೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸುವ ಮೂಲಕ ಜಾರಿ ಮಾಡಬಹುದು.

**69. ಕೆಲ ವ್ಯವಹರಣೆಗಳು, ಇತ್ಯಾದಿಗಳ ಪ್ರತಿಷೇಧ.-** (1) ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾರೇ ಅಧಿಕಾರಿ ಅಥವಾ ರಾಜ್ಯ ಸರ್ಕಾರಿ ನೌಕರನ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರೆ ವ್ಯವಹರಣೆಗಳನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ವಿಧಿಸಲಾದ ಕರ್ತವ್ಯಗಳ ನಿರ್ವಹಣೆಯ ಅಥವಾ ಪ್ರಕಾರ್ಯಗಳ ನಿರ್ವಹಣೆಯ ಕ್ರಮದಲ್ಲಿ ಆ ಕೃತ್ಯವನ್ನು ಸದ್ಭಾವನೆಯಿಂದ ಮಾಡಲಾಗಿದ್ದರೆ ಯಾವುದೇ ಅಂತಹ ಕೃತ್ಯದ ಸಂಬಂಧದಲ್ಲಿ ಯಾವ ಅಧಿಕಾರಿ ಅಥವಾ ರಾಜ್ಯ ಸರ್ಕಾರದ ನೌಕರನು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ  ಹೊಣೆಗಾರನಾಗತಕ್ಕದ್ದಲ್ಲ.

(3) ಯಾವ ಕಾರ್ಯವನ್ನು ಮಾಡಿದುದರ ಸಂಬಂಧದಲ್ಲಿ ಫಿರ್ಯಾದು ನೀಡಲಾಗಿದೆಯೋ ಅಂತಹ ಕಾರ್ಯ ಮಾಡಿದ ದಿನಾಂಕದ ಆರು ತಿಂಗಳೊಳಗಾಗಿ ದಾವೆಯನ್ನು ಹೂಡಿದ್ದ ಹೊರತು, ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

(4) ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ನೌಕರನ ವಿರುದ್ಧ (1)ನೇ ಉಪಪ್ರಕರಣದ ಮೇರೆಗೆ ಉದ್ದೇಶಿತ ದಾವೆ ಹೂಡಿದ ಸಂದರ್ಭದಲ್ಲಿ, ದಾವೆ ಹೂಡಲು ಉದ್ದೇಶಿಸುವ ವ್ಯಕ್ತಿಯು, ಅಧಿಕಾರಿ ಅಥವಾ ಸಂದರ್ಭಾನುಸಾರ ನೌಕರರಿಗೆ ವ್ಯಾಜ್ಯ ಕಾರಣದ ಸಾಕಷ್ಟು ವಿವರಗಳೊಂದಿಗೆ ಉದ್ದೇಶಿತ ದಾವೆಯ ಬಗ್ಗೆ ಕನಿಷ್ಠ ಒಂದು ತಿಂಗಳ ನೋಟೀಸನ್ನು ಕೊಡಲು ಬದ್ಧನಾಗಿರತಕ್ಕದ್ದು, ತಪ್ಪಿದ್ದಲ್ಲಿ ಅಂತಹ ದಾವೆಯನ್ನು ವಜಾ ಮಾಡತಕ್ಕದ್ದು.

(5) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮವು ಅನ್ವಯವಾಗುವ ಯಾವುದೇ ವಿಷಯದ ಸಂಬಂಧದಲ್ಲಿ ಹೂಡಲಾದ ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**70. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ಸಂಭವಿಸಿದ ಸಮಯದಲ್ಲಿ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಅಪರಾಧದ ತಪ್ಪಿತಸ್ಥನೆಂದು ಪರಿಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಅಂತಹ ವ್ಯಕ್ತಿಯು ಆ  ಅಪರಾಧವು ತನಗೆ ತಿಳಿಯದ ಹಾಗೆ ನಡೆಯಿತೆಂದು ಅಥವಾ ಅಂತಹ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅಂತಹ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಹೇಳಿರುವುದು ಯಾವುದೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರೆ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯಕ್ಕೆ ಆರೋಪಿಸಬಹುದಾಗಿರುವಲ್ಲಿ, ಅಂತಹ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮ ನಿಕಾಯ ಮತ್ತು ಅದರಲ್ಲಿ ಫರ್ಮ್ ಅಥವಾ ವ್ಯಕ್ತಿಗಳ ಇತರೆ ಸಂಘವು ಒಳಗೊಳ್ಳತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ, ವ್ಯವಹಾರ ಸಂಸ್ಥೆಯ ಸಂಬಂಧದಲ್ಲಿ ಅದರ ಪಾಲುದಾರ.

**71. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಪೂರ್ವಪ್ರಕಟಣೆಯ ನಂತರ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತ ಮಾಡುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ಅಂತಹ

ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂತಹ ನಿಯಮಗಳು ಎಲ್ಲ ನೀರಾವರಿ ಕಾಮಗಾರಿಗಳಿಗೆ ಸಾಮಾನ್ಯವಾಗಿರಬಹುದು ಅಥವಾ ಒಂದು ಅಥವಾ ಹೆಚ್ಚು ನೀರಾವರಿ ಕಾಮಗಾರಿಗಳಿಗೆ ವಿಶೇಷವಾಗಿರಬಹುದು.

(2) ಹಿಂದೆ ಹೇಳಲಾದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳನ್ನು ಈ ಮುಂದಿನ ವಿಷಯಗಳ ಸಂಬಂಧದಲ್ಲಿ ರಚಿಸಬಹುದು.

(ಎ) ಈ ಅಧಿನಿಯಮದ ಉಪಬಂಧದ ಮೇರೆಗೆ ಯಾವುದೇ ವಿಷಯದಲ್ಲಿ ಕ್ರಮಕೈಗೊಳ್ಳಲು ಅಗತ್ಯಪಡಿಸುವ ಅಥವಾ ಅಧಿಕಾರ ನೀಡುವ ಯಾವುದೇ ಅಧಿಕಾರಿಯ ವ್ಯವಹರಣೆಗಳು;

(ಬಿ) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಮತ್ತು ವಿಧಿಸಬೇಕಾದ ಮೊತ್ತ;

(ಸಿ) ಯಾವುದೇ ನೀರಾವರಿ ಕಾಮಗಾರಿಯಿಂದ ಸರಬರಾಜು ಮಾಡಿದ ನೀರಿನ ಮಿತ ಬಳಕೆ;

(ಡಿ) 10ನೇ ಪ್ರಕರಣದ ಮೇರೆಗೆ, ಕಾಲುವೆಗಳನ್ನು ದಾಟುವ ಸಾಧನಗಳು ಸಾಕಷ್ಟಿಲ್ಲ ಎಂಬ ಬಗೆಗಿನ ದೂರುಗಳನ್ನು ತನಿಖೆ ಮಾಡತಕ್ಕ ರೀತಿ ಮತ್ತು ತನಿಖೆ ಮಾಡುವ ಅಧಿಕಾರಿ;

(ಇ) ನೀರಾವರಿ ಕಾಮಗಾರಿಗಳ ನಾಲೆಗಳನ್ನು, ಕಾಲುವೆಗಳನ್ನು ಮತ್ತು ಉಪ ಕಾಲುವೆಗಳನ್ನು ತೆರೆಯುವ ಮತ್ತು ಮುಚ್ಚುವ ಅವಧಿಯನ್ನು ವಿನಿಯಮಿಸುವುದು.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲ ನಿಯಮಗಳು (4)ನೇ ಉಪ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಮಾರ್ಪಾಟುಗಳಿಗೆ ಒಳಪಟ್ಟು, ಈ ಅಧಿನಿಯಮದಲ್ಲಿ ರಚಿಸಲಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಲ್ಲಿ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟಂಥ ಅಧಿವೇಶನವು ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮಗಳಲ್ಲಿ ಯಾವುದಾದರೂ ಮಾರ್ಪಾಡು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮಗಳನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಅಂತಹ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಈ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗತಕ್ಕದ್ದಲ್ಲ.

**72. ನಿರಸನ ಮತ್ತು ಉಳಿಸುವಿಕೆಗಳು.**- (1) ಮೈಸೂರು ನೀರಾವರಿ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ 1), ಹೈದರಾಬಾದ್ ನೀರಾವರಿ ಅಧಿನಿಯಮ, 1357 ಫ (1357 ಫ ಹೈದರಾಬಾದ್ ಅಧಿನಿಯಮ 24), ಮುಂಬಯಿ ನೀರಾವರಿ ಅಧಿನಿಯಮ, 1879 (1879ರ ಮುಂಬಯಿ ಅಧಿನಿಯಮ 7), ಮದ್ರಾಸು ನೀರಾವರಿ ಕೆರೆಗಳ (ಸುಧಾರಣೆ) ಅಧಿನಿಯಮ, 1949 (1949ರ ಮದ್ರಾಸು ಅಧಿನಿಯಮ XIX) ಮತ್ತು ಮದ್ರಾಸು ನೀರಾವರಿ ಕಾಮಗಾರಿಗಳ (ದುರಸ್ತಿಗಳು, ಸುಧಾರಣೆ ಮತ್ತು ನಿರ್ಮಾಣ) ಅಧಿನಿಯಮ, 1943 (1943ರ ಮದ್ರಾಸು ಅಧಿನಿಯಮ XVIII)- ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ 3)ರ 6ನೇ ಪ್ರಕರಣದ ಉಪಬಂಧಗಳು ಸದರಿ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8ನೇ ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಿತಿಗಳನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿ ಮತ್ತು ಪುನಃ ಅಧಿನಿಯಮಿತಿಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಮೈಸೂರು ಕೆರೆ ಪಂಚಾಯತಿ ಅಧಿನಿಯಮ, 1911 (1911ರ ಮೈಸೂರು ಅಧಿನಿಯಮ 1)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ 3)ರ 6ನೇ ಪ್ರಕರಣದ ಉಪಬಂಧಗಳು, ಸದರಿ ಅಧಿನಿಯಿತಿಯ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು:

ಮತ್ತೂ ಪರಂತು, ನಿರಸಿತ ಅಧಿನಿಯಮಿತಿಯ ಮೇರೆಗೆ ರಚಿತವಾಗಿದ್ದ ಕೆರೆ ಪಂಚಾಯತಿಯ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು, [1][ಕರ್ನಾಟಕ][1] ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ, 1959ರ

ಮೇರೆಗೆ ರಚಿತವಾದ ಮತ್ತು ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂತಹ ಕೆರೆ ಪಂಚಾಯಿತಿಯ ನಿಯಂತ್ರಣದಲ್ಲಿ ಇರುವ ಕೆರೆ ನಿಧಿಯ ಲೆಕ್ಕದಲ್ಲಿರುವ ಹಣವು ಸದರಿ ಗ್ರಾಮ ಪಂಚಾಯಿತಿಗೆ ವರ್ಗಾವಣೆಗೊಂಡಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31.12.1965 [ಸಂ. ಪಿಡಬ್ಲ್ಯೂಡಿ 81ಎಲ್‌ಬಿಡಬ್ಲ್ಯೂ 65]**

**ಎಸ್.ಓ. 3747.-** ಮೈಸೂರು ನೀರಾವರಿ ಅಧಿನಿಯಮ, 1965 (1965ರ ಮೈಸೂರು ಅಧಿನಿಯಮ 16)ರ 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1966ರ ಜನವರಿ ಮೊದಲನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎಂ. ಚನ್ನಪ್ಪ,**
ಉಪಕಾರ್ಯದರ್ಶಿ.

(ಕರ್ನಾಟಕ ರಾಜಪತ್ರದ ಭಾಗ-IV ಉಪಭಾಗ 2ಸಿ (ii) ದಿನಾಂಕ 06.01.1966 ರಲ್ಲಿ 75ನೇ ಪುಟದಲ್ಲಿ ಪ್ರಕಟಿಸಲಾಗಿದೆ.)

* * * *

## ಕರ್ನಾಟಕ ನೀರಾವರಿ ನಿಯಮಗಳು, 1965

### ಪ್ರಕರಣಗಳ ಅನುಕ್ರಮಣಿಕೆ

**ನಿಯಮಗಳು**


1. ಶೀರ್ಷಿಕೆ
2. ಪರಿಭಾಷೆಗಳು
3. ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ
4. ನಿಯಂತ್ರಿತ ಪ್ರದೇಶಗಳಲ್ಲಿ ಬಾವಿಗಳ ನಿರ್ಮಾಣ
5. ಕಟ್ಟಡ, ಮುಂತಾದವುಗಳ ಅನುಭವದಾರರಿಗೆ ನೋಟೀಸು ನೀಡುವುದು, ಇತ್ಯಾದಿ
6. ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾದ ವ್ಯಕ್ತಿಯು ಸಂದಾಯ ಮಾಡಲು ತಪ್ಪಿದಾಗ ಕಾರ್ಯವಿಧಾನ
7. 15ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆ
8. ಹೊಲ-ಕಾಲುವೆಗಳಿಗಾಗಿ ಆರ್ಜಿಸಲಾದ ಭೂಮಿಗಳ ಎಲ್ಲೆ ಗುರುತುಗಳನ್ನು ಹಾಕುವುದು
9. ಎಲ್ಲೆ ಗುರುತುಗಳ ನಿರ್ವಹಣೆ
10. [ಬಿಟ್ಟುಬಿಡಲಾಗಿದೆ]
11. [ಬಿಟ್ಟುಬಿಡಲಾಗಿದೆ]
12. ಹೊಲ-ಕಾಲುವೆಗಳಿಂದ ಯಾವ ನಿಬಂಧನೆಗಳ ಮೇರೆಗೆ ನೀರನ್ನು ಬಳಸಿಕೊಳ್ಳಬಹುದೋ ಆ ನಿಬಂಧನೆಗಳು
13. [ಬಿಟ್ಟುಬಿಡಲಾಗಿದೆ]
14. 24ನೇ ಪ್ರಕರಣದ ಅಡಿಯಲ್ಲಿ ನೋಟೀಸು
15. [ಬಿಟ್ಟುಬಿಡಲಾಗಿದೆ]
16. 27ನೇ ಪ್ರಕರಣದ ಅಡಿಯಲ್ಲಿ ಸಮಾಲೋಚನಾ ಸಮಿತಿಗಳ ರಚನೆ
17. ನೀರಾವರಿ ಕಾಮಗಾರಿಗಳಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಅರ್ಜಿ

17ಎ. 28ನೇ ಪ್ರಕರಣದ (5)ನೇ ಉಪಪ್ರಕರಣದ ಉದ್ದೇಶಕ್ಕಾಗಿ ನಿಯಮಿಸಲಾದ ಅಧಿಕಾರಿ

17ಬಿ. ನೈಸರ್ಗಿಕ ತೊರೆಯಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಅರ್ಜಿ

18. 29ನೇ ಪ್ರಕರಣದ ಉದ್ದೇಶಗಳಿಗಾಗಿ ಸಕ್ಷಮ ಪ್ರಾಧಿಕಾರ
19. ಸಾಗುವಳಿಯ ವಿನಿಯಮನ

19ಎ. 32ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ಪ್ರಕಟಣೆಯ ವಿಧಾನ

20. ತುರ್ತು ಕಾಮಗಾರಿಗಳು, ದುರಸ್ತಿ, ಇತ್ಯಾದಿಗಳಿಗಾಗಿ ಅಗತ್ಯಬೀಳಬಹುದಾದಂಥ ದೃಢಕಾಯದ ವ್ಯಕ್ತಿಗಳ ಪಟ್ಟಿಯನ್ನು ಸಿದ್ಧಪಡಿಸುವುದು
21. 43ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ

21ಎ. 4ಎ ಪ್ರಕರಣದ ಅಡಿಯಲ್ಲಿ ವಿಧಿಸತಕ್ಕ ನಿರ್ವಹಣಾ ಉಪಕರದ ನಿರ್ಧರಣೆ

22. ತುಂಗಭದ್ರಾ ಮಂಡಲಿ, ಮುಂತಾದವುಗಳಿಗೆ ನಿರ್ವಹಣಾ ಉಪಕರವನ್ನು ಸಂದಾಯ ಮಾಡುವ ವಿಧಾನ
23. ಕಾಲುವೆಗಳಲ್ಲಿ ಅಥವಾ ಕಾಲುವೆಗಳ ಮೂಲಕ ವ್ಯಕ್ತಿಗಳು, ಪ್ರಾಣಿಗಳು ಅಥವಾ ವಾಹನಗಳು ದಾಟಿಹೋಗುವುದು

23ಎ. 64ನೇ ಪ್ರಕರಣದ ಅಡಿಯಲ್ಲಿ ವಸೂಲು ಮಾಡತಕ್ಕ ವೆಚ್ಚಗಳು

23ಬಿ. ಪ್ರಮಾಣಿತ ಪ್ರತಿಗಳನ್ನು ನೀಡುವುದು

24. ನಿರಸನ ಮತ್ತು ಉಳಿಸುವಿಕೆಗಳು

**ನಮೂನೆಗಳು 1 ರಿಂದ 16**

**ಅಧಿಸೂಚನೆಗಳು.**

## ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965**

**ಜಿ.ಎಸ್.ಆರ್.785.–** ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 71ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ. ಇದರ ಕರಡನ್ನು, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ. ಪಿಡಬ್ಲ್ಯೂಡಿ 63 ಎಲ್ ಬಿಡಬ್ಲ್ಯೂ 64, ದಿನಾಂಕ 18ನೇ ಡಿಸೆಂಬರ್, 1965ರಲ್ಲಿ, ಜಿ.ಎಸ್.ಆರ್.773 ಆಗಿ, 20ನೇ ಡಿಸೆಂಬರ್, 1965ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ಭಾಗ IV-2ಸಿ (i) ರಲ್ಲಿ ಈ ಹಿಂದೆ ಪ್ರಕಟಿಸಲಾಗಿದೆ.

## ಕರ್ನಾಟಕ ನೀರಾವರಿ ನಿಯಮಗಳು, 1965

**1. ಶೀರ್ಷಿಕೆ.–** ಈ ನಿಯಮಗಳನ್ನು [1][ಕರ್ನಾಟಕ][1] ನೀರಾವರಿ ನಿಯಮಗಳು, 1965, ಎಂದು ಕರೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ [1][ಕರ್ನಾಟಕ][1] ನೀರಾವರಿ ಅಧಿನಿಯಮ, 1965 (1965ರ ಕರ್ನಾಟಕ ಅಧಿನಿಯಮ 16);

(ಬಿ) "ಕಾರ್ಯನಿರ್ವಾಹಕ ಇಂಜಿನಿಯರ್" ಎಂದರೆ ಲೋಕೋಪಯೋಗಿ ಕಾರ್ಯನಿರ್ವಾಹಕ ಇಂಜಿನಿಯರ್;

(ಸಿ) "ನಮೂನೆ" ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ ;

(ಡಿ) "ಬೃಹತ್ ನೀರಾವರಿ ಕಾಮಗಾರಿ" ಎಂದರೆ ಐದು ಕೋಟಿಗಿಂತಲೂ ಹೆಚ್ಚು ವೆಚ್ಚದ ನೀರಾವರಿ ಕಾಮಗಾರಿ;

(ಇ) "ಹೊರ ಗಂಡಿ" ಎಂದರೆ ಒಂದು ಕೆರೆ, ಕಾಲುವೆ, ಶಾಖಾ ಕಾಲುವೆ, ಕಾಲುವೆ ಅಥವಾ ನೀರಿನ ಹರಿವು ಹೊಲ–ಕಾಲುವೆಗೆ ನೀರು ಹರಿದುಬರುವ ಕಂಡಿ ;

(ಎಫ್) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ;

(ಜಿ) "ಶಾಖಾಧಿಕಾರಿ" ಎಂದರೆ ಸಹಾಯಕ ಇಂಜಿನಿಯರ್ ಅವರಿಗೆ ಅಧೀನನಾಗಿರುವ ಮತ್ತು ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಜೂನಿಯರ್ ಇಂಜಿನಿಯರ್ ಅಥವಾ ಸೂಪರ್‌ವೈಸರ್ ದರ್ಜೆಯ ಲೋಕೋಪಯೋಗಿ ಇಲಾಖೆಯ ಒಬ್ಬ ಅಧಿಕಾರಿ;

(ಎಚ್) "ಬಾವಿ" ಎಂದರೆ, ನೀರಿನ ಮೇಲ್ಮೈ ಹರಿವನ್ನು ಪಲ್ಲಟಗೊಳಿಸುವ ಮತ್ತು ಸಂಗ್ರಹಿಸುವ ಉದ್ದೇಶಕ್ಕಾಗಿ, ಅಂತರ್ಜಲ ಮೂಲದ ನೀರನ್ನು ಮೇಲೆತ್ತುವ ಉದ್ದೇಶಕ್ಕಾಗಿ ನಿರ್ಮಿಸಲಾದ ಒಂದು ರಚನೆ.

**3. ನೀರಾವರಿ ಕಾಮಗಾರಿಗಳ ನಿರ್ಮಾಣ, ನಿಯಂತ್ರಣ ಮತ್ತು ನಿರ್ವಹಣೆ.–** (1) ಒಂದು ಜಲಾಶಯ, ಕೆರೆ, ಅಣೆಕಟ್ಟು, ಭಾಂದಾರ, ಕೊಳ, ಚಿಲುಮೆ ಕೊಳ, ಕಾಲುವೆ, [1][XXX][1] ತಲಪರಿಗೆ, ನಾಲೆ ಅಥವಾ ಮೇಲು ಕಾಲುವೆ, ಇವುಗಳನ್ನು ನಿರ್ಮಿಸಲು, ನಿಯಂತ್ರಿಸಲು ಅಥವಾ ನಿರ್ವಹಿಸಲು ಇಚ್ಛಿಸುವ ಯಾರೇ ವ್ಯಕ್ತಿಯು, ಸಂಬಂಧಪಟ್ಟ ಪ್ರದೇಶದಲ್ಲಿನ ನೀರಾವರಿ ಕಾಮಗಾರಿಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಇಂಜಿನಿಯರ್ ಮುಖಾಂತರ ಮಂಜೂರಾತಿಗಾಗಿ ರಾಜ್ಯಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಜಿಎಸ್ಆರ್ 272, ದಿನಾಂಕ 7ನೇ ಸೆಪ್ಟೆಂಬರ್, 1971 ಮೂಲಕ ಬಿಟ್ಟುಬಿಡಲಾಗಿದೆ.

(2) (1)ನೇ ಉಪನಿಯಮದ ಅಡಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರು ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು, ಅದನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ತನ್ನ ಶಿಫಾರಸುಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) (2)ನೇ ಉಪನಿಯಮದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ರಾಜ್ಯ ಸರ್ಕಾರವು, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಆ ಬಗ್ಗೆ ತಾನು ಯುಕ್ತವೆಂದು ಭಾವಿಸುವ ಆದೇಶಗಳನ್ನು ಹೊರಡಿಸಬಹುದು.

**4. ನಿಯಂತ್ರಿತ ಪ್ರದೇಶಗಳಲ್ಲಿ ಬಾವಿಗಳ ನಿರ್ಮಾಣ.–** (1) 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಪ್ರದೇಶದಲ್ಲಿ ಬಾವಿಯನ್ನು ನಿರ್ಮಿಸಲು ಇಚ್ಛಿಸುವ ಯಾರೇ ವ್ಯಕ್ತಿಯು, ಸಂಬಂಧಪಟ್ಟ ಪ್ರದೇಶದಲ್ಲಿ ನೀರಾವರಿ ಕಾಮಗಾರಿಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಇಂಜಿನಿಯರ್ ಮುಖಾಂತರ ಮಂಜೂರಾತಿಗಾಗಿ ರಾಜ್ಯಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಂಥ ಅರ್ಜಿಯು ಬಾವಿಯನ್ನು ನಿರ್ಮಿಸಬೇಕಾದ ಸ್ಥಳ, ಉದ್ದೇಶ ಮತ್ತು ಅದರ ಸಾಮಾನ್ಯ ಉದ್ದಳತೆ ಇವುಗಳ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) (1)ನೇ ಉಪನಿಯಮದ ಅಡಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು, ಅದನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ತಮ್ಮ ಶಿಫಾರಸುಗಳೊಡನೆ ರಾಜ್ಯ ಸರ್ಕಾರಕ್ಕೆ ಅಥವಾ 4ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಅದು ಅಧಿಕಾರ ನೀಡಿದ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(3) (2)ನೇ ಉಪನಿಯಮದ ಅಡಿಯಲ್ಲಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ ರಾಜ್ಯ ಸರ್ಕಾರ ಅಥವಾ ಅಧಿಕಾರ ಪಡೆದ ಪ್ರಾಧಿಕಾರಿಯು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಆ ಬಗ್ಗೆ ತಾನು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸತಕ್ಕದ್ದು.

**5. ಕಟ್ಟಡ, ಮುಂತಾದವುಗಳ ಅನುಭವದಾರನಿಗೆ ನೋಟೀಸು ನೀಡುವುದು, ಇತ್ಯಾದಿ.–** 9ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ವಾಸದ ಮನೆಗೆ ಹೊಂದಿಕೊಂಡಂತಿರುವ ಆವೃತವಾದ ಅಂಗಳ ಅಥವಾ ತೋಟದ ಅನುಭವದಾರನಿಗೆ ನಮೂನೆ 1 ರಲ್ಲಿ ನೋಟೀಸನ್ನು ಕೊಡತಕ್ಕದ್ದು.

**6. ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾದ ವ್ಯಕ್ತಿಯು ಸಂದಾಯ ಮಾಡಲು ತಪ್ಪಿದಾಗ ಕಾರ್ಯವಿಧಾನ.–** 13ನೇ ಪ್ರಕರಣದ ಅಡಿಯಲ್ಲಿ ಆದೇಶವನ್ನು ನೀಡಲಾದ ವ್ಯಕ್ತಿಯು, ಸದರಿ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂಥ ವೆಚ್ಚಗಳನ್ನು ಸಂದಾಯ ಮಾಡದಿದ್ದಾಗ, ನೀರಾವರಿ ಅಧಿಕಾರಿಯು, ಅದನ್ನು ಭೂ ಕಂದಾಯ ಬಾಕಿಯೆಂಬಂತೆ ವಸೂಲಿ ಮಾಡಬೇಕೆಂದು ಜಿಲ್ಲಾಧಿಕಾರಿಯವರಿಗೆ ತಿಳಿಸತಕ್ಕದ್ದು.

**7. 15ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆ.–** 15ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗಿನ ಅಧಿಸೂಚನೆಯು ನಮೂನೆ– 2 ರಲ್ಲಿರತಕ್ಕದ್ದು ಮತ್ತು 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯು ನಮೂನೆ 3 ರಲ್ಲಿರತಕ್ಕದ್ದು.

**8. ಹೊಲ–ಕಾಲುವೆಗಳಿಗಾಗಿ ಆರ್ಜಿಸಲಾದ ಭೂಮಿಗಳ ಎಲ್ಲೆ ಗುರುತುಗಳನ್ನು ಹಾಕುವುದು.–** 17ನೇ ಪ್ರಕರಣದ ಮೇರೆಗೆ ಹಾಕಬೇಕಾದ ಎಲ್ಲೆ ಗುರುತುಗಳನ್ನು 15.24 ಸೆ.ಮಿ x 15.24 ಸೆ.ಮಿ x 76.2 ಸೆ.ಮಿ (6' x 6'x 2 1/2) ದಪ್ಪದ ಕಲ್ಲಿನಲ್ಲಿ ಅಥವಾ ಕಾಂಕ್ರೀಟ್ ಬ್ಲಾಕಿನಲ್ಲಿ ಮಾಡಿರತಕ್ಕದ್ದು ಮತ್ತು ಹೊಲ ಕಾಲುವೆಯ ನಿರ್ಮಾಣಕ್ಕಾಗಿ ಇರುವ ಜಮೀನು, ಯಾವ ಜಮೀನಿನ ಸರ್ವೆ ನಂಬರ್ ಅಥವಾ ಸರ್ವೆ ನಂಬರ್‌ನ ಉಪ ಭಾಗಗಳ ಮೇಲೆ ಹಾಯ್ದು ಹೋಗುವುದೋ ಆ ಪ್ರತಿಯೊಂದು ಮೂಲೆಯಲ್ಲಿ ಮತ್ತು ನೀರಾವರಿ ಅಧಿಕಾರಿಯು ಅಗತ್ಯವೆಂದು ಭಾವಿಸಬಹುದಾದಂಥ ಇತರೆ ಸ್ಥಳಗಳಲ್ಲಿ ಸದರಿ ಗುರುತುಗಳನ್ನು ಮಾಡತಕ್ಕದ್ದು.

**9. ಎಲ್ಲೆ ಗುರುತುಗಳ ನಿರ್ವಹಣೆ.–** (1) ಎಲ್ಲೆ ಗುರುತುಗಳನ್ನು ಹಾಕಲಾದ ಸರ್ವೆ ನಂಬರ್ ಅಥವಾ ಉಪ ವಿಭಾಗದ ಜಮೀನಿನ ಹಿಡುವಳಿದಾರನು ಎಲ್ಲೆ ಗುರುತನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರಲು ಬದ್ಧನಾಗಿರತಕ್ಕದ್ದು.

(2) (1)ನೇ ಉಪನಿಯಮದ ಉಲ್ಲಂಘನೆಯು, 55ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವಾಗಿರತಕ್ಕದ್ದು.

[1][**10. ಹೊಲ–ಕಾಲುವೆಗಳ ನಿರ್ಮಾಣದ ಕಾರ್ಯ ವಿಧಾನ.–** XXX][1]

[1][**11. ಹೊಲ–ಕಾಲುವೆಗಳ ನಿರ್ಮಾಣವನ್ನು ರಾಜ್ಯಸರ್ಕಾರವು ಕೈಗೊಳ್ಳುವುದು ಎಂಬ ಬಗ್ಗೆ ನೀರಾವರಿ ಅಧಿಕಾರಿಯ ಘೋಷಣೆ.–** [1][XXX][1]

1. ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 272, ದಿನಾಂಕ 7ನೇ ಸೆಪ್ಟೆಂಬರ್, 1971ರ ಮೂಲಕ ಬಿಟ್ಟುಬಿಡಲಾಗಿದೆ.

**12. ಹೊಲ–ಕಾಲುವೆಗಳಿಂದ ಯಾವ ನಿಬಂದನೆಗಳ ಮೇರೆಗೆ ನೀರನ್ನು ಬಳಸಿಕೊಳ್ಳಬಹುದೋ ಆ ನಿಬಂಧನೆಗಳು.–** ಹೊಲ–ಕಾಲುವೆಯ ನೀರನ್ನು ಬಳಸಿಕೊಳ್ಳಲು ಹಕ್ಕುದಾರನಾದ ಪ್ರತಿಯೊಬ್ಬ ಹೊಲ–ಕಾಲುವೆಯ ಬಳಕೆದಾರನು ಅನುಸರಿಸಬೇಕಾದ ನಿಬಂಧನೆಗಳು ಈ ಮುಂದಿನಂತಿರತಕ್ಕದ್ದು,–

(i) ಸರ್ವೆ ನಂಬರಿನಲ್ಲಿರುವ ಅಥವಾ ಸರ್ವೆ ನಂಬರಿನ ಉಪ-ವಿಭಾಗದಲ್ಲಿನ ಜಮೀನಿನ ಯಾವುದೇ ಭಾಗದ ನೀರಾವರಿಗಾಗಿ ಅಗತ್ಯವಾದ ನೀರನ್ನು ಹೊಲ-ಕಾಲುವೆಯಿಂದ ನೇರವಾಗಿ ಒದಗಿಸುವುದು ಸಾಧ್ಯವಾಗುವಂತೆ ನೀರು ಕಾಲುವೆಯ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು;

(ii) ನೀರಾವರಿ ಅಧಿಕಾರಿಯು, ನಿಗದಿ ಮಾಡಿದ ಸ್ಥಳದ ಹೊರತಾಗಿ ಬೇರೆಡೆಯಿಂದ ಹೊಲ-ಕಾಲುವೆಯ ನೀರನ್ನು ತೆಗೆದುಕೊಳ್ಳತಕ್ಕದ್ದಲ್ಲ;

(iii) ಹೊಲ-ಕಾಲುವೆಯಿಂದ ಬೇರೆ ಬೇರೆ ಜಮೀನುಗಳಿಗೆ ಯಾವ ಕ್ರಮದಲ್ಲಿ ನೀರನ್ನು ಒದಗಿಸಬೇಕೆಂಬುದನ್ನು ನೀರಾವರಿ ಅಧಿಕಾರಿಯು ನಿರ್ಧರಿಸತಕ್ಕದ್ದು.

[1][**13. ಇತರೆ ವ್ಯಕ್ತಿಗಳು ಹೊಲ-ಕಾಲುವೆಯನ್ನು ಬಳಸಿಕೊಳ್ಳಲು ವ್ಯವಸ್ಥೆ.-**  [1][XXX][1]

1. ಅಧಿಸೂಚನೆ ಸಂಖ್ಯೆ ಜಿಎಸ್ಆರ್ 272, ದಿನಾಂಕ 7ನೇ ಸೆಪ್ಟೆಂಬರ್, 1971ರ ಮೂಲಕ ಬಿಟ್ಟುಬಿಡಲಾಗಿದೆ.

**14. 24ನೇ ಪ್ರಕರಣದ ಅಡಿಯಲ್ಲಿ ನೋಟೀಸು.-** 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೀಡಬೇಕಾದ ನೋಟೀಸು, ನಮೂನೆ 13 ರಲ್ಲಿರತಕ್ಕದ್ದು.

[1][**15. 25ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ.-**  [1][XXX][1]

1. ಅಧಿಸೂಚನೆ ಸಂಖ್ಯೆ ಜಿಎಸ್ಆರ್ 272, ದಿನಾಂಕ 7ನೇ ಸೆಪ್ಟೆಂಬರ್, 1971ರ ಮೂಲಕ ಬಿಟ್ಟುಬಿಡಲಾಗಿದೆ.

**16. 27ನೇ ಪ್ರಕರಣದ ಅಡಿಯಲ್ಲಿ ಸಮಾಲೋಚನಾ ಸಮಿತಿಗಳ ರಚನೆ.-** (1) ಬೃಹತ್ ನೀರಾವರಿಗೆ ಸಂಬಂಧಪಟ್ಟ ಸಮಾಲೋಚನಾ ಸಮಿತಿಯಲ್ಲಿ ಏಳು ಅಧಿಕಾರಿ ಸದಸ್ಯರು ಮತ್ತು ಎಂಟು ಅಧಿಕಾರೇತರ ಸದಸ್ಯರು ಇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಸಮಿತಿಯ ಅಧ್ಯಕ್ಷನಾಗಿ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡತಕ್ಕದ್ದು.

(2) ಬೃಹತ್ ನೀರಾವರಿ ಕಾಮಗಾರಿಯ ಹೊರತುಪಡಿಸಿ, ಇತರೆ ನೀರಾವರಿ ಕಾಮಗಾರಿಗೆ ಸಂಬಂಧಪಟ್ಟ ಸಮಾಲೋಚನಾ ಸಮಿತಿಯಲ್ಲಿ ನಾಲ್ಕು ಅಧಿಕಾರೀ ಸದಸ್ಯರು ಮತ್ತು [1][ಏಳು ಜನ ಅಧಿಕಾರೇತರ ಸದಸ್ಯರು][1] ಇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿರ್ದೇಶಿಸಿದ ಒಬ್ಬ ಸದಸ್ಯನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 85 ಎಲ್‌ಬಿಡಬ್ಲ್ಯೂ 73, ದಿನಾಂಕ 18ನೇ ಮೇ, 1974ರ ಮೂಲಕ ಪ್ರತಿಯೋಜಿಸಲಾಗಿದೆ.

**17. ನೀರಾವರಿ ಕಾಮಗಾರಿಗಳಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಅರ್ಜಿ.-** 28ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೀರಾವರಿ ಕಾಮಗಾರಿಯಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಸಲ್ಲಿಸುವ ಅರ್ಜಿಯು, ನಮೂನೆ 14 ರಲ್ಲಿರತಕ್ಕದ್ದು.

[1][**17ಎ. 28ನೇ ಪ್ರಕರಣದ (5)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ನಿಯಮಿಸಲಾದ ಅಧಿಕಾರಿ.-** 28ನೇ ಪ್ರಕರಣದ (5) ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ನಿಯಮಿಸಲಾದ ಅಧಿಕಾರಿಯು, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿರತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 6 ಎಲ್‌ಬಿಡಬ್ಲ್ಯೂ 66 (ಭಾಗ – II) ಜಿಎಸ್ಆರ್ 32, ದಿನಾಂಕ 19ನೇ ಫೆಬ್ರವರಿ, 1968ರ ಮೂಲಕ ಸೇರಿಸಲಾಗಿದೆ.

[1][**17ಬಿ. ನೈಸರ್ಗಿಕ ತೊರೆಯಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಅರ್ಜಿ.-** ನೈಸರ್ಗಿಕ ತೊರೆಯಿಂದ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಸಲ್ಲಿಸುವ ಅರ್ಜಿಯು, ನಮೂನೆ 15 ರಲ್ಲಿರತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 41 ಎಲ್‌ಬಿಡಬ್ಲ್ಯೂ 70, ದಿನಾಂಕ 25ನೇ ಜನವರಿ, 1973ರ ಮೂಲಕ ಸೇರಿಸಲಾಗಿದೆ.

**18. 29ನೇ ಪ್ರಕರಣದ ಉದ್ದೇಶಗಳಿಗಾಗಿ ಸಕ್ಷಮ ಪ್ರಾಧಿಕಾರ.-** 29ನೇ ಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ ಕಾಮಗಾರಿಯ ಪ್ರಭಾರದಲ್ಲಿರುವ ಸೂಪರಿಂಟೆಂಡೆಂಟ್ ಇಂಜಿನಿಯರ್, ಬೃಹತ್ ನೀರಾವರಿ ಕಾಮಗಾರಿಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಬೃಹತ್ ನೀರಾವರಿ ಕಾಮಗಾರಿಯನ್ನು ಹೊರತುಪಡಿಸಿ ಇತರೆ ಕಾಮಗಾರಿಗೆ

ಸಂಬಂಧಪಟ್ಟಂತೆ ಕಾಮಗಾರಿಯ ಪ್ರಭಾರದಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

**19. ಸಾಗುವಳಿಯ ವಿನಿಯಮನ.-** (1) 31ನೇ ಪ್ರಕರಣದ (1) ನೇ ಉಪ ಪ್ರಕರಣದ ಅಡಿಯಲ್ಲಿಯ ಆದೇಶವನ್ನು ನೀರಾವರಿ ಅಧಿಕಾರಿಯ ಕಛೇರಿಯ ಸೂಚನಾ ಫಲಕದ ಮೇಲೆ ಅಂಥ ಆದೇಶದ ಪ್ರತಿಯನ್ನು ಅಂಟಿಸುವ ಮತ್ತು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯ ಸೂಚನಾ ಫಲಕದ ಮೇಲೆ ಅಂಥ ಆದೇಶದ ಪ್ರತಿಯನ್ನು ಅಂಟಿಸುವಂತೆ ಮಾಡುವ ಮತ್ತು ಸಂಬಂಧಪಟ್ಟ ಗ್ರಾಮಗಳ ಚಾವಡಿಯಲ್ಲಿ ಅದನ್ನು ಅಂಟಿಸುವ ಮೂಲಕ ಪ್ರಕಟಿಸತಕ್ಕದ್ದು.

(2) ನೀರಾವರಿ ಅಧಿಕಾರಿಯು, ಯಾವುದೇ ನೀರಾವರಿಯಾಗುವ ಯಾವುದೇ ಪ್ರದೇಶದಲ್ಲಿ, 31ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೆಳೆ ಅಥವಾ ಬೆಳೆಗಳ ಸಾಗುವಳಿಗಾಗಿ ಬೀಜ ಬಿತ್ತನೆ ಕಾರ್ಯಗಳು ಪ್ರಾರಂಭವಾಗುವುದಕ್ಕೆ ಮುಂಚೆ, ಎರಡು ತಿಂಗಳೊಳಗೆ, ಯಾವುದೇ ವರ್ಷದಲ್ಲಿ ಅಂಥ ಬೆಳೆ ಮತ್ತು ಬೆಳೆಗಳ ಸಾಗುವಳಿಗಾಗಿ ಪ್ರದೇಶವನ್ನು ಅಥವಾ ಜಮೀನುಗಳನ್ನು ನಿರ್ಧರಿಸತಕ್ಕದ್ದು.

[1][**19ಎ. 32ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ಪ್ರಕಟಣೆಯ ವಿಧಾನ.-** (1) [2][32ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯು ನಮೂನೆ 16 ರಲ್ಲಿರತಕ್ಕದ್ದು][2] ಮತ್ತು ಅದನ್ನು ನೀರಾವರಿ ಅಧಿಕಾರಿಯ ಕಛೇರಿಯ ಸೂಚನಾ ಫಲಕದ ಮೇಲೆ ಅಂಥ ಅಧಿಸೂಚನೆಯ ಪ್ರತಿಯನ್ನು ಅಂಟಿಸುವ ಮತ್ತು ತಾಲೂಕಿನ ತಹಶೀಲ್ದಾರ್ ಕಛೇರಿಯ ಸೂಚನಾ ಫಲಕದ ಮೇಲೆ ಅಂಟಿಸುವಂತೆ ಮಾಡುವ ಮತ್ತು ಸಂಬಂಧಪಟ್ಟ ಗ್ರಾಮಗಳ ಚಾವಡಿಗಳಲ್ಲಿ ಅದನ್ನು ಅಂಟಿಸುವ ಮೂಲಕ ಪ್ರಕಟಿಸತಕ್ಕದ್ದು.

(2) ಸಾಗುವಳಿ ಕಾರ್ಯಗಳು, ಬೀಜ ಬಿತ್ತುವ ಮತ್ತು ಸಸಿ ನೆಡುವ ಕಾರ್ಯಗಳು ಪ್ರಾರಂಭವಾಗುವುದಕ್ಕೆ ಮೊದಲು ಎರಡು ತಿಂಗಳೊಳಗೆ (1)ನೇ ಉಪ ನಿಯಮದಲ್ಲಿ ಉಲ್ಲೇಖಿಸಲಾದ ಅಧಿಸೂಚನೆಯನ್ನು, ಅದರಲ್ಲಿ ನಿರ್ದಿಷ್ಟಪಡಿಸಿದ ಬೆಳೆಗಳ ವಿಧಗಳನ್ನು ಪ್ರಕಟಿಸತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 74, ಎಲ್‌ಬಿಡಬ್ಲ್ಯೂ 71, ದಿನಾಂಕ 28ನೇ ಮೇ, 1973 (ಜಿಎಸ್‌ಆರ್ 149)ರ ಮೂಲಕ ಸೇರಿಸಲಾಗಿದೆ.

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 170, ಎಲ್‌ಬಿಡಬ್ಲ್ಯೂ 77, ದಿನಾಂಕ 28ನೇ ಜೂನ್, 1978 (ಜಿಎಸ್‌ಆರ್ 272)ರ ಮೂಲಕ ಪ್ರತಿಯೋಜಿಸಲಾಗಿದೆ.

**20. ತುರ್ತು ಕಾಮಗಾರಿಗಳು, ದುರಸ್ತಿ, ಇತ್ಯಾದಿಗಳಿಗಾಗಿ ಅಗತ್ಯಬೀಳಬಹುದಾದಂಥ ದೃಢಕಾಯದ ವ್ಯಕ್ತಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.-** (1) ತಾಲೂಕಿನ ತಹಶೀಲ್ದಾರರು, ಕಾಲಕಾಲಕ್ಕೆ ಯಾವುದೇ ನೀರಾವರಿ ಕಾಮಗಾರಿಯು ನಡೆಯುತ್ತಿರುವಲ್ಲಿ, 40ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಕಾಮಗಾರಿಯ ದುರಸ್ತಿಗೆ ಅಥವಾ ಪೂರ್ಣಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಕೆಲಸದ ನಿರ್ವಹಣೆಯಲ್ಲಿ ನೆರವಾಗಲು ಆ ಸ್ಥಳಕ್ಕೆ ಸಮೀಪದಲ್ಲಿ ವಾಸಿಸುವ ಅಥವಾ ಅದರ ಸಮೀಪ ಭೂಮಿಯನ್ನು ಹೊಂದಿರುವ ಸದೃಢ ವ್ಯಕ್ತಿಗಳ ಪಟ್ಟಿಯನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು.

(2) ಹಾಗೆ ಸಿದ್ಧಪಡಿಸಲಾದ ಪಟ್ಟಿಯನ್ನು ತಹಶೀಲ್ದಾರರ ಕಛೇರಿಯ ಸೂಚನಾ ಫಲಕದ ಮೇಲೆ ಮತ್ತು ಸಂಬಂಧಪಟ್ಟ ಗ್ರಾಮದ ಚಾವಡಿಯಲ್ಲಿ ಅಂಟಿಸತಕ್ಕದ್ದು.

**21. 43ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ.-** 43ನೇ ಪ್ರಕರಣದ ಎರಡನೇ ಪರಂತುಕದ ಅಡಿಯಲ್ಲಿ ನಡೆಸುವ ವಿಚಾರಣೆಯು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ IIIನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ವಿಧ್ಯುಕ್ತ ವಿಚಾರಣೆಯಾಗಿರತಕ್ಕದ್ದು.

[1][**21ಎ. 4ಎ ಪ್ರಕರಣದ ಅಡಿಯಲ್ಲಿ ವಿಧಿಸತಕ್ಕ ನಿರ್ವಹಣಾ ಉಪಕರದ ನಿರ್ಧರಣೆ.-** 4ಎ ಪ್ರಕರಣದ ಅಡಿಯಲ್ಲಿ ವಿಧಿಸತಕ್ಕ ನಿರ್ವಹಣಾ ಉಪಕರವನ್ನು ನಿರ್ಧರಿಸುವುದಕ್ಕಾಗಿ ತಹಶೀಲ್ದಾರನು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ರಾಜ್ಯ ಸರ್ಕಾರದ ಯಾವುದೇ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆಯುವ ಆ ಪ್ರದೇಶದಲ್ಲಿರುವ ಪ್ರತಿಯೊಬ್ಬ ಹಿಡುವಳಿದಾರನಿಗೆ ಅಂಥ ಕಾಮಗಾರಿಯಿಂದ ಪ್ರಯೋಜನವಾಗುವ ಭೂಮಿಯ ವಿಸ್ತೀರ್ಣವನ್ನು ಮತ್ತು ವಿಧಿಸತಕ್ಕ ನಿರ್ವಹಣಾ ಉಪಕರವನ್ನು ತಿಳಿಸಿ ನೋಟೀಸನ್ನು ನೀಡತಕ್ಕದ್ದು. ತಹಶೀಲ್ದಾರರು ಈ ಪ್ರಸ್ತಾವಿತ ತೆರಿಗೆ ವಿಧಿಸುವಿಕೆಗೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ಅಥವಾ ದಿನಾಂಕಕ್ಕೆ ಮೊದಲು ಹಿಡುವಳಿದಾರನು ಮನವಿ ಸಲ್ಲಿಸಬಹುದೆಂಬುದನ್ನು ನೋಟೀಸಿನಲ್ಲಿ ತಿಳಿಸತಕ್ಕದ್ದು. ಮನವಿಯೇನಾದರು ಇದ್ದರೆ, ಅದನ್ನು ಪರಿಶೀಲಿಸಿದ ತರುವಾಯ ತಹಶೀಲ್ದಾರನು ಅಂಥ ಜಮೀನಿಗೆ ಸಂಬಂಧಪಟ್ಟಂತೆ ವಿಧಿಸತಕ್ಕ ನಿರ್ವಹಣಾ ಉಪಕರವನ್ನು ಆದೇಶದ ಮೂಲಕ ನಿರ್ಧರಿಸತಕ್ಕದ್ದು.

(2) ತಹಶೀಲ್ದಾರರ (1)ನೇ ಉಪ ನಿಯಮದ ಅಡಿಯಲ್ಲಿನ ಆದೇಶದಿಂದ ಬಾಧಿತನಾದ ಯಾರೇ ಭೂ ಹಿಡುವಳಿದಾರನು, ಆದೇಶವು ತಲುಪಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸಹಾಯಕ ಆಯುಕ್ತರನಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅದರ ಮೇಲೆ ಅವರ ಆದೇಶವು ಅಂತಿಮವಾಗಿರತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 43, ಎಲ್‌ಬಿಡಬ್ಲ್ಯೂ 71, ದಿನಾಂಕ 24ನೇ ಫೆಬ್ರವರಿ, 1973ರ ಮೂಲಕ ಸೇರಿಸಲಾಗಿದೆ.

**22. ತುಂಗಭದ್ರಾ ಮಂಡಲಿ, ಮುಂತಾದವುಗಳಿಗೆ ನಿರ್ವಹಣಾ ಉಪಕರವನ್ನು ಸಂದಾಯ ಮಾಡುವ ವಿಧಾನ.-** ತುಂಗಭದ್ರಾ ಮಂಡಲಿ, ತಾಲ್ಲೂಕು ಅಭಿವೃದ್ಧಿ ಮಂಡಲಿ ಅಥವಾ ಇತರೆ ಯಾವುದೇ ಪ್ರಾಧಿಕಾರವು ನಿರ್ವಹಿಸುವ ಯಾವುದೇ ನೀರಾವರಿ ಕಾಮಗಾರಿಯಿಂದ ಪ್ರಯೋಜನ ಪಡೆದ ಭೂಮಿಯ ಮೇಲೆ ನಿರ್ವಹಣಾ ಉಪಕರವಾಗಿ ಸಂಗ್ರಹಿಸಿದ ಮೊಬಲಗನ್ನು ಯಾವ ಆರ್ಥಿಕ ವರ್ಷದಲ್ಲಿ ಸಂಗ್ರಹಿಸಲಾಗಿದೆಯೋ ಆ ವರ್ಷದ ತರುವಾಯ ಅದನ್ನು ತುಂಗಭದ್ರಾ ಮಂಡಳಿಗೆ, ತಾಲೂಕು ಅಭಿವೃದ್ಧಿ ಮಂಡಲಿಗೆ ಅಥವಾ ಸಂಬಂಧಪಟ್ಟ ಇತರೆ ಪ್ರಾಧಿಕಾರಕ್ಕೆ ರಾಜ್ಯಸರ್ಕಾರವು ಆದೇಶದ ಮೂಲಕ ಅನುದಾನಗಳ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

**23. ಕಾಲುವೆಗಳಲ್ಲಿ ಅಥವಾ ಕಾಲುವೆಗಳ ಮೂಲಕ ವ್ಯಕಿಗಳು, ಪ್ರಾಣಿಗಳು ಅಥವಾ ವಾಹನಗಳು ದಾಟಿಹೋಗುವುದು.-** (1) ಕಾರ್ಯನಿರ್ವಾಹಕ ಇಂಜಿನಿಯರನು ಗೊತ್ತುಪಡಿಸಿದ ಸ್ಥಳವನ್ನು ಹೊರತುಪಡಿಸಿ, ಯಾವುದೇ ಸ್ಥಳದಲ್ಲಿ, ಯಾವುದೇ ನೀರಾವರಿ ಕಾಮಗಾರಿಯ ದಂಡೆ ಅಥವಾ ಕಾಲುವೆಯ ಮೇಲೆ ಯಾರೇ ವ್ಯಕ್ತಿಯು ಹಾಯ್ದು ಹೋಗತಕ್ಕದ್ದಲ್ಲ ಅಥವಾ ಯಾವುದೇ ಪ್ರಾಣಿ ಅಥವಾ ವಾಹನವು ಹಾಯ್ದು ಹೋಗುವಂತೆ ಮಾಡತಕ್ಕದ್ದಲ್ಲ. ಕಾರ್ಯನಿರ್ವಾಹಕ ಇಂಜಿನೀಯರನು ಹಾಗೆ ನಿಗದಿಪಡಿಸಿದ ಸ್ಥಳದಲ್ಲಿ ಸೂಚನಾ ಫಲಕವನ್ನು ನೆಡುವ ವ್ಯವಸ್ಥೆ ಮಾಡತಕ್ಕದ್ದು.

(2) (1)ನೇ ಉಪನಿಯಮದ ಅಡಿಯಲ್ಲಿ ಸ್ಥಳಗಳನ್ನು ನಿಗದಿಪಡಿಸುವಾಗ, ಕಾರ್ಯನಿರ್ವಾಹಕ ಇಂಜಿನಿಯರನು, ಕಾಮಗಾರಿಯ ಸಮೀಪದಲ್ಲಿ ವಾಸಿಸುವ ಅಥವಾ ಭೂಮಿಗಳನ್ನು ಹೊಂದಿರುವ ವ್ಯಕ್ತಿಗಳ ಕಾಲುವೆಯನ್ನು ದಾಟಬೇಕಾದ ಅಥವಾ ತಮ್ಮ ಪ್ರಾಣಿಗಳಿಗೆ ನೀರನ್ನು ಪೂರೈಸಬೇಕಾದ ವ್ಯಕ್ತಿಗಳ ಯುಕ್ತ ಅನುಕೂಲತೆಗೆ ಯಥೋಚಿತ ಗಮನ ಕೊಡತಕ್ಕದ್ದು.

(3) (1)ನೇ ಉಪಪ್ರಕರಣದ ಉಲ್ಲಂಘನೆಯು 55ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವಾಗತಕ್ಕದ್ದು.

[1][**23ಎ. 64ನೇ ಪ್ರಕರಣದ ಅಡಿಯಲ್ಲಿ ವಸೂಲು ಮಾಡತಕ್ಕ ವೆಚ್ಚಗಳು.-** 64ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನೀರಾವರಿ ಅಧಿಕಾರಿಯು ವಸೂಲು ಮಾಡತಕ್ಕ ವೆಚ್ಚಗಳು, ಯುಕ್ತ ಅನುಮತಿ ಪಡೆದು ನೀರನ್ನು ಬಳಸಿಕೊಂಡಿದ್ದರೆ ಸಂದಾಯ ಮಾಡಬಹುದಾಗಿದ್ದ ನೀರು ದರದ ಇಪ್ಪತ್ತು ಪಟ್ಟು ಹೆಚ್ಚು ಮೊಬಲಗು ಆಗಿರತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 134, ದಿನಾಂಕ 4ನೇ ಮಾರ್ಚ್, 1969ರ (ಪಿಡಬ್ಲ್ಯೂಡಿ 7 ಎಲ್‌ಬಿಡಬ್ಲ್ಯೂ 65 ಭಾಗ –II)ರ ಮೂಲಕ ಸೇರಿಸಲಾಗಿದೆ.

[1][**23ಬಿ. ಪ್ರಮಾಣಿತ ಪ್ರತಿಗಳನ್ನು ನೀಡುವುದು.-** ಈ ಅಧಿನಿಯಮದ ಮೇರೆಗೆ ಆದೇಶಗಳನ್ನು ಮಾಡಲು ಅಧಿಕಾರ ಹೊಂದಿರುವ ಅಧಿಕಾರಿಗಳು, ತಾವು ಮಾಡಿದ ಆದೇಶಗಳ ಪ್ರಮಾಣಿತ ಪ್ರತಿಗಳನ್ನು ನೀಡಬಹುದು. ಪ್ರಮಾಣಿತ ಪ್ರತಿಗಳನ್ನು ತಯಾರಿಸಲು ತಗಲುವ ವೆಚ್ಚಗಳನ್ನು ಪ್ರತಿಯೊಂದು ಬೆರಳಚ್ಚು ಅಥವಾ ಲಿಖಿತ ಪುಟಗಳಿಗೆ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆಯ ದರದಲ್ಲಿ ಲೆಕ್ಕ ಹಾಕತಕ್ಕದ್ದು.][1]

1. 23ಬಿ ನಿಯಮವನ್ನು ಜಿಎಸ್‌ಆರ್ 93, ದಿನಾಂಕ 07.03.1979ರ ಮೂಲಕ 15.03.1979 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**24. ನಿರಸನ ಮತ್ತು ಉಳಿಸುವಿಕೆಗಳು.-** 72ನೇ ಪ್ರಕರಣದ (1)ನೇ ಉಪ ಪ್ರಕರಣದ ಕಾರಣದಿಂದಾಗಿ ಜಾರಿಯಲ್ಲಿ ಮುಂದುವರಿಯುತ್ತಿರುವ ಈ ಹಿಂದಿನ ನಿಯಮಗಳಿಗೆ ಸಂವಾದಿಯಾದ ಎಲ್ಲ ನಿಯಮಗಳು ಈ ಮೂಲಕ ನಿರಸಿತವಾಗಿವೆ; ಪರಂತು, ಸದರಿ ನಿರಸನವು, ಸದರಿ ನಿಯಮಗಳ ಮತ್ತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾಡಲಾದ ಹಿಂದಿನ ಕಾರ್ಯಾಚರಣೆಯನ್ನು ಬಾಧಿಸತಕ್ಕದ್ದಲ್ಲ ಮತ್ತು ಸದರಿ ನಿಯಮಗಳು, ಕರ್ನಾಟಕ ಅಧಿನಿಯಮದ ಮೂಲಕ ನಿರಸನವಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

## ನಮೂನೆ- I

**(ನಿಯಮ 1ನ್ನು ನೋಡಿ)**

ಕರ್ನಾಟಕ ನೀರಾವರಿ ಅಧಿನಿಯಮ, 1965ರ 6, 7 ಅಥವಾ 8ನೇ ಪ್ರಕರಣದ ಅಡಿಯಲ್ಲಿ ಕಟ್ಟಡವನ್ನು ಅಥವಾ ವಾಸದ ಮನೆಗೆ ಹೊಂದಿಕೊಂಡಿರುವ ಅಂಗಳ ಅಥವಾ ತೋಟವನ್ನು ಪ್ರವೇಶಿಸುವ ಬಗೆಗಿನ ನೋಟೀಸು.

. . . . . . . . .

. . . . . . . . . ಇವರಿಗೆ

. . . . . . . . . . . . ನೀರಾವರಿ ಅಧಿಕಾರಿಯಾದ . . . . . . . . . . . ಎಂಬ ನಾನು, . . . . . . ದಿನಾಂಕದಂದು . . . . . . . . . . . ಸಮಯದಲ್ಲಿ . . . . . . . . . . ಉದ್ದೇಶಕ್ಕಾಗಿ . . . . . . . . . ಜಿಲ್ಲೆಯ . . . . . . . . . ತಾಲೂಕಿನ . . . . . . . . . ಗ್ರಾಮದ . . . . . . . . . ಸರ್ವೇ ನಂ.ನಲ್ಲಿನ ವಾಸದ ಮನೆಗೆ ಸೇರಿರುವ ಕಟ್ಟಡ / ಆವೃತ ಅಂಗಳ/ ತೋಟವನ್ನು ಪ್ರವೇಶಿಸುವುದಾಗಿ ಈ ಮೂಲಕ ತಿಳಿಸುತ್ತೇನೆ.

ನನ್ನ ಪರವಾಗಿ ಮತ್ತು ನನ್ನ ಆದೇಶಗಳ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ಪ್ರವೇಶಕ್ಕೆ ಅನುಮತಿಸುವಂತೆ ನಾನು ಕೋರುತ್ತೇನೆ. (ಇಲ್ಲಿ ಉದ್ದೇಶಗಳನ್ನು ನಮೂದಿಸಿ) . . . . . . . . .

. . . . . . . .

ನೀರಾವರಿ ಅಧಿಕಾರಿ

## ನಮೂನೆ- 2

**ಅಧಿಸೂಚನೆ**

**ಕರ್ನಾಟಕ ನೀರಾವರಿ ಅಧಿನಿಯಮ, 1965ರ 15(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ**

. . . . . . . . . . . . . ನೀರಾವರಿ ಅಧಿಕಾರಿಯಾದ ನಾನು . . . . . . . . . . . . . ವಿತರಣ ಕಾಲುವೆ/ ಉಪಕಾಲುವೆ . . . . . . ಚೈನ್ ಸಂಖ್ಯೆ . . . . . . . . . ರಲ್ಲಿರುವ ಹೊರ ಮಾರ್ಗದಿಂದ ಸಾಗುವಳಿ ಉದ್ದೇಶಗಳಿಗಾಗಿ ನೀರಿನ ಅಗತ್ಯವಿರುವ ಜಮೀನುಗಳಿಗೆ ನೀರು ಸರಬರಾಜು ಮಾಡಲು ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನುಗಳಿಗೆ ಹೊಲ-ಕಾಲುವೆಗಳನ್ನು ನಿರ್ಮಾಣ ಮಾಡುವುದು ಅಗತ್ಯವೆಂದು ಕಂಡುಬಂದಿರುವುದರಿಂದ;

ಈಗ ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 15ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನೀರಾವರಿ ಅಧಿಕಾರಿಯಾದ ನಾನು . . . . . . . . . ಈ ಪ್ರದೇಶಕ್ಕೆ ಹೊಲ-ಕಾಲುವೆಯನ್ನು . . . . . . . . ತರುವಾಯ ನಿರ್ಮಾಣ ಮಾಡಲಾಗುವುದೆಂದು ಈ ಮೂಲಕ ಘೋಷಿಸುತ್ತೇನೆ.

**ಹೊಲ-ಕಾಲುವೆಗಳು ಅವಶ್ಯವಿರುವ ಜಮೀನುಗಳ ಅನುಸೂಚಿ**

| ಜಿಲ್ಲೆ ಹೆಸರು | ತಾಲ್ಲೂಕು | ಗ್ರಾಮದ ಹೆಸರು | [1][ಪ್ರದೇಶಗಳಲ್ಲಿ ಒಳಗೊಳ್ಳುವ ಜಮೀನುಗಳ ಸರ್ವೆ ನಂ. ಮತ್ತು ಅಂತಹ ಪ್ರದೇಶದ ಚೆಕ್ಕುಬಂದಿಗಳ ಚಾಲ್ತಿ ವಿವರಣೆ][1] | ನೀರಾವರಿ ಮಾಡಬಹುದಾದ ಪ್ರದೇಶ |
|---|---|---|---|---|
| 1 | 2 | 3 | 4 | 5 |
| | | | | |

ನೀರಾವರಿ ಅಧಿಕಾರಿ.

. . . . . . ವಿಭಾಗ

ಗೆ:

ಸಂಕಲನಕಾರರು, ಕರ್ನಾಟಕ ರಾಜಪತ್ರ, . . . . . . . 19 ದಿನಾಂಕದ ಕರ್ನಾಟಕ ರಾಜಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 65, ಎಲ್‌ಬಿಡಬ್ಲ್ಯೂ 72, ದಿನಾಂಕ 6ನೇ ಮೇ, 1974ರ ಮೂಲಕ ಪ್ರತಿಯೋಜಿಸಲಾಗಿದೆ.

**ನಮೂನೆ-3**

**ಅಧಿಸೂಚನೆ**

**ಕರ್ನಾಟಕ ನೀರಾವರಿ ಅಧಿನಿಯಮ, 1965ರ 15(2)ನೇ ಪ್ರಕರಣದ ಮೇರೆಗಿನ ಅಧಿಸೂಚನೆ**

ಸಾಗುವಳಿಯ ಉದ್ದೇಶಗಳಿಗಾಗಿ ನೀರಿನ ಸರಬರಾಜು ಅಗತ್ಯವಿರುವಂತಹ ಜಮೀನುಗಳಿಗೆ ನೀರನ್ನು ಸರಬರಾಜು ಮಾಡುವ ಉದ್ದೇಶಕ್ಕಾಗಿ . . . . . . . . . ಹೊರಗಂಡಿಯ . . . . . . . . .ಚೈನ್ ಸಂಖ್ಯೆಯ . . . . . . . . ಕಾಲುವೆ/ . . . . . . . . . . . . ಉಪಕಾಲುವೆಯ ನಿರ್ಮಾಣ ಮಾಡುವುದಕ್ಕಾಗಿ, ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವೆಂದು ನಾನು ಅಭಿಪ್ರಾಯಪಟ್ಟಿರುವುದರಿಂದ ಹಾಗೂ ಅಂತಹ ಜಮೀನುಗಳನ್ನು ಗುರುತು ಮಾಡಿರುವುದರಿಂದ;

ಈಗ ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 15ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, . . . . . . . . . . . ನೀರಾವರಿ ಅಧಿಕಾರಿಯಾದ . . . . . . . . ಎಂಬ ನಾನು, ಸದರಿ ಜಮೀನುಗಳನ್ನು ಹೊಲ-ಕಾಲುವೆಗಳ ನಿರ್ಮಾಣಕ್ಕಾಗಿ ಗುರುತು ಮಾಡಲಾಗಿದೆ ಎಂದು ಈ ಮೂಲಕ ಘೋಷಿಸುತ್ತೇನೆ.

**ಅನುಸೂಚಿ**

| ಕ್ರ. ಸಂ. | ಜಿಲ್ಲೆ ಹೆಸರು | ತಾಲ್ಲೂಕಿನ ಹೆಸರು | ಗ್ರಾಮದ ಹೆಸರು | [1][ಪ್ರದೇಶಗಳಲ್ಲಿ ಒಳಗೊಂಡ ಜಮೀನುಗಳ ಸರ್ವೆ ನಂ.ಗಳು ಮತ್ತು ಅಂತಹ ಪ್ರದೇಶದ ಚೆಕ್ಕು ಬಂದಿಗಳ ಚಾಲ್ತಿ ವಿವರಣೆಗಳು][1] | ಹೊಲ-ಕಾಲುವೆಗಳ ನಿರ್ಮಾಣಕ್ಕಾಗಿ ಗುರುತುಮಾಡಲಾದ ಪ್ರದೇಶ. |
|---|---|---|---|---|---|
| **1** | **2** | **3** | **4** | **5** | **6** |

ನೀರಾವರಿ ಅಧಿಕಾರಿ

. . . . ವಿಭಾಗ

---

**ಪ್ರತಿಗಳು:**

1. ತಹಶೀಲ್ದಾರರು . . . . . . . ತಾಲೂಕು, ಅಧಿನಿಯಮದ 15(2)ನೇ ಪ್ರಕರಣದ ಅನುಸಾರ ಹೊಲ-ಕಾಲುವೆಯನ್ನು ಹಾದು ಹೋಗುವ ಪ್ರತಿಯೊಂದು ಗ್ರಾಮದಲ್ಲಿ ಮಾಹಿತಿ ಹಾಗೂ ಪ್ರಕಟಣೆಗಾಗಿ
2. ಸಹಾಯಕ ಎಂಜಿನಿಯರ್ . . . . . . . . . ಉಪ ವಿಭಾಗ
3. ಜಿಲ್ಲಾಧಿಕಾರಿ . . . . . . . . . ಜಿಲ್ಲೆ
4. ಅಧೀಕ್ಷಕ ಇಂಜಿನಿಯರ್ . . . . . . . . . . . . . . . . . . . . . . ವಲಯ 24( )ನೇ ಪ್ರಕರಣದ ಮೇರೆಗೆ ನೋಟೀಸು, ಸೂಪರಿಂಟೆಂಡೆಂಟ್ ಇಂಜಿನಿಯರ್ . . . . . . . . . ವಲಯ
5. ಸೂಚನಾ ಫಲಕ

[2][ನಮೂನೆ 4 ರಿಂದ 12][2]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 65, ಎಲ್‌ಬಿಡಬ್ಲ್ಯೂ 72, ದಿನಾಂಕ 6ನೇ ಮೇ, 1974ರ ಮೂಲಕ ಪ್ರತಿಯೋಜಿಸಲಾಗಿದೆ.

2. ನಮೂನೆ 4, 5, 6, 7, 8, 9, 10, 11 ಮತ್ತು 12 ಇವುಗಳನ್ನು ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 272, ದಿನಾಂಕ 7ನೇ ಸೆಪ್ಟೆಂಬರ್, 1971 (ಪಿಡಬ್ಲ್ಯೂ 66, ಎಲ್‌ಬಿಡಬ್ಲ್ಯೂ 71) ಇದರ ಮೂಲಕ ಬಿಟ್ಟುಬಿಡಲಾಗಿದೆ.

## ಪರಿಶಿಷ್ಟ- XI

## ನಮೂನೆ-13

### 24(1)ನೇ ಪ್ರಕರಣದ ಮೇರೆಗಿನ ಸೂಚನೆ

ನೀರಾವರಿ ಅಧಿಕಾರಿಯ ಕಛೇರಿ,

. . . . . . . . ವಿಭಾಗ

ಶ್ರೀ/ಶ್ರೀಮತಿ . . . . . . . . . . . ಇವರಿಗೆ

. . . . . . . . . ಸಂಖ್ಯೆಯ ಕಾಲುವೆ/ ಉಪ ಕಾಲುವೆ ಜಲಮಾರ್ಗ ಸಂಖ್ಯೆ. . . . . . . . . ಚೈನ್‌ನಲ್ಲಿ . . . . . . . ಸಂಖ್ಯೆಯ . . . . . . . ತೂಬುಗಂಡಿಯಲ್ಲಿ ಬರುವ ಹೊಲ-ಕಾಲುವೆ ಅಥವಾ ಕಾಲುವೆಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸಿಕೊಂಡು ಬರಲು ಕರ್ನಾಟಕ ನೀರಾವರಿ ಅಧಿನಿಯಮ, 1965ರ 20ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ವಿಧಿಸಿದ ಹೊಣೆಗಾರಿಕೆಯನ್ನು ಪೂರೈಸಲು ನೀವು ವಿಫಲರಾಗಿದ್ದೀರೆಂಬುದು ನನ್ನ ಗಮನಕ್ಕೆ ಬಂದಿರುವುದರಿಂದ ;

ಆದ್ದರಿಂದ, ಈಗ ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 24(1)ನೇ ಪ್ರಕರಣದ ಮೇರೆಗೆ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, . . . . . . . . . . ನೀರಾವರಿ ಅಧಿಕಾರಿ . . . . . . . . . ಎಂಬ ನಾನು, . . . . . . . . ದಿನಗಳೊಳಗಾಗಿ ಅವಶ್ಯ ದುರಸ್ತಿ ಕಾಮಗಾರಿಯನ್ನು ನಿರ್ವಹಿಸಲು ನಿಮಗೆ ನಿರ್ದೇಶಿಸುತ್ತೇನೆ. ಇದಕ್ಕೆ ತಪ್ಪಿದಲ್ಲಿ, ಆ ಕಾಮಗಾರಿಯನ್ನು ನಾನು ನಿರ್ವಹಿಸುತ್ತೇನೆ ಮತ್ತು ಅಂತಹ ದುರಸ್ತಿ ಕಾಮಗಾರಿಗೆ ಭರಿಸಲಾದ ಎಲ್ಲ ವೆಚ್ಚಗಳನ್ನು ಭೂಕಂದಾಯದ ಬಾಕಿಯಂತೆ ನಿಮ್ಮಿಂದ ವಸೂಲಿ ಮಾಡಲಾಗುವುದು.

ನೀರಾವರಿ ಅಧಿಕಾರಿ,

. . . . . . . . ವಿಭಾಗ

ಪ್ರತಿ:

ಅಸಿಸ್ಟೆಂಟ್ ಇಂಜಿನಿಯರ್‌ರವರಿಗೆ.

## ಪರಿಶಿಷ್ಟ- XIV

## ನಮೂನೆ-14

### ನೀರಾವರಿಗಾಗಿ ನೀರು ಸರಬರಾಜು ಕೋರಿ ಅರ್ಜಿ

ಅರ್ಜಿಯ ಸಂಖ್ಯೆ

ಗೆ,

ನೀರಾವರಿ ಅಧಿಕಾರಿ,

. . . . . . . . . ವಿಭಾಗ

. . . . . . . . . ಜಿಲ್ಲೆಯ . . . . . . . . . ತಾಲ್ಲೂಕಿನ . . . . . . . . . . . ಗ್ರಾಮದ ನಿವಾಸಿಯಾದ . . . . . . . . . . ಎಂಬ ನಾನು, ಕರ್ನಾಟಕ ನೀರಾವರಿ ಅಧಿನಿಯಮ, 1965ರ ಮತ್ತು ನೀರಾವರಿಗೆ ಸಂಬಂಧಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳು ಮತ್ತು ಕರ್ನಾಟಕ ನೀರಾವರಿ ನಿಯಮಗಳು, 1965ರ ಉಪಬಂಧಗಳಿಗೆ ಮತ್ತು ಈ ಅರ್ಜಿಯಲ್ಲಿ ನಾನು ಅಂಗೀಕರಿಸಿರುವ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಇಲ್ಲಿ ಇನ್ನು ಮುಂದೆ ವಿವರಿಸಲಾಗಿರುವ ಜಮೀನಿನ ನೀರಾವರಿ ಉದ್ದೇಶಕ್ಕಾಗಿ . . . . . . . . . ಕಾಲುವೆಯಿಂದ ನೀರು ಸರಬರಾಜು ಕೋರಿ ಈ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ:

| ಗ್ರಾಮದ ಹೆಸರು | ಕಾಲುವೆಯ | ಉಪಕಾಲುವೆಯ ಹೆಸರು | ಹೊರ ಮಾರ್ಗದ ಸಂಖ್ಯೆ | ಸರ್ವೆ ನಂ. ಮತ್ತು ಉಪ ಸರ್ವೆ ನಂ. | ಸರ್ವೆ ನಂ. ವಿಸ್ತೀರ್ಣ | ಹಿಡುವಳಿಯ ವಿಸ್ತೀರ್ಣ | ನೀರಾವರಿ ಗೊಳಪಡಿಸ ಬೇಕಾದ ವಿಸ್ತೀರ್ಣ | ಬೆಳೆ | ನೀರು ಅಗತ್ಯ ವಿರುವ ಅವಧಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |

2. ನಾನು, ಯಾವ ಜಮೀನುಗಳಿಗೆ ನೀರು ಸರಬರಾಜಿಗೆ ಅರ್ಜಿ ಸಲ್ಲಿಸಿರುವೆನೋ ಆ ಜಮೀನುಗಳ . . . . . . . . . . ಆಗಿದ್ದೇನೆ.

3. ಈ ಅರ್ಜಿಯ ಮೇಲೆ ಯಾರಿಗೆ ಆದೇಶಗಳನ್ನು ನೀಡಬೇಕಾಗಿದೆಯೋ ಆ ಅರ್ಜಿದಾರನ ಹೆಸರು ಮತ್ತು ವಿಳಾಸವು . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . ಆಗಿದೆ.

ಅರ್ಜಿದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತು

ದಿನಾಂಕ:
ಸಾಕ್ಷಿದಾರನ ಸಹಿ:
(ಅರ್ಜಿಯ ಎಲ್ಲ ವಿವರಗಳನ್ನು ಅರ್ಜಿದಾರನೇ ಭರ್ತಿ ಮಾಡಬೇಕು)

ಮಂಜೂರಾತಿಗಾಗಿ ಈ ಮುಂದಿನಂತೆ ಮುಂದಕ್ಕೆ ಕಳುಹಿಸಲಾಗಿದೆ:-

(1) ಮಂಜೂರು ಮಾಡಬೇಕಾದ ಪ್ರದೇಶ

(2) ಮಂಜೂರಾತಿಯ ಅವಧಿ
. . . . . . . . ಯಿಂದ
. . . . . . . . ವರೆಗೆ

(3) ವಿಧಿಸಬೇಕಾದ ನೀರಿನ ದರ — ಎಕರೆ ಒಂದಕ್ಕೆ . . . . . . . .
ದಿನಾಂಕ:
ಮಂಜೂರು ಮಾಡಲಾಗಿದೆ — ಸಹಿ:
ದಿನಾಂಕ — ಸಹಿ:

**ಸೂಚನೆಗಳು**

1. ಅರ್ಜಿಗಳನ್ನು ದ್ವಿಪ್ರತಿಯಲ್ಲಿ ನೀರಾವರಿ ಅಧಿಕಾರಿಗೆ ಅಥವಾ ಅಂತಹ ಅರ್ಜಿಗಳನ್ನು ಸ್ವೀಕರಿಸಲು ಅವರಿಂದ ಅಧಿಕೃತನಾದ ಯಾರೇ ಇತರೆ ಅಧಿಕಾರಿಗೆ ಸಲ್ಲಿಸತಕ್ಕದ್ದು. ಅರ್ಜಿಯನ್ನು ದೂತನ ಮೂಲಕ ಅಥವಾ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸಬಹುದು.

2. ಆದೇಶವನ್ನು ಹೊರಡಿಸಿದಾಗ ಅದರ ನಕಲನ್ನು ನೀರಾವರಿ ಅಧಿಕಾರಿಯ ಆದೇಶದ ಹಿಂಬರಹದೊಂದಿಗೆ ಅರ್ಜಿದಾರನಿಗೆ ಹಿಂದಿರುಗಿಸಲಾಗುವುದು.

3. ಏಕಮಾತ್ರ ಅಧಿಭೋಗದಾರ ಅಥವಾ ಎಲ್ಲ ಜಂಟಿ ಅಧಿಭೋಗದಾರರು (2) ಏಕಮಾತ್ರ ವರಿಷ್ಠ ಹಿಡುವಳಿದಾರ ಅಥವಾ ಎಲ್ಲ ಜಂಟಿ ವರಿಷ್ಠ ಹಿಡುವಳಿದಾರರು (3) ಮಂಜೂರಾತಿಯ ಅವಧಿವರೆಗೆ ಜಮೀನಿನ ನೀರಾವರಿ ಸಾಗುವಳಿಯನ್ನು ಮಾಡಲು ಹಕ್ಕುಳ್ಳ ಒಬ್ಬ ವ್ಯಕ್ತಿ ಅಥವಾ (4) ಇವರುಗಳ ಪೈಕಿಯಿಂದ ಅಂಥ ಮಂಜೂರಾತಿ ಸ್ವೀಕರಿಸಲು ಈ ಸಂಬಂಧದಲ್ಲಿ ವಿಧ್ಯುಕ್ತವಾಗಿ ಅಧಿಕೃತನಾದ ಒಬ್ಬ ವ್ಯಕ್ತಿ, ಇವರನ್ನು ಹೊರತುಪಡಿಸಿ, ಸಾಮಾನ್ಯವಾಗಿ ಯಾರೇ ವ್ಯಕ್ತಿಗೆ ಯಾವುದೇ ಜಮೀನಿನ ನೀರಾವರಿಗಾಗಿ ಯಾವುದೇ ಮಂಜೂರಾತಿಯನ್ನು ನೀಡಲಾಗುವುದಿಲ್ಲ.

4. ಅರ್ಜಿದಾರನು, ಜಮೀನಿನಲ್ಲಿ ನೀರಾವರಿ ಸಾಗುವಳಿಯನ್ನು ಮಾಡಲು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವುದಕ್ಕಾಗಿ ಜಮೀನಿನಲ್ಲಿ ಆತನಿಗಿರುವ ಹಿತಾಸಕ್ತಿಯ ಸ್ವರೂಪ ಅಥವಾ ಅವನು ಹೊಂದಿರುವ ಅಧಿಕಾರ–ಇವುಗಳನ್ನು ಪ್ಯಾರಾ–2 ರಲ್ಲಿ ತಿಳಿಸಬೇಕು.

5. ಈ ಬಗೆಯ ನೀರಾವರಿಗಾಗಿ ಸೂಕ್ತವಲ್ಲವೆಂದು ಕಂಡು ಬರುವ ಯಾವುದೇ ಜಮೀನನ್ನು ನೀರಾವರಿಗೊಳಪಡಿಸಲು ಮಂಜೂರಾತಿಯನ್ನು ನಿರಾಕರಿಸಲಾಗುವುದು.

**ಷರತ್ತುಗಳು**

1. ಅರ್ಜಿಯನ್ನು ಮಂಜೂರು ಮಾಡಿದ ತರುವಾಯ, ನೀರಾವರಿ ಅಧಿಕಾರಿಯು ಮಂಜೂರು ಮಾಡಿದ ಪ್ರದೇಶಕ್ಕೆ ಮತ್ತು ಅವಧಿಗೆ, ಆ ಪ್ರದೇಶ ನೀರಾವರಿಗೊಳಪಟ್ಟಿರಲಿ ಅಥವಾ ಒಳಪಡದಿರಲಿ ಆ ಅವಧಿಯಲ್ಲಿ ನೀರು ಒದಗಿಸಲಾಗಿದ್ದರೆ, ಪೂರ್ತಿಯಾಗಿ ನೀರಿನ ದರಗಳನ್ನು ಸಂದಾಯ ಮಾಡತಕ್ಕದ್ದು. ಸಾರ್ವಕಾಲಿಕ ಬೆಳೆಗಳ ಸಂದರ್ಭದಲ್ಲಿ, ಅರ್ಜಿಯ ಮಂಜೂರಾತಿ ದಿನಾಂಕದಿಂದ ಒಂದು ತಿಂಗಳೊಳಗಾಗಿ ನೀರು ಸರಬರಾಜು ಅಗತ್ಯವಿಲ್ಲವೆಂದು ಅರ್ಜಿದಾರರು ನೀರಾವರಿ ಅಧಿಕಾರಿಗೆ ಲಿಖಿತದಲ್ಲಿ ತಿಳಿಸಿದರೆ ಯಾವುದೇ ನೀರಿನ ದರವನ್ನು ವಿಧಿಸತಕ್ಕದ್ದಲ್ಲ.

2. ಪ್ರತಿಯೊಂದು ಬಗೆಯ ಬೆಳೆಯನ್ನು (ಎಂದರೆ, ಕಬ್ಬು, ವೀಳ್ಯೆದೆಲೆ, ಸಾಮಾನ್ಯ ಸರ್ವಕಾಲಿಕ, ಎರಡು ಋತುಮಾನದ ಮತ್ತು ಋತುಮಾನದ) ಪಾಸ್‌ಪುಸ್ತಕದಲ್ಲಿ ತೋರಿಸಿರುವಂತೆ ಮಂಜೂರಾತಿಯ ಅವಧಿಯವರೆಗೆ ಮಾತ್ರ ಬೆಳೆಯತಕ್ಕದ್ದು. ಆದರೆ, ಯಾವುದೇ ಕಡಿಮೆ ದರದ ಯಾವುದೇ ಬಗೆಯ ಬೆಳೆಯನ್ನು ಸಮಾನ ವಿಸ್ತೀರ್ಣದ ಪ್ರದೇಶದಲ್ಲಿ ಪ್ರತಿಯೋಜಿಸಬಹುದು.

3. ಮಂಜೂರಾದ ಪ್ರದೇಶದ ಮಿತಿಯನ್ನು ಮೀರತಕ್ಕದ್ದಲ್ಲ.

4. ಕರ್ನಾಟಕ ನೀರಾವರಿ ಅಧಿನಿಯಮ, 1965ರ ಅಥವಾ ಕರ್ನಾಟಕ ನೀರಾವರಿ ನಿಯಮಗಳು, 1965ರ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಅಥವಾ ಈ ಅರ್ಜಿಯ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ, ಯಾವುದೇ ನೋಟೀಸು ನೀಡದೆ ಮಂಜೂರಾತಿಯು ರದ್ದಾಗುವುದಕ್ಕೆ ಗುರಿಯಾಗತಕ್ಕದ್ದು ಅಥವಾ ಮಂಜೂರಾತಿಯ ಮೇರೆಗೆ ಯಾವುದೇ ಬೆಳೆಗೆ ಸರಬರಾಜನ್ನು ತಡೆಹಿಡಿಯುವುದಕ್ಕೆ ಅಥವಾ ಪೂರ್ಣವಾಗಿ ನಿಲ್ಲಿಸಲು ಗುರಿಯಾಗಿರತಕ್ಕದ್ದು.

5. ನೀರು ಲಭ್ಯವಿದ್ದರೆ, ಇಡೀ ಋತುಮಾನಕ್ಕೆ ನೀರನ್ನು ನೀಡತಕ್ಕದ್ದು ಅಥವಾ ನೀರಾವರಿ ಅಧಿಕಾರಿಯ ವಿವೇಚನೆಯ ಮೇರೆಗೆ ಎಷ್ಟು ನೀರು ಸರಬರಾಜು ಮಾಡಲು ಸಾಧ್ಯವೋ ಅಷ್ಟು ಸಲ ಸರಬರಾಜು ಮಾಡಬಹುದು.

6. ಪೂರ್ಣ ಪ್ರಮಾಣದ ನೀರು ಸರಬರಾಜಿಗೆ ಖಾತರಿ ನೀಡಲಾಗುವುದಿಲ್ಲ, ಆದರೆ ಯಾವ ಋತುವಿನ ಬಗ್ಗೆ ಅರ್ಜಿ ಸಲ್ಲಿಸಲಾಗಿದೆಯೋ ಆ ಅವಧಿಯಲ್ಲಿ ನೀರಿನ ಕೊರತೆಯ ಸಂಭವದ ಆದಷ್ಟು ಬೇಗನೆ ಮಾಹಿತಿಯನ್ನು ಮುಂಚಿತವಾಗಿ ನೀಡತಕ್ಕದ್ದು.

7. ಮಂಜೂರಾದ ಕಬ್ಬಿನ ಬೆಳೆಯ ಯಾವುದೇ ಪ್ರದೇಶಕ್ಕೆ ಮಾಡುವ ನೀರು ಸರಬರಾಜು ಅಗತ್ಯವಿದ್ದಾಗ, 31ನೇ ಮೇ ನಂತರ ಹೊಸ ಕಬ್ಬಿನ ಬೆಳೆಯ ಪ್ರದೇಶದಲ್ಲಿ ನೀರು ಸರಬರಾಜು ಹಿಂತೆಗೆದುಕೊಳ್ಳುವುದಕ್ಕೆ ಬದ್ಧವಾಗಿರತಕ್ಕದೆಂಬ ಷರತ್ತಿಗೊಳಪಟ್ಟಿರುತ್ತದೆ. 31ನೇ ಮೇ ನಂತರ ಪ್ರತಿ ಕ್ರಮಾನುಗತ ನೀರು ಸರಬರಾಜು ಮಾಡಲು ನೀರಾವರಿ ಅಧಿಕಾರಿಯ ಮಂಜೂರಾತಿಯ ಅಗತ್ಯವಿರತಕ್ಕದ್ದು. ಅಂಥ ಮಂಜೂರಾತಿಯನ್ನು ಕೃಷಿ ಉದ್ದೇಶಗಳಿಗೆ ನೀರಾವರಿ ಕಾಮಗಾರಿಯಲ್ಲಿ ನೀರು ಲಭ್ಯವಿದ್ದರೆ ಮಾಡತಕ್ಕದ್ದು. ಆದರೆ ಋತುಗಳಲ್ಲಿ ಯಾವುದೇ ಕಾಲಕ್ಕೆ ನೀರು ಸಾಕಷ್ಟಿಲ್ಲದಿದ್ದರೆ, ಮುಂದೆ ಮಾಡಬೇಕಾದ ಹೆಚ್ಚಿನ ನೀರು ಸರಬರಾಜನ್ನು ನಿಲ್ಲಿಸಲಾಗುವುದು ಮತ್ತು ನೀರಾವರಿ ಬೇಸಾಯಗಾರನು ಯಾವುದೇ ಸಂದರ್ಭದಲ್ಲೂ ನೀರಿನ ಕೊರತೆಯ ಕಾರಣದಿಂದಾಗಿ ಕಬ್ಬಿನ ಬೆಳೆಗೆ ಆದ ಯಾವುದೇ ಹಾನಿಗೆ ನಷ್ಟ ಪರಿಹಾರವನ್ನು ಕ್ಲೇಮು ಮಾಡತಕ್ಕದ್ದಲ್ಲ.

[1][ನಮೂನೆ-15

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 41 ಎಲ್‌ಬಿಡಬ್ಲ್ಯೂ 70, ದಿನಾಂಕ 25ನೇ ಜನವರಿ, 1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**ನೀರಾವರಿಗಾಗಿ ನೈಸರ್ಗಿಕ ತೊರೆಯ ನೀರಿನ ಬಳಕೆಯ ಅನುಮತಿಗಾಗಿ ಅರ್ಜಿ**

**ಗೆ:**

ನೀರಾವರಿ ಅಧಿಕಾರಿ,

. . . . . . . . . . ವಿಭಾಗ

. . . . . . . . . . . . ಜಿಲ್ಲೆಯ . . . . . . . . . . . ತಾಲೂಕಿನ . . . . . . . . . . ಗ್ರಾಮದ ನಿವಾಸಿಯಾದ . . . . . . . . . . . . ಎಂಬ ನಾನು, ಇಲ್ಲಿ ಇನ್ನು ಮುಂದೆ ವಿವರಿಸಿರುವ ಜಮೀನಿನ ನೀರಾವರಿ ಉದ್ದೇಶಕ್ಕಾಗಿ, ಕರ್ನಾಟಕ ನೀರಾವರಿ ಅಧಿನಿಯಮ, 1965 ಮತ್ತು ನೀರಾವರಿಗೆ ಸಂಬಂಧಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನು ಮತ್ತು ಕರ್ನಾಟಕ ನೀರಾವರಿ ನಿಯಮಗಳು, 1965 ಇವುಗಳ ಉಪಬಂಧಗಳಿಗೊಳಪಟ್ಟು ಮತ್ತು ಅಲ್ಲದೆ ಸೂಚನೆಗಳಲ್ಲಿ ಒಳಗೊಂಡ ಉಪಬಂಧಗಳು ಮತ್ತು ಈ ಅರ್ಜಿಯ ಕೊನೆಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ನಾನು ಒಪ್ಪಿಕೊಂಡಿರುವ ಷರತ್ತುಗಳಿಗೊಳಪಟ್ಟು, ನೈಸರ್ಗಿಕ ತೊರೆ/ ನದಿಯಿಂದ ನೀರನ್ನು ಬಳಸಲು ಅನುಮತಿ ಕೋರಿ ಈ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.-

| ಗ್ರಾಮದ ಹೆಸರು | ಸರ್ವೆ ನಂಬರ್ ಮತ್ತು ಅದರ ವಿಸ್ತೀರ್ಣ | ಹಿಡುವಳಿ ವಿಸ್ತೀರ್ಣ | ನೀರಾವರಿ ಗೊಳ್ಳಬೇಕಾದ ವಿಸ್ತೀರ್ಣ | ಅನುಮತಿ ಅಗತ್ಯವಿರುವ ಅವಧಿ |
|---|---|---|---|---|
| 1 | 2 | 3 | 4 | 5 |
| | | | | |

2. ಯಾವ ಜಮೀನುಗಳ ನೀರಾವರಿಗಾಗಿ ನೀರಿನ ಬಳಕೆಯ ಅಗತ್ಯವಿದೆಯೋ ಮತ್ತು ಯಾವುದರ ಬಗ್ಗೆ ನಾನು ಅನುಮತಿ ಕೋರಿರುವೆನೋ ನಾನು, ಆ ಜಮೀನುಗಳ . . . . . . . . . . ಆಗಿದ್ದೇನೆ.

3. ಅರ್ಜಿಯ ಮೇಲಿನ ಆದೇಶಗಳನ್ನು ಯಾರಿಗೆ ತಿಳಿಸಬೇಕಾಗಿದೆಯೋ ಆ ಅರ್ಜಿದಾರನ ಹೆಸರು ಮತ್ತು ವಿಳಾಸ . . . . . . . . . . . . . . . . . . . . . . . . . . . . . . . .

ದಿನಾಂಕ

ಸಾಕ್ಷಿದಾರನ ಸಹಿ — ಅರ್ಜಿದಾರನ ಸಹಿ ಅಥವಾ ಎಡಗೈ ಹೆಬ್ಬೆಟ್ಟು ಗುರುತು

1.

2.

(ಅರ್ಜಿಯ ಎಲ್ಲ ವಿವರಗಳನ್ನು ಅರ್ಜಿದಾರನೇ ಭರ್ತಿ ಮಾಡಬೇಕು).

ಈ ಮಂಜೂರಾತಿಗಾಗಿ ಮುಂದಕ್ಕೆ ಕಳುಹಿಸಲಾಗಿದೆ:

(1) ಮಂಜೂರು ಮಾಡಬೇಕಾದ ಪ್ರದೇಶ

(2) ಮಂಜೂರಾತಿಯ ಅವಧಿ

(3) ಎಕರೆ ಒಂದಕ್ಕೆ . . . . . . . . . . ರಿಂದ . . . . . . . . . . ವರೆಗೆ ವಿಧಿಸಬೇಕಾದ ನೀರಿನ ದರ

ದಿನಾಂಕ: — ಸಹಿ:

ಮಂಜೂರು ಮಾಡಲಾಗಿದೆ

ದಿನಾಂಕ: — ಸಹಿ:

**ಸೂಚನೆಗಳು**

1. ಅರ್ಜಿಯನ್ನು ದ್ವಿಪ್ರತಿಯಲ್ಲಿ ನೀರಾವರಿ ಅಧಿಕಾರಿಗೆ ಅಥವಾ ಅಂಥ ಅರ್ಜಿಗಳನ್ನು ಸ್ವೀಕರಿಸಲು ಅವರಿಂದ ಅಧಿಕೃತನಾದ ಯಾರೇ ಅಧಿಕಾರಿಗೆ ಸಲ್ಲಿಸತಕ್ಕದ್ದು. ಅರ್ಜಿಯನ್ನು ಒಬ್ಬ ದೂತನ ಮೂಲಕ ಅಥವಾ ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮೂಲಕ ನೀಡಬಹುದು.

2. ಒಂದು ಆದೇಶವನ್ನು ಹೊರಡಿಸಿದಾಗ ಅದರ ನಕಲನ್ನು ನೀರಾವರಿ ಅಧಿಕಾರಿಗಳ ಆದೇಶ ಗಳೊಂದಿಗೆ ಹಿಂಬರಹ ಮಾಡಿ ಅರ್ಜಿದಾರನಿಗೆ ಹಿಂದಿರುಗಿಸಲಾಗುವುದು.

3. (1) ಏಕಮಾತ್ರ ಅಧಿಭೋಗದಾರ ಅಥವಾ ಎಲ್ಲ ಜಂಟಿ ಅಧಿಭೋಗದಾರರು (2) ಏಕಮಾತ್ರ ವರಿಷ್ಠ ಹಿಡುವಳಿದಾರ ಅಥವಾ ಎಲ್ಲ ಜಂಟಿ ವರಿಷ್ಠ ಹಿಡುವಳಿದಾರರು (3) ಮಂಜೂರಾತಿಯ ಅವಧಿವರೆಗೆ ಜಮೀನಿನ ನೀರಾವರಿ ಸಾಗುವಳಿಯನ್ನು ಮಾಡಲು ಹಕ್ಕುಳ್ಳ ಒಬ್ಬ ವ್ಯಕ್ತಿ ಅಥವಾ (4) ಅಂಥ ಮಂಜೂರಾತಿ ಸ್ವೀಕರಿಸಲು ಈ ಸಂಬಂಧದಲ್ಲಿ ವಿಧ್ಯುಕ್ತವಾಗಿ ಪ್ರಾಧಿಕೃತನಾದ ಒಬ್ಬ ವ್ಯಕ್ತಿ ಇವರುಗಳನ್ನು ಹೊರತುಪಡಿಸಿ, ಸಾಮಾನ್ಯವಾಗಿ ಯಾರೇ ವ್ಯಕ್ತಿಗೆ ಯಾವುದೇ ಜಮೀನಿನ ನೀರಾವರಿಗೆ ಯಾವುದೇ ಮಂಜೂರಾತಿಯನ್ನು ನೀಡಲಾಗುವುದಿಲ್ಲ.

4. ಅರ್ಜಿದಾರನು, ಜಮೀನಿನಲ್ಲಿ ನೀರಾವರಿ ಸಾಗುವಳಿಯನ್ನು ಮಾಡಲು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವುದಕ್ಕಾಗಿ ಜಮೀನಿನಲ್ಲಿ ಅವನಿಗಿರುವ ಹಿತಾಸಕ್ತಿಯ ಸ್ವರೂಪ ಅಥವಾ ಅವನು ಹೊಂದಿರುವ ಅಧಿಕಾರ-ಇವುಗಳನ್ನು 2ನೇ ಖಂಡದಲ್ಲಿ ತಿಳಿಸಬೇಕು.

5. ಈ ಬಗೆಯ ನೀರಾವರಿಗಾಗಿ ಸೂಕ್ತವಲ್ಲವೆಂದು ಕಂಡು ಬರುವ ಯಾವುದೇ ಜಮೀನನ್ನು ನೀರಾವರಿಗೊಳಪಡಿಸಲು ಅನುಮತಿಯನ್ನು ನಿರಾಕರಿಸಲಾಗುವುದು.

6. ಮೇಲೆ ವಿವರಿಸಲಾದಂತೆ ಅರ್ಜಿಯಲ್ಲಿ ಪೂರ್ಣ ವಿವರಗಳನ್ನು ನೀಡಿರದಿದ್ದರೆ ಮತ್ತು ಈ ಸಂಬಂಧದಲ್ಲಿ ನೀರಾವರಿ ಅಧಿಕಾರಿಯು ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಒದಗಿಸಲು ವಿಫಲರಾದ ಸಂದರ್ಭದಲ್ಲಿ ಅಂಥ ಅರ್ಜಿಯನ್ನು ತಿರಸ್ಕರಿಸಲು ಬದ್ಧವಾಗತಕ್ಕದ್ದು.

7. ಮಂಜೂರಾತಿಯನ್ನು ಕೇವಲ ತಾತ್ಕಾಲಿಕವಾಗಿ ಮತ್ತು [1][ಐದು ವರ್ಷಗಳ][1] ಅವಧಿಗಾಗಿ ಮಾತ್ರ ಮತ್ತು ಅಂಥ ಅನುಮತಿಯಿಂದ ಆ ಪಕ್ಷಕಾರನು ಆದ್ಯತೆಗೆ ಹಕ್ಕುಳ್ಳವನಾಗದಿದ್ದ ಪಕ್ಷದಲ್ಲಿ ನೀಡಬಹುದು.

8. ಅರ್ಜಿಗೆ ಸಂಬಂಧಿಸಿದಂತೆ ಅನುಮತಿ ನಿರಾಕರಿಸುವ ಅಥವಾ ತಿರಸ್ಕರಿಸುವ ಪ್ರತಿಯೊಂದು ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ನಿರಾಕರಣೆ ಅಥವಾ ತಿರಸ್ಕಾರಕ್ಕೆ ಕಾರಣಗಳನ್ನು ಸೂಚಿಸತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 322, ದಿನಾಂಕ 20ನೇ ಡಿಸೆಂಬರ್, 1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**ಷರತ್ತುಗಳು**

1. ಅರ್ಜಿಯನ್ನು ಮಂಜೂರು ಮಾಡಿದ ತರುವಾಯ, ನೀರಾವರಿ ಅಧಿಕಾರಿಯು ಮಂಜೂರು ಮಾಡಿದ ಪ್ರದೇಶದ ವಿಸ್ತೀರ್ಣ ಮತ್ತು ಅವಧಿಗೆ ನೀರಿನ ದರ ಸಂದಾಯವಾಗತಕ್ಕದ್ದು.

2. ಮಂಜೂರಾದ ಪ್ರದೇಶದ ಮಿತಿಯನ್ನು ಮೀರತಕ್ಕದ್ದಲ್ಲ.

3. ಕರ್ನಾಟಕ ನೀರಾವರಿ ಅಧಿನಿಯಮ, 1965ರ ಅಥವಾ ಕರ್ನಾಟಕ ನೀರಾವರಿ ಅಧಿನಿಯಮದ ಯಾವುದೇ ನಿಯಮದ ಯಾವುದೇ ಉಪಬಂಧ ಅಥವಾ ಈ ಅರ್ಜಿಯ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ನೋಟೀಸು ನೀಡದೆ ಅನುಮತಿಯು ರದ್ದುಗೊಳಿಸುವಿಕೆಗೆ ಅಥವಾ ಪೂರ್ಣವಾಗಿ ನಿಲ್ಲಿಸುವಿಕೆಗೆ ಬದ್ಧವಾಗಿರತಕ್ಕದ್ದು.][1]

**[1][ನಮೂನೆ-16**

**[19ಎ ನಿಯಮ ನೋಡಿ]**

ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ, . . . . .. . . . . ಭೂಮಿಯಲ್ಲಿ ಬೆಳೆಯತಕ್ಕ ಬೆಳೆಗಳ ವಿಧಗಳನ್ನು ನಿಯಮಿಸುವುದು ಯುಕ್ತವಾಗಿರುವುದು ಮತ್ತು ಅಪೇಕ್ಷಣೀಯವಾಗಿರುವುದು ಎಂಬುದಾಗಿ ಕರ್ನಾಟಕ ಸರ್ಕಾರವು, ಕರ್ನಾಟಕ ನೀರಾವರಿ ಅಧಿನಿಯಮ, 1965ರ 32 (1)ನೇ ಪ್ರಕರಣದ ಮೇರೆಗೆ ಘೋಷಣೆಯನ್ನು (ಅಧಿಸೂಚನೆ ಸಂಖ್ಯೆ .. . . . . . . . ದಿನಾಂಕ . . . . . . . . . ವನ್ನು ನೋಡಿ) ಮಾಡಿರುವುದರಿಂದ;

ಈಗ, ಕರ್ನಾಟಕ ನೀರಾವರಿ ಅಧಿನಿಯಮ, 1965ರ 32 (2)ನೇ ಪ್ರಕರಣದ ಮೇರೆಗೆ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನೀರಾವರಿ ಅಧಿಕಾರಿಯಾದ . . . . . . . . . . . ಎಂಬ ನಾನು ಸದರಿ ಅಧಿನಿಯಮದ

27ನೇ ಪ್ರಕರಣದ ಮೇರೆಗೆ ರಚಿಸಲಾಗಿರುವ ಸಮಿತಿಯೊಂದಿಗೆ ಸಮಾಲೋಚಿಸಿ ಮತ್ತು . . . . . . . . ಜಿಲ್ಲೆಯ ಜಿಲ್ಲಾಧಿಕಾರಿಯವರ ಅನುಮೋದನೆ ಪಡೆದು ಈ ಮುಂದಿನ ಅನುಸೂಚಿಯಲ್ಲಿ 4ನೇ ಅಂಕಣದಲ್ಲಿ ಬೆಳೆಯಬಹುದಾದ ಬೆಳೆಗಳ ವಿಧಗಳಿಗೆ ಸಂಬಂಧಿಸಿದಂತೆ, 3ನೇ ಅಂಕಣದಲ್ಲಿನ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಗಳು ಮತ್ತು ಅದರ 5 ಮತ್ತು 6ನೇ ಅಂಕಣಗಳಲ್ಲಿನ ಸಂವಾದಿ ನಮೂನೆಗಳಲ್ಲಿ ಬಿತ್ತನೆ ಮತ್ತು ನಾಟಿಗೆ ಬೇಕಾಗುವ ಅವಧಿಯನ್ನು ಈ ಮೂಲಕ ನಿರ್ದಿಷ್ಟಪಡಿಸಿದ್ದೇನೆ.

**ಅನುಸೂಚಿ**

| ಕ್ರ.ಸಂ. | ನೀರಾವರಿ ಕಾಮಗಾರಿಯ | ಭೂಮಿಯ ವಿವರಣೆ | ಬೆಳೆಯ ವಿಧ ಅವಧಿ | ಬಿತ್ತನೆ ಅವಧಿ | ನಾಟಿಯ ಹೆಸರು |
|---|---|---|---|---|---|
| 1 | 2 | 3 | 4 | 5 | 6 |

1. ನಮೂನೆ 16ನ್ನು ಜಿಎಸ್‌ಆರ್ 272, ದಿನಾಂಕ 28.08.1978ರ ಮೂಲಕ 7.9.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**ಲೋಕೋಪಯೋಗಿ ಸಚಿವಾಲಯ (ನೀರಾವರಿ)**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965**

**ಎಸ್‌ಒ 3724.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 1ನೇ ಪ್ರಕರಣದ (3)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1966ರ ಜನವರಿ ಮೊದಲ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

[(ಸಂ.ಪಿಡಬ್ಲ್ಯೂಡಿ 81 ಎಲ್‌ಬಿಡಬ್ಲ್ಯೂ 65]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಎಂ. ಚನ್ನಪ್ಪ,**
ಉಪ ಕಾರ್ಯದರ್ಶಿ.

**ಲೋಕೋಪಯೋಗಿ ಸಚಿವಾಲಯ (ನೀರಾವರಿ)**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965**

**ಎಸ್‌ಒ 3718.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಉಪ ಪ್ರಕರಣದ ಮೇರೆಗೆ, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ಯಾವುದೇ ಬಾವಿಯನ್ನು ನಿರ್ಮಿಸಲು ಪೂರ್ವಾನುಮತಿ ಪಡೆಯಬೇಕಾದ ಪ್ರಾಧಿಕಾರಿಯನ್ನಾಗಿ ನೀರಾವರಿಯ ಮುಖ್ಯ ಇಂಜಿನಿಯರನಿಗೆ ಈ ಮೂಲಕ ಅಧಿಕಾರ ನೀಡುತ್ತದೆ.

[ಸಂ.ಪಿಡಬ್ಲ್ಯೂಡಿ 63 ಎಲ್ ಬಿಡಬ್ಲ್ಯೂ 642]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ.ಚನ್ನಪ್ಪ,**
ಉಪ ಕಾರ್ಯದರ್ಶಿ.

**ಲೋಕೋಪಯೋಗಿ ಸಚಿವಾಲಯ (ನೀರಾವರಿ)**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965**

**ಎಸ್‌ಓ 3719.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 5ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಉಪ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈ ಮೂಲಕ ಅಧಿಕಾರ ನೀಡಿದೆ.

[ಸಂ.ಪಿಡಬ್ಲ್ಯೂಡಿ 63 ಎಲ್‌ಬಿಡಬ್ಲ್ಯೂ 643]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ.ಚನ್ನಪ್ಪ,**
ಉಪ ಕಾರ್ಯದರ್ಶಿ.

**ಲೋಕೋಪಯೋಗಿ ಸಚಿವಾಲಯ (ನೀರಾವರಿ)**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965**

**ಎಸ್‌ಓ 3721.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 52ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ನೀರಾವರಿಯ ಮುಖ್ಯ ಇಂಜಿನಿಯರ್‌ಗೆ ಸದರಿ ಪ್ರಕರಣದ ಉದ್ದೇಶಗಳಿಗಾಗಿ ಈ ಮೂಲಕ ಅಧಿಕಾರ ನೀಡಿದೆ.

[ಸಂ.ಪಿಡಬ್ಲ್ಯೂಡಿ 63 ಎಲ್‌ಬಿಡಬ್ಲ್ಯೂ 644]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ.ಚನ್ನಪ್ಪ,**
ಉಪ ಕಾರ್ಯದರ್ಶಿ.

## ಲೋಕೋಪಯೋಗಿ ಸಚಿವಾಲಯ (ನೀರಾವರಿ)

### ಅಧಿಸೂಚನೆ

### ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965

**ಎಸ್‌ಓ 3722.**– ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮುಂದಿನ ಕೋಷ್ಟಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ, ಸದರಿ ಕೋಷ್ಟಕದ (2)ನೇ ಅಂಕಣದ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರದತ್ತವಾದ ಮತ್ತು ವಿಧಿಸಲಾದ ಒಬ್ಬ ನೀರಾವರಿ ಅಧಿಕಾರಿಯ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಈ ಮೂಲಕ ನಿಹಿತಗೊಳಿಸುತ್ತದೆ.

**ಕೋಷ್ಟಕ**

| (1) | (2) |
|---|---|
| ನೀರಾವರಿಯ ಮುಖ್ಯ ಇಂಜಿನಿಯರ್ | 5(2), 6, 46 ಮತ್ತು 52ನೇ ಪ್ರಕರಣಗಳು |
| ನೀರಾವರಿ ಕಾಮಗಾರಿಯ ಪ್ರಭಾರದಲ್ಲಿರುವ ಅಧೀಕ್ಷಕ ಇಂಜಿನಿಯರ್ | 12, 13 ಮತ್ತು 53ನೇ ಪ್ರಕರಣಗಳು ಮತ್ತು ಭಾರಿ ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ 27, 28, 32 ಮತ್ತು 49ನೇ ಪ್ರಕರಣಗಳು |
| ನೀರಾವರಿ ಕಾಮಗಾರಿಯ ಪ್ರಭಾರದಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರ್ | 7, 8, 15, 18, 19, 21, 22, 23, 24, 25, 26, 31, 33, 35, 46, 47, 48, 50, 51, 56, 63 ಮತ್ತು 64ನೇ ಪ್ರಕರಣಗಳು ಮತ್ತು ಭಾರಿ ನೀರಾವರಿ ಕಾಮಗಾರಿಗಳನ್ನು ಹೊರತುಪಡಿಸಿದಂಥ ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ 27, 28 ಮತ್ತು 32 ಮತ್ತು 49ನೇ ಪ್ರಕರಣಗಳು. |
| ನೀರಾವರಿ ಕಾಮಗಾರಿಯ ಪ್ರಭಾರದಲ್ಲಿರುವ ಸಹಾಯಕ ಇಂಜಿನಿಯರ್ | 40ನೇ ಪ್ರಕರಣ. |

ಈ ಅಧಿಸೂಚನೆಯ ಉದ್ದೇಶಗಳಿಗಾಗಿ, "ಭಾರಿ ನೀರಾವರಿ ಕಾಮಗಾರಿ" ಎಂದರೆ, ಐದು ಕೋಟಿ ರೂ.ಗಳಿಗೂ ಮೀರಿದ ವೆಚ್ಚದ ಒಂದು ನೀರಾವರಿ ಕಾಮಗಾರಿ.

[ಸಂ.ಪಿಡಬ್ಲ್ಯೂಡಿ 63 ಎಲ್‌ಬಿಡಬ್ಲ್ಯೂ 64–5]

## ಲೋಕೋಪಯೋಗಿ ಸಚಿವಾಲಯ (ನೀರಾವರಿ)

### ಅಧಿಸೂಚನೆ

### ಬೆಂಗಳೂರು, ದಿನಾಂಕ 31ನೇ ಡಿಸೆಂಬರ್, 1965

**ಎಸ್‌ಓ 3723.**– ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ 40ನೇ ಪ್ರಕರಣದ ಮೇರೆಗಿನ ನೀರಾವರಿ ಅಧಿಕಾರಿಯ ಅಧಿಕಾರವನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡುವುದರ ಜೊತೆಗೆ 41ನೇ ಪ್ರಕರಣದ ಮೂಲಕ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಈ ಮೂಲಕ ಅಧಿಕಾರ ನೀಡಿದೆ.

[ಸಂ.ಪಿಡಬ್ಲ್ಯೂಡಿ 63 ಎಲ್‌ಬಿಡಬ್ಲ್ಯೂ 64–6]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ. ಚನ್ನಪ್ಪ**
ಉಪ ಕಾರ್ಯದರ್ಶಿ.

## ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ

### ಅಧಿಸೂಚನೆ

**ಬೆಂಗಳೂರು, ದಿನಾಂಕ 25 26ನೇ ಸೆಪ್ಟೆಂಬರ್, 1972**

**ಜಿಎಸ್‌ಆರ್ 316.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರದ ನೀರಾವರಿ ಯೋಜನೆಗಳ ಮುಖ್ಯ ಇಂಜಿನಿಯರುಗಳನ್ನು ಅವರವರ ಅಧಿಕಾರ ವ್ಯಾಪ್ತಿಗಳಲ್ಲಿ ಕರ್ನಾಟಕ ಸರ್ಕಾರವು, ಕರ್ನಾಟಕ ನೀರಾವರಿ ಅಧಿನಿಯಮ, 1965ರ 46ನೇ ಪ್ರಕರಣದ ಮೇರೆಗೆ, ನೀರಾವರಿಗಾಗಿ ನೈಸರ್ಗಿಕ ತೊರೆಗಳಿಂದ ನೀರನ್ನು ಬಳಸಲು ಅನುಮತಿ ನೀಡುವ ಅಧಿಕಾರ ಹೊಂದಿರುವ ನೀರಾವರಿ ಅಧಿಕಾರಿಗಳು ಎಂದು ಈ ಮೂಲಕ ಗೊತ್ತುಪಡಿಸುತ್ತದೆ.

[ಸಂ.ಪಿಡಬ್ಲ್ಯೂಡಿ 41 ಎಲ್‌ಬಿಡಬ್ಲ್ಯೂ 70]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಬಿ.ಎನ್. ಜನಾರ್ಧನ**
ಸರ್ಕಾರದ ಉಪ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ನೀರಾವರಿ).

## ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ

### ಅಧಿಸೂಚನೆ

**ಬೆಂಗಳೂರು, ದಿನಾಂಕ 15ನೇ ಮೇ, 1968**

**ಎಸ್‌ಓ 1315.**- ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 50ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕೆಳಗಿನ ಅನುಸೂಚಿಯ (3)ನೇ ಅಂಕಣದಲ್ಲಿ ನಮೂದಿಸಿರುವ ಅಂತರಗಳನ್ನು ಅದರ ಅಂಕಣ (2)ರ ಸಂವಾದಿ ನಮೂದುಗಳಲ್ಲಿ ನಮೂದಿಸಿರುವ ನೀರಾವರಿ ಕಾಮಗಾರಿಗಳ ಎಲ್ಲೆಗಳಿಂದ ಯಾವ ಅಂತರಗಳ ಒಳಗೆ ನೀರಾವರಿ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ಯಾವುದೇ ಹೊಸ ಬಾವಿಯನ್ನು ತೋಡತಕ್ಕದ್ದಲ್ಲವೋ ಆ ಅಂತರಗಳೆಂದು ನಿರ್ದಿಷ್ಟಪಡಿಸುತ್ತದೆ.

**ಅನುಸೂಚಿ**

| ಕ್ರ.ಸಂ. | ನೀರಾವರಿ ಕಾಮಗಾರಿಗಳು | ಅಂತರ |
|---|---|---|
| **1** | **2** | **3** |
| 1. | 1000 ಎಕರೆಗಳಿಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವ ನೀರಾವರಿ ಕಾಮಗಾರಿಗಳು | ಗರಿಷ್ಠ ನೀರಿನ ಮಟ್ಟದಲ್ಲಿ ನೀರಿನ ಹರಿವಿನಿಂದ ಆವೃತ್ತವಾದ ಅಂತರ ಮತ್ತು ಅದರಿಂದ 300 ಅಡಿ ಅಂತರ |
| 2. | 1000 ಎಕರೆಗಳಿಗಿಂತ ಮೀರದ ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವ ನೀರಾವರಿ ಕಾಮಗಾರಿಗಳು | ಗರಿಷ್ಠ ನೀರಿನ ಮಟ್ಟದಲ್ಲಿ ಮತ್ತು ಅಲ್ಲಿಂದ 150 ಅಡಿ ಅಂತರ |
| 3. | ಕಾಲುವೆಗಳು | 1. 500 ಕ್ಯೂಸೆಕ್ಸ್‌ಗಿಂತ ಹೆಚ್ಚಿನ ನೀರು ಬಿಡುಗಡೆ ಮಾಡುವ ಸಾಮರ್ಥ್ಯ ಹೊಂದಿದ ಮುಖ್ಯ ಕಾಲುವೆಯ ಸಂಬಂಧದಲ್ಲಿ .. 500 ಅಡಿ |
| | | 2. 100 ಕ್ಯೂಸೆಕ್ಸ್‌ನಿಂದ 500 ಕ್ಯೂಸೆಕ್ಸ್‌ವರೆಗಿನ ನೀಡು ಬಿಡುಗಡೆ ಮಾಡುವ ಸಾಮರ್ಥ್ಯ ಹೊಂದಿದ ಶಾಖಾ ಕಾಲುವೆಯ ಸಂಬಂಧದಲ್ಲಿ 100 .. ಅಡಿ |

| | | |
|---|---|---|
| | | 3. 10 ಕ್ಯೂಸೆಕ್ಸ್‌ಗಿಂತ ಹೆಚ್ಚು 100 ಕ್ಯೂಸೆಕ್ಸ್‌ವರೆಗೆ ನೀರು ಬಿಡುವ ಸಾಮರ್ಥ್ಯ ಹೊಂದಿದ ಸಂಬಂಧದಲ್ಲಿ ... 50 ಅಡಿ |
| | | 4. 10 ಕ್ಯೂಸೆಕ್ಸ್ ನೀರು ಬಿಡುವ ಸಾಮರ್ಥ್ಯ ಹೊಂದಿದ ಉಪ ಕಾಲುವೆಗಳ ಸಂಬಂಧದಲ್ಲಿ ... 25 ಅಡಿ:<br><br>ಪರಂತು,<br>(ಎ) ನಿರಂತರ ನೀರಿರುವ ಕಾಲುವೆಯ ವಲಯದಲ್ಲಿ ಜಮೀನು ಎತ್ತರದಲ್ಲಿರುವ ಕಾರಣದಿಂದಾಗಿ ನೀರಾವರಿಗೊಳಪಡಿಸಲು ಮತ್ತು ಕಾಲುವೆಯಿಂದ ನೀರು ಹಾಯಿಸಲು ಸಾಧ್ಯವಾಗದ ಕಾರಣದಿಂದಾಗಿ ನೀರಾವರಿಗೊಳಪಡಿಸಲು ಸಾಧ್ಯವಾಗದ ಪ್ರದೇಶವನ್ನು ಹೊರತುಪಡಿಸಿ, ಆದರೆ, ಯಾವ ಬಗೆಯ ಬೆಳೆ ಬೆಳೆಯಲಾಗುವುದೋ ಆ ಬೆಳೆಗೆ ನಿಯಮಿಸಲಾದ ನೀರು ದರದ ಅರ್ಧದಷ್ಟು ಮೊಬಲಗನ್ನು ಸಂದಾಯ ಮಾಡಬೇಕೆಂಬುದಕ್ಕೆ ಒಳಪಟ್ಟು, ನೀರು ಪೂರೈಕೆ ಪ್ರದೇಶದಲ್ಲಿ ಬರುವ ಯಾವುದೇ ಪ್ರದೇಶದಲ್ಲಿ ಯಾವುದೇ ಹೊಸ ಬಾವಿಯನ್ನು ತೋಡತಕ್ಕದ್ದಲ್ಲ.<br><br>(ಬಿ) ನಿರಂತರ ನೀರಿಲ್ಲದ ಕಾಲುವೆಯ ವಲಯದಲ್ಲಿ, ಬಾವಿಯನ್ನು ತೋಡಿದರೆ, ಆಗ, ಅದು, ಮೇಲೆ ತಿಳಿಸಲಾದ ತರದಲ್ಲಿ ಇರಬೇಕೆಂಬ ಮತ್ತು ಕಾಲುವೆ ಎಲ್ಲೆಯಿಂದ ಬಾವಿಯ ಸ್ಥಳಕ್ಕೆ ಎಷ್ಟು ಅಂತರವಿರಬೇಕೆಂಬ ಮತ್ತು ನೀರು ಪೂರೈಸಲಾದ ಬೆಳೆಯ ಬಗೆಗೆ ಪೂರ್ಣ ನೀರು ದರವನ್ನು ಸಂದಾಯ ಮಾಡಬೇಕೆಂಬ ಷರತ್ತಿಗೆ ಒಳಪಡತಕ್ಕದ್ದು. |

[ಸಂಖ್ಯೆ.ಪಿಡಬ್ಲ್ಯೂಡಿ 42 ಎಲ್‌ಬಿಡಬ್ಲ್ಯೂ 66 – II]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ. ಚನ್ನಪ್ಪ**
ಉಪ ಕಾರ್ಯದರ್ಶಿ.

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 20ನೇ ಡಿಸೆಂಬರ್, 1973**

ಜಿಎಸ್‌ಆರ್ 322:– ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 71ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ನೀರಾವರಿ ನಿಯಮಗಳು, 1965ನ್ನು ಮತ್ತಷ್ಟು ತಿದ್ದುಪಡಿ ಮಾಡುತ್ತದೆ. ಸದರಿ ನಿಯಮಗಳ ಕರಡನ್ನು, ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ, 1973ರ 20ನೇ ಸೆಪ್ಟೆಂಬರ್ ದಿನಾಂಕದ ಕರ್ನಾಟಕ ರಾಜಪತ್ರದ ಭಾಗ– IV ಪ್ರಕರಣ 2ಸಿ (1) ರಲ್ಲಿ ಅಧಿಸೂಚನೆ ಕ್ರ.ಸಂ. ಜಿಎಸ್‌ಆರ್ 199 (ಪಿಡಬ್ಲ್ಯುಡಿ 41 ಎಲ್‌ಬಿಡಬ್ಲ್ಯು 70, ದಿನಾಂಕ 24ನೇ ಜುಲೈ 1973) ರಲ್ಲಿ ಪ್ರಕಟಿಸಲಾಗಿತ್ತು.

**1. ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ನೀರಾವರಿ (ತಿದ್ದುಪಡಿ) ನಿಯಮಗಳು, 1973 ಎಂದು ಕರೆಯತಕ್ಕದ್ದು.

(2) ಅವು ಕೂಡಲೇ ಜಾರಿಗೆ ಬರತಕ್ಕದ್ದು.

**2. ನಮೂನೆ 15ರ ತಿದ್ದುಪಡಿ.-** ಕರ್ನಾಟಕ ನೀರಾವರಿ ನಿಯಮಗಳು, 1965ಕ್ಕೆ ಅನುಬಂಧಿಸಲಾದ ನಮೂನೆಗಳಲ್ಲಿ, ನಮೂನೆ 15ರಲ್ಲಿ "ಸೂಚನೆಗಳು" ಶೀರ್ಷಿಕೆಯ ಪ್ಯಾರಾ 7ರಲ್ಲಿ "ಒಂದು ವರ್ಷ" ಎಂಬ ಪದಗಳಿಗೆ, "ಐದು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

[ಸಂ.ಪಿಡಬ್ಲ್ಯುಡಿ 41 ಎಲ್‌ಬಿಡಬ್ಲ್ಯು 70]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಸ್.ಕೆ. ಮೋಹನ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 18 /22ನೇ ಡಿಸೆಂಬರ್, 1973**

ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ ಸಂಖ್ಯೆ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಅಧಿಸೂಚನೆ ಕ್ರಮಾಂಕ ಎಸ್‌ಓ 3722, ದಿನಾಂಕ 31ನೇ ಡಿಸೆಂಬರ್, 1965ನ್ನು ಮಾರ್ಪಾಡುಗೊಳಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಸದರಿ ಅಧಿನಿಯಮದ 5ನೇ ಪ್ರಕರಣದ (2)ನೇ ಉಪಪ್ರಕರಣ, 6ನೇ ಪ್ರಕರಣ ಮತ್ತು 52ನೇ ಪ್ರಕರಣದ ಮೇರೆಗೆ ಕರ್ನಾಟಕ ರಾಜ್ಯದಾದ್ಯಂತ ಒಬ್ಬ ನೀರಾವರಿ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ರಾಜ್ಯದಲ್ಲಿನ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ನಲ್ಲಿ ನಿಹಿತಗೊಳಿಸುತ್ತದೆ.

[ಸಂ.ಪಿಡಬ್ಲ್ಯುಡಿ 73 ಎಲ್‌ಬಿಡಬ್ಲ್ಯು 72]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಸ್.ಕೆ. ಮೋಹನ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ
(ತಾಂತ್ರಿಕ).

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಆದೇಶ**

**ಬೆಂಗಳೂರು, ದಿನಾಂಕ 18 /22ನೇ ಡಿಸೆಂಬರ್, 1973**

ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 52ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಅಧಿಸೂಚನೆ ಕ್ರಮಾಂಕ ಎಸ್‌ಓ 3722, ದಿನಾಂಕ 31ನೇ ಡಿಸೆಂಬರ್, 1965ನ್ನು ಮಾರ್ಪಾಡುಗೊಳಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ರಾಜ್ಯದಾದ್ಯಂತ ಸದರಿ ಪ್ರಕರಣದ ಉದ್ದೇಶಗಳಿಗಾಗಿ ರಾಜ್ಯದಲ್ಲಿನ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ರವರಿಗೆ ಅಧಿಕಾರ ನೀಡುತ್ತದೆ.

[ಸಂ.ಪಿಡಬ್ಲ್ಯೂಡಿ 73 ಎಲ್‌ಬಿಡಬ್ಲ್ಯೂ 72]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಸ್.ಕೆ. ಮೋಹನ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ
(ತಾಂತ್ರಿಕ).

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 18/22ನೇ ಡಿಸೆಂಬರ್, 1973**

ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಅಧಿಸೂಚನೆ ಸಂಖ್ಯೆ ಎಸ್‌ಓ 3722, ದಿನಾಂಕ 31ನೇ ಡಿಸೆಂಬರ್, 1965ನ್ನು ಮಾರ್ಪಾಡುಗೊಳಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಇದರೊಂದಿಗೆ ಅನುಬಂಧಿಸಲಾದ 1ನೇ ಕೋಷ್ಟಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯದಲ್ಲಿನ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ರಲ್ಲಿ ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ, ಇದರೊಂದಿಗೆ ಅನುಬಂಧಿಸಲಾದ IIನೇ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾದಂತಹ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸದರಿ ಕೋಷ್ಟಕದ (2)ನೇ ಅಂಕಣದಲ್ಲಿನ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ನೀರಾವರಿ ಅಧಿಕಾರಿಯವರಲ್ಲಿ ಪ್ರದತ್ತಗೊಳಿಸಿದ ಅಧಿಕಾರಗಳನ್ನು ನಿಹಿತಗೊಳಿಸುತ್ತದೆ.

**ಕೋಷ್ಟಕ 1**

| ಅಧಿಕಾರಿಗಳ ಪದನಾಮ | ಅಧಿನಿಯಮದ ಉಪಬಂಧಗಳು |
|---|---|
| 1. ನೀರಾವರಿ ಯೋಜನೆಯ ಪ್ರಭಾರದಲ್ಲಿರುವ ಅಧೀಕ್ಷಕ ಇಂಜಿನಿಯರ್‌ಗಳು. | 12,13, 27, 32 ಮತ್ತು 53. |
| 2. ನೀರಾವರಿ ಯೋಜನೆಯ ಪ್ರಭಾರದಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರುಗಳು. | 7,8,15,31,33,35,46,47,48,49 [1][XXX][1] 51,56, 63 ಮತ್ತು 64. |
| 3. ನೀರಾವರಿ ಯೋಜನೆಯ ಪ್ರಭಾರದಲ್ಲಿರುವ ಸಹಾಯಕ ಇಂಜಿನಿಯರ್‌ಗಳು . | 40 ಮತ್ತು 50<br>48, 49 [1][XXX][1] 51, 56, 63 |

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 73 ಎಲ್‌ಬಿಡಬ್ಲ್ಯೂ 72, ದಿನಾಂಕ 23ನೇ ಸೆಪ್ಟೆಂಬರ್, 1974 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

## ಕೋಷ್ಟಕ - II

**ನೀರಾವರಿ ಯೋಜನೆಯ ಹೆಸರು:-**

1. (ಎ) ತುಂಗಭದ್ರಾ ಯೋಜನೆ, (ಬಿ) ಭದ್ರಾ ಯೋಜನೆ, (ಸಿ) ಘಟಪ್ರಭಾ ಯೋಜನೆ, (ಡಿ) ಮಲಪ್ರಭಾ ಯೋಜನೆ, (ಇ) ಕಬಿನಿ ಯೋಜನೆ, (ಎಫ) ಹೇಮಾವತಿ ಯೋಜನೆ, (ಜಿ) ಹಾರಂಗಿ ಯೋಜನೆ, (ಹೆಚ್) ಕೃಷ್ಣಾ ಮೇಲ್ದಂಡೆ ಯೋಜನೆ, (ಐ) ಕೃಷ್ಣರಾಜಸಾಗರ, (ಜೆ) ತುಂಗಾ ಅಣೆಕಟ್ಟು ಯೋಜನೆ, (ಕೆ) ರಾಜೋಲಿ ಬಂದ್ ಮಾರ್ಗ ಪಲ್ಲಟ ಯೋಜನೆ, (ಎಲ್) ವಿಜಯನಗರ ಕಾಲುವೆಗಳು, (ಎಂ) ಹಗರಿಬೊಮ್ಮನಹಳ್ಳಿ ಯೋಜನೆ.

[ಸಂ. ಪಿಡಬ್ಲ್ಯುಡಿ 73 ಎಲ್‌ಬಿಡಬ್ಲ್ಯು 72]

### ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ

### ಅಧಿಸೂಚನೆ

### ಬೆಂಗಳೂರು, ದಿನಾಂಕ 28ನೇ ಫೆಬ್ರವರಿ 1974

ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಅಧಿಸೂಚನೆ ಸಂಖ್ಯೆ. ಎಸ್‌ಓ 3722 ದಿನಾಂಕ 31ನೇ ಡಿಸೆಂಬರ್, 1965ನ್ನು ಮಾರ್ಪಾಡುಗೊಳಿಸಿ, ಕರ್ನಾಟಕ ಸರ್ಕಾರವು, ಈ ಕೆಳಗಿನ ಕೋಷ್ಟಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ (ಎಸ್‌ಓ 358, ದಿನಾಂಕ 18/22ನೇ ಡಿಸೆಂಬರ್ 1973ರಲ್ಲಿ ನಿರ್ದಿಷ್ಟಪಡಿಸಿದ ನೀರಾವರಿ ಯೋಜನೆಗಳ ಸಂಬಂಧದಲ್ಲಿನ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಅಧಿಕಾರಿಗಳನ್ನು ಹೊರತುಪಡಿಸಿ) ಅವರು ಅಧಿಕಾರ ವ್ಯಾಪ್ತಿ ಹೊಂದಿದ ಪ್ರದೇಶಗಳಲ್ಲಿ ಸದರಿ ಕೋಷ್ಟಕದ (2)ನೇ ಅಂಕಣದಲ್ಲಿರುವ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ಸದರಿ ಅಧಿನಿಯಮದ ಉಪಬಂಧಗಳ ಮೇರೆಗಿನ ಅಧಿಕಾರಗಳನ್ನು ಪ್ರದತ್ತಗೊಳಿಸಲಾಗಿದೆ ಮತ್ತು ಕರ್ತವ್ಯಗಳನ್ನು ವಿಧಿಸಲಾಗಿದೆ.

**ಕೋಷ್ಟಕ**

| | ಅಧಿಕಾರಿಗಳ ಪದನಾಮ | ಅಧಿನಿಯಮದ ಉಪಬಂಧಗಳು |
|---|---|---|
| | (1) | (2) |
| 1. | ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಅಧೀಕ್ಷಕ ಇಂಜಿನಿಯರುಗಳು. | 12,13 ಮತ್ತು 53 |
| 2. | ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರುಗಳು. | 7,8,15,27,28,31,32,33,35,46, 47,48,49 [1][XXX][1] 51, 56, 63 ಮತ್ತು 64 |
| 3. | ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಸಹಾಯಕ ಇಂಜಿನಿಯರುಗಳು. | 40 ಮತ್ತು 80 |

[ಸಂ ಪಿಡಬ್ಲ್ಯೂಡಿ 73 ಎಲ್‌ಬಿಡಬ್ಲ್ಯೂ 72]

1. ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 73 ಎಲ್‌ಬಿಡಬ್ಲ್ಯು 72, ದಿನಾಂಕ 23ನೇ ಸೆಪ್ಟೆಂಬರ್, 1974 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**
**ಅಧಿಸೂಚನೆ**
**ಬೆಂಗಳೂರು, ದಿನಾಂಕ 15ನೇ ಏಪ್ರಿಲ್, 1974**

ಕರ್ನಾಟಕ ನೀರಾವರಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 16) 3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ರಾಜ್ಯದಲ್ಲಿನ ನೀರಾವರಿ ಕಾಮಗಾರಿಗಳ ಪ್ರಭಾರದಲ್ಲಿರುವ ಸಹಾಯಕ ಇಂಜಿನಿಯರುಗಳಲ್ಲಿ, ಸದರಿ ಅಧಿನಿಯಮದ 32ನೇ ಪ್ರಕರಣದ (4)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ನೀರಾವರಿ ಅಧಿಕಾರಿಯು ಹೊಂದಿರತಕ್ಕ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿಹಿತಗೊಳಿಸಿದೆ.

[ಸಂ. ಪಿಡಬ್ಲ್ಯುಡಿ 115 ಎಲ್ ಬಿ ಡಬ್ಲ್ಯು 69]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎಸ್.ಕೆ.ಮೋಹನ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ.

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**
**ಆದೇಶ**
**ಬೆಂಗಳೂರು, ದಿನಾಂಕ 15ನೇ ಏಪ್ರಿಲ್, 1974**

ಕರ್ನಾಟಕ ನೀರಾವರಿ ಅಧಿನಿಯಮ, 1965 ರ(1965ರ ಕರ್ನಾಟಕ ಅಧಿನಿಯಮ 16) 2ನೇ ಪ್ರಕರಣದ (ಸಿ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ರೆವಿನ್ಯೂ ಉಪವಿಭಾಗದ ಪ್ರಭಾರದಲ್ಲಿರುವ ಸಹಾಯಕ ಕಮಿಷನರುಗಳನ್ನು ಸದರಿ ಅಧಿನಿಯಮದ 16ನೇ ಪ್ರಕರಣದ ಮೇರೆಗಿನ ಜಿಲ್ಲಾಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ನೇಮಕ ಮಾಡುತ್ತದೆ.

[ಸಂ.ಪಿಡಬ್ಲ್ಯುಡಿ 72 ಎಲ್‌ಬಿಡಬ್ಲ್ಯು 72]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎಸ್.ಕೆ.ಮೋಹನ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ.

The above Translation of the Karnataka Irrigation Act, 1965 (16 of 1965) and Karnataka Irrigation Rules, 1965 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಪಿ.ಆರ್.870

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.